RAMRAJ ©

ಸಂಚಿಕೆ 7 ● ಸಂಪುಟ 2 ● ಜುಲೈ 2024 ● ಬೆಲೆ ರೂ. 18/-

# ಬಿಳುಪು

ಕನ್ನಡ ಮಾಸಿಕ

ಕನ್ನಡ ಮಾಸಿಕ



## ಆಸೆ
ವಿಶೇಷಾಂಕ




LINEN PARK®

SHIRTS • TROUSERS • FABRICS

By

RAMRAJ

# Breeze Through Summer in Style

Beat the heat in style with the lightweight & breathable Linen Park, pure linen shirts from Ramraj.



SCAN QR CODE FOR STORE LOCATION

Available at Ramraj Showrooms & All leading textile shops | Shop online @ www.ramrajcotton.in

RAMRAJ ©

ಆಸೆಗಳು ಎಂತಹವುಗಳಾಗಿರಬೇಕು, ಹೇಗಿರಬೇಕು?
ಯಾವುದಕ್ಕೆಲ್ಲ ಆಸೆ ಪಡಬೇಕು?
ಯಾವ್ಯಾವ ಆಸೆಗಳನ್ನು ಕೈಬಿಡಬೇಕು?
ಇತ್ಯಾದಿಗಳನ್ನು ತಿಳಿಸಿಕೊಡುವ



# ಆಸೆ
## ವಿಶೇಷಾಂಕ

ಎನ್ನುವ ಈ ಸುಮಧುರ ಸಂಚಿಕೆಯನ್ನು ನಿಮಗೆ ನೀಡಲು
ನಾವು ಹೆಮ್ಮೆ ಪಡುತ್ತೇವೆ.

# ಗೌರವಾನ್ವಿತರಿಗೆ...

**ನಮಸ್ಕಾರ.**

‘ಆಸೆಗಳೇ ಇಲ್ಲದ ಮನಸ್ಸೂ ಶಬ್ದವಿಲ್ಲದ ಕಡಲೂ ಜಗತ್ತಿನಲ್ಲಿ ಇಲ್ಲವೇ ಇಲ್ಲ’ ಎನ್ನುವುದು ನಮ್ಮ ಹಿರಿಯರು ಅನುಭವ ಪೂರ್ವಕವಾಗಿ ಹೇಳಿರುವ ಮಾತು. ಪ್ರತಿಯೊಬ್ಬರ ಜೀವನದಲ್ಲೂ ಚಿಕ್ಕದೋ ದೊಡ್ಡದೋ ಯಾವುದೋ ಒಂದು ಬಗೆಯ ಆಸೆಗಳು ಸುಳಿದಾಡುತ್ತಲೇ ಇರುತ್ತವೆ. ಕಡಲ ತೀರದಲ್ಲಿ ನಿಂತು ಕಾಲಿಗೆ ಬಂದು ಅಪ್ಪಳಿಸುವ ಅಲೆಗಳನ್ನು ಸುಮ್ಮನೆ ನೋಡುತ್ತಿರುವವರಿಗೆ ಯಾವುದೇ ಸಮಸ್ಯೆಯೂ ಇಲ್ಲ. ಅದೇ ರೀತಿ ನಮ್ಮ ಅರ್ಹತೆ ಏನೆಂಬುದನ್ನು ಅರಿತು, ನಮ್ಮ ಅಗತ್ಯಗಳನ್ನು ಮನಗಂಡು, ನಮ್ಮ ಶ್ರಮ ಹಾಗೂ ಪ್ರಯತ್ನಗಳ ಮೂಲಕ ಪೂರೈಸಿಕೊಳ್ಳುವ ಆಸೆಗಳು ನಮ್ಮ ಜೀವನವನ್ನು ಸುಂದರವಾಗಿ ಬದಲಾಯಿಸುತ್ತವೆ. ಅದೇ ಸಮಯದಲ್ಲಿ ದೊಡ್ಡ ಅಲೆಯೊಳಗೆ ಮುಳುಗದಿರುವುದೂ, ದುರಾಸೆಯೆಂಬ ಬಲೆಯೊಳಗೆ ಸಿಲುಕಿಕೊಳ್ಳದಿರುವುದೂ ತುಂಬಾ ಅಗತ್ಯ.

ಸ್ವಾರ್ಥದಿಂದ ತುಂಬಿದ ಆಸೆಗಳ ಬಗೆಗೆ ಒಂದು ಹಾಸ್ಯಭರಿತವಾದ ಕಥೆಯುಂಟು...

“ಒಂದು ದೊಡ್ಡ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಮ್ಯಾನೇಜರ್, ಸೂಪರ್ ವೈಸರ್, ಮಾರಾಟ ಪ್ರತಿನಿಧಿ ಈ ಮೂವರೂ ಒಟ್ಟಿಗೆ ಕುಳಿತು ಊಟ ಮಾಡುತ್ತಿದ್ದರು. ‘ಎಷ್ಟು ಅಂಗಡಿಗಳಿಗೆ ಭೇಟಿ ನೀಡಿ ಮಾತನಾಡಿದರೂ ದೊಡ್ಡ ಪ್ರಮಾಣದಲ್ಲಿ ಆರ್ಡರ್‌ಗಳು ದೊರಕುತ್ತಲೇ ಇಲ್ಲ’ ಎಂದು ಬೇಸರ ಹಾಗೂ ನಿರಾಶೆಯ ಧ್ವನಿಯಲ್ಲಿ ಅಲವತ್ತುಕೊಂಡ ಮಾರಾಟ ಪ್ರತಿನಿಧಿ. ‘ಇಲ್ಲಿ ಯಾರೊಬ್ಬರೂ ತಮ್ಮ ತಮ್ಮ ಕೆಲಸಗಳನ್ನು ಸರಿಯಾಗಿ ಮಾಡುವುದಿಲ್ಲ. ಏಕೆ ಸರಿಯಾಗಿ ಕೆಲಸ ಮಾಡುತ್ತಿಲ್ಲ ಎಂದು ಕೇಳಿದರೆ ಒಬ್ಬೊಬ್ಬರೂ ಒಂದೊಂದು ಸಬೂಬು ಹೇಳುತ್ತಾರೆ’ ಎಂದು ಹಲುಬಿದ ಸೂಪರ್‌ವೈಸರ್. ‘ಕೆಲಸ ಮಾಡುವುದಕ್ಕೇ ಗೊತ್ತಿಲ್ಲದ ನಿಮ್ಮನ್ನೆಲ್ಲ ಇಟ್ಟುಕೊಂಡು ನಾನು ಏನು ತಾನೇ ಮಾಡುತ್ತೇನೋ ತಿಳಿಯುತ್ತಿಲ್ಲ’ ಎಂದು ಮ್ಯಾನೇಜರ್ ಸಿಟ್ಟಿನಿಂದ ಇಬ್ಬರ ಮೇಲೂ ಹರಿಹಾಯ್ದ.

ಹೀಗೆ ಅವರೆಲ್ಲರೂ ಆತಂಕದಿಂದ ತಮ್ಮ ಸಮಸ್ಯೆಗಳನ್ನು ಹೇಳಿಕೊಳ್ಳುತ್ತಿರುವಾಗ, ದಿಢೀರನೆ ಒಂದು ಭೂತ ಇವರ ಮುಂದೆ ಪ್ರತ್ಯಕ್ಷವಾಗಿ, ‘ನೀವೇಕೆ ಹೀಗೆ ಕಷ್ಟ ಪಡುತ್ತಿದ್ದೀರಿ? ನಿಮ್ಮ ಆಸೆ ಏನೆಂದು ತಿಳಿಸಿರಿ. ನಾನದನ್ನು ಪೂರೈಸುತ್ತೇನೆ. ಆದರೆ ಒಬ್ಬರು ಒಂದು ಆಸೆಯನ್ನು ಮಾತ್ರವೇ ಹೇಳಬೇಕು’ ಎಂದು ಹೇಳಿತು. ಭೂತವನ್ನು ನೋಡಿ ಮೊದಲಿಗೆ ಹೆದರಿಕೊಂಡರೂ ಕೂಡಲೇ ಸಾವರಿಸಿಕೊಂಡ ಮ್ಯಾನೇಜರ್, ‘ನೀನು ಹೇಗೆ ಈ ಕಛೇರಿಯೊಳಗೆ ಅನುಮತಿಯಿಲ್ಲದೆ ಪ್ರವೇಶಿಸಿದೆ? ಸೆಕ್ಯೂರಿಟೀ ಮೊದಲು ಇದನ್ನು ಹೊರಗಟ್ಟಿರಿ...’ ಎಂದು ಕಿರುಚಿದ.

‘ಅವರು ಲಂಡನ್ ಅನ್ನು ಸುತ್ತಿ ನೋಡಬೇಕೆಂದು ಆಸೆಪಟ್ಟರು. ಆದ್ದರಿಂದ ಅಲ್ಲಿಗೆ ಅವರನ್ನು ಕಳಿಸಿದ್ದೇನೆ’ ಎಂದು ಉತ್ತರಿಸಿತು ಭೂತ. ಅದನ್ನು ಕೇಳಿ ಎಲ್ಲರೂ ದಿಗ್ಭ್ರಮೆಗೊಂಡರು.

ಮೊದಲಿಗೆ ಸೂಪರ್‌ವೈಸರ್ ದಿಗ್ಭ್ರಮೆಯಿಂದ ಹೊರಬಂದು ಸಾವರಿಸಿಕೊಂಡು, ‘ಆಸೆಗಳನ್ನು ನೆರವೇರಿಸುವ ಭೂತ ಸಾರ್ ಇದು... ನಾವೂ ಏನನ್ನಾದರೂ ಕೇಳಿ ನೋಡೋಣ ’ ಎಂದು ಅವರಿಗೆ ಸಲಹೆ ನೀಡಿ, ತನ್ನ ಆಸೆಯನ್ನು ಅದರ ಮುಂದೆ ಹೇಳಿಕೊಂಡ. ‘ಇಲ್ಲಿ ತುಂಬಾ ಬಿಸಿಲು, ಸೆಖೆ. ಆದ್ದರಿಂದ ನಾನು ಅಮೇರಿಕಾಗೆ ಹೋಗಿ ನಯಾಗರಾ ಜಲಪಾತದ ಮುಂದೆ ಆನಂದದಿಂದ ಇರಬೇಕು’ ಎಂದು ಹೇಳಿಕೊಂಡ. ಕೂಡಲೇ ಅವನನನ್ನು ನಯಾಗರಾ ಜಲಪಾತದ ಮುಂದೆ ನಿಲ್ಲಿಸಿತ್ತು ಭೂತ!

ನಂತರ ಮಾರಾಟ ಪ್ರತಿನಿಧಿಯು, ‘ನನಗೆ ಕೆಲಸ ಮಾಡಿ ಮಾಡಿ ಸಾಕಾಗಿ ಹೋಗಿದೆ. ನಾನು ಮಾಲ್ಡೀವ್ಸ್ ದ್ವೀಪದಲ್ಲಿ ಒಂದು ಬಂಗಲೆಯಲ್ಲಿ ವಾಸಿಸಬೇಕು. ಅಲ್ಲಿ ನನ್ನ ಕೆಲಸಗಳನ್ನೆಲ್ಲ ಮಾಡಲು ಕೆಲಸಗಾರರೂ ಇರಬೇಕು’ ಎಂದು ತನ್ನ ಆಸೆಯನ್ನು ಹೇಳಿಕೊಂಡ. ಅವನು ಕೇಳಿದ್ದು ಕೂಡ ನೆರವೇರಿತು.

ಕಡೆಯದಾಗಿ ಮ್ಯಾನೇಜರ್ ತನ್ನ ಆಸೆಯನ್ನು ಹೇಳಿಕೊಂಡ!ಅಲ್ಲಿದ್ದವರೆಲ್ಲರೂ ಮಾಯವಾಗಿ ಹೋದದ್ದರಿಂದ ಅವನಿಗೆ ಕಡುಗೋಪ ಬಂದಿತ್ತು! ‘ಮುಂದಿನ ವಾರ ಎಂ.ಡಿ., ಜೊತೆ ಮೀಟಿಂಗ್ ಇದೆ. ಇವರಿಬ್ಬರೂ ಹೀಗೆ ಜಾಲಿಯಾಗಿ ಊರು ಸುತ್ತಾಡಲು ಹೋಗಿಬಿಟ್ಟರೆ ಇಲ್ಲಿ ಕೆಲಸ ಮಾಡುವುದು ಯಾರು? ನನ್ನ ನೆಮ್ಮದಿಯೇ ಕೆಟ್ಟು ಹೋಗುತ್ತದೆ ಅಷ್ಟೆ. ಇವರಿಬ್ಬರು ಮಾತ್ರವೇ ಅಲ್ಲ ಆ ಸೆಕ್ಯೂರಿಟಿಯವರನ್ನೂ ಸೇರಿಸಿ ಎಲ್ಲರೂ ಕೂಡಲೇ ಇಲ್ಲಿಗೆ ಬರಬೇಕು’ ಎಂದು ತನ್ನ ಆಸೆಯನ್ನು ಹೇಳಿಕೊಂಡ! ಇದನ್ನು ಕೇಳಿ ಭೂತ ಒಂದು ಕ್ಷಣ ಆಶ್ಚರ್ಯಪಟ್ಟರೂ, ಅವನು ತಿಳಿಸಿದಂತೆಯೇ ಮಾಡಿ ಅಲ್ಲಿಂದ ಮಾಯವಾಗಿ ಹೋಯಿತು. ಮೂವರೂ ಹಿಂದಿನಂತೆ ಅದೇ ಕಛೇರಿಯಲ್ಲಿ ಅದೇ ಕೆಲಸ ಮಾಡಿಕೊಂಡಿದ್ದರು.” ಇದೇ ಕಥೆ!

ಇದು ತಮಾಷೆಗಾಗಿ ಹೇಳುವ ಕಥೆಯೇ ಆದರೂ, ಇದರಲ್ಲಿ ಪ್ರತಿಯೊಬ್ಬರೂ ತಮ್ಮ ಸ್ವಾರ್ಥದಿಂದ ತುಂಬಿದ ಆಸೆಗಳನ್ನು ಮಾತ್ರವೇ ಹೇಳಿಕೊಂಡಿದ್ದನ್ನು ನೋಡಬಹುದು. ಕನಿಷ್ಠ ಪಕ್ಷ ತಮ್ಮ ಕುಟುಂಬದವರನ್ನೂ ಕೂಡ ನೆನಪಿಸಿಕೊಂಡು ನೋಡಲಿಲ್ಲ. ಆಸೆಗಳೇ ಇಲ್ಲದೆ ಮನುಷ್ಯರು ಬದುಕಲು ಸಾಧ್ಯವೇ ಇಲ್ಲ ಎಂದಾದರೂ, ಆ ಆಸೆ ಎಂಬುದು ಕನಿಷ್ಠಮನೋಭಾವವನ್ನು ಹೊಂದಿರಬಾರದು. ಎಲ್ಲಾ ಬಗೆಯ ಭಾವನೆಗಳಲ್ಲೂ ಒಳ್ಳೆಯದೂ ಕೆಟ್ಟದೂ ಕೂಡಿಯೇ ಇರುತ್ತದೆ.





ಆಸೆಯೆಂಬುದು ಮನುಷ್ಯರ ಜೀವನದಿಂದ ಬೇರ್ಪಡಿಸಲು ಸಾಧ್ಯವೇ ಇಲ್ಲದ ವಿಷಯ. 'ಇಷ್ಟಪಟ್ಟದನ್ನು ತಿನ್ನಲು ಸಾಧ್ಯವಿಲ್ಲ... ಇಷ್ಟ ಪಟ್ಟ ಉಡುಗೆಯನ್ನು ಧರಿಸಲೂ ಸಾಧ್ಯವಾಗುತ್ತಿಲ್ಲ... ಇಷ್ಟಪಟ್ಟ ಜೀವನ ಸಿಗಲಿಲ್ಲ...' ಹೀಗೆ ಹಲವರಿಗೆ ಬದುಕಿನಲ್ಲಿ ಅವರು ಇಷ್ಟಪಟ್ಟದ್ದು ದೊರಕದೆ ಜೀವನವಿಡೀ ಆ ಆಸೆ ಅವರನ್ನು ಹಿಂಬಾಲಿಸಿಕೊಂಡೇ ಬರುತ್ತದೆ. 'ಆಸೆಗಳೇ ಇಲ್ಲದೆ ಜೀವಿಸಿರಿ' ಎಂದು ಉಪದೇಶಿಸುವ ಮಾತು ಬದುಕಿಗೆ ಅನ್ವಯಿಸುವುದಿಲ್ಲ. ಎಲ್ಲಾ ಆಸೆಗಳನ್ನೂ ತ್ಯಜಿಸಿ ಋಷಿಯಂತೆ ಜೀವಿಸಲು ಎಲ್ಲರಿಂದಲೂ ಸಾಧ್ಯವಿಲ್ಲ. ಹಾಗೆ ಜೀವಿಸಬೇಕಾದ ಅಗತ್ಯವೂ ಇಲ್ಲ. ಮನುಷ್ಯ ಜೀವನದ ಹೋರಾಟ ಆಸೆಗಳ ಮೂಲಕವೇ ಆರಂಭವಾಗುವುದು.

ಸಾವಿರಾರು ಜನ ನೇಕಾರರು ಚೆನ್ನಾಗಿ ಊಟ ಮಾಡಿ, ಸರಿಯಾಗಿ ಬಟ್ಟೆ ಧರಿಸಿ, ಮೂಲಭೂತ ಅವಶ್ಯಕತೆಗಳನ್ನು ಪೂರೈಸಿಕೊಂಡು ಸಂತೋಷದಿಂದ ಜೀವಿಸಬೇಕು ಎನ್ನುವ ನನ್ನ ಆಸೆ, ರಾಮ್‌ರಾಜ್ ಕಾಟನ್ ಸಂಸ್ಥೆಯನ್ನು ಆರಂಭಿಸುವಂತೆ ಮಾಡಿತು, ನಾನು ಹೆಚ್ಚು ಕಷ್ಟಪಟ್ಟು ದುಡಿಯುವಂತೆ ಮಾಡಿತು, ಈ ಉದ್ಯಮವನ್ನು ಜಾಗರೂಕತೆಯಿಂದ ಮೇಲೆ ತರಲು ಕಾರಣವಾಯಿತು. ರಾಮ್‌ರಾಜ್ ಕಾಟನ್ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿರುವ ಸಾವಿರಾರು ಸಂಖ್ಯೆಯ ನೌಕರರ ಜೀವನ ಶೈಲಿ ಮೇಲ್ಮಟ್ಟಕ್ಕೇರಬೇಕು ಎನ್ನುವ ಆಸೆ ಈಗಲೂ ನಾನು ಕೆಲಸ ಮಾಡುವಂತೆ ನನ್ನಲ್ಲಿ ಸ್ಫೂರ್ತಿ ತುಂಬುತ್ತಿದೆ. ರಾಮ್‌ರಾಜ್ ಸಂಸ್ಥೆಯ ಉತ್ಪನ್ನಗಳನ್ನು ಕೊಳ್ಳುವ ಗ್ರಾಹಕರು ಅದನ್ನು ಇಷ್ಟಪಟ್ಟು, ನಮ್ಮನ್ನು ಮನಃಪೂರ್ತಿಯಾಗಿ ಹರಸಬೇಕೆಂಬ ಆಸೆ, ನಾವು ಈ ಉದ್ಯಮವನ್ನು ಪ್ರಾಮಾಣಿಕತೆಯಿಂದಲೂ ನ್ಯಾಯಯುತವಾಗಿಯೂ ಮಾಡುವಂತೆ ನಮಗೆ ಪ್ರೇರಣೆಯನ್ನು ನೀಡುತ್ತಿದೆ. ಸಾಮಾಜಿಕ ಕಾರ್ಯಗಳಿಗೆ ನೆರವಾಗಬೇಕು ಎನ್ನುವ ಆಸೆ, ಬಿಡುವಿನ ಸಮಯವನ್ನು ಸಾಮಾಜಿಕ ಅಭಿವೃದ್ಧಿಗೆ ಸಂಬಂಧಿಸಿದ ಕಾರ್ಯಗಳಲ್ಲಿ ಭಾಗವಹಿಸುವ ಆಸಕ್ತಿಯನ್ನು ತುಂಬುತ್ತಿದೆ. ಹೀಗೆ ನಾನು ನೇರವಾದ ಹಾದಿಯಲ್ಲಿ ಒಳ್ಳೆಯ ರೀತಿಯಲ್ಲಿ ಮುಂದೆ ಬರಲು ಇಂತಹ ಸಕಾರಾತ್ಮಕವಾದ ಆಸೆಗಳೇ ಕಾರಣ.

'ನಾನು ಮಾತ್ರ ಚೆನ್ನಾಗಿ ಬದುಕಿದರೆ ಸಾಕು' ಎಂದು ಆಸೆ ಪಡದೆ, 'ನನ್ನ ಸುತ್ತಲೂ ಇರುವ ಎಲ್ಲರೂ ಚೆನ್ನಾಗಿ ಬದುಕಬೇಕು' ಎಂದು ನಾವು ಭಾವಿಸಲು ಆರಂಭಿಸಿದರೆ ಸಾಕು, ನಾವು ಇತರರ ಜೀವನದಲ್ಲಿ ಮುಂದೆ ಬರುವಲ್ಲಿ ನಮ್ಮ ಪಾಲೂ ಆರಂಭವಾಗಿ ಬಿಡುತ್ತದೆ. ಜೀವನದಲ್ಲಿ ಸ್ವಾರ್ಥವನ್ನು ಕೈಬಿಟ್ಟು, ನಿಸ್ವಾರ್ಥವಾಗಿ ಇತರರ ಒಳಿತನ್ನು ಬಯಸುವ ಪಕ್ವತೆಯನ್ನು ಪಡೆಯಲು, ವೇದಾದ್ರಿ ಮಹರ್ಷಿಗಳು ತಿಳಿಸಿರುವ ಆಧ್ಯಾತ್ಮಿಕ ತರಬೇತಿಗಳು ನಮಗೆ ಬಹುದೊಡ್ಡ ರೀತಿಯಲ್ಲಿ ದಾರಿ ತೋರಿಸುತ್ತವೆ. ನಾವು ಸಾಗುವ ಆಧ್ಯಾತ್ಮಿಕ ಹಾದಿ ಸರಿಯಾಗಿದ್ದರೆ, ಆಸೆಗಳಿಗೆ ನಾವು ದಾಸರಾಗದೆ, ಅವುಗಳನ್ನು ಸರಿಯಾಗಿ ನಿಭಾಯಿಸಲು ಸಾಧ್ಯವಾಗುತ್ತದೆ. ಆಸೆಗಳನ್ನು ಪಾಸಿಟಿವ್ ಭಾವನೆಗಳನ್ನಾಗಿ ಬದಲಾಯಿಸಿಕೊಳ್ಳುವ ವಿಧಾನಗಳನ್ನು ಈ ತಿಂಗಳು ಬಿಳುಪು ಭಾವನೆಗಳು ಸಂಚಿಕೆ ತೋರಿಸಿಕೊಡುವ ಈ ಸಂಚಿಕೆ ಉಪಯುಕ್ತವಾಗಿರುತ್ತದೆ ಎಂದು ನಾನು ನಂಬುತ್ತೇನೆ.

**ಬಾಳ್ಗೆ ಭೂಮಂಡಲ... ಬಾಳ್ಗೆ ಸಮೃದ್ಧಿಯೊಂದಿಗೆ**

**ಕೆ.ಆರ್. ನಾಗರಾಜನ್**

**ಸಂಸ್ಥಾಪಕರು – ರಾಮ್‌ರಾಜ್ ಕಾಟನ್**



# ಹೇಗೆ ಆಸೆ ಪಡಬೇಕು

ಒಂದು ಮಠ ಇತ್ತು. ಅದು ಆ ನಾಡಿನಲ್ಲಿದ್ದ ಎಲ್ಲಾ ದೇವಾಲಯಗಳ ನಿರ್ವಹಣೆಯನ್ನೂ ಮಾಡುತ್ತಿತ್ತು. ಅದರ ನಿರ್ವಹಣೆಯಡಿಯಲ್ಲಿ ದೂರದ ಬೆಟ್ಟದ ತಪ್ಪಲಿನಲ್ಲಿ ಒಂದು ದೇವಾಲಯ ಇತ್ತು. ಅಲ್ಲಿ ಒಬ್ಬ ಪೂಜಾರಿ ಪೂಜೆ ಇತ್ಯಾದಿ ದೇವತಾ ಕಾರ್ಯಗಳನ್ನು ನೋಡಿಕೊಳ್ಳುತ್ತಿದ್ದ. ಆತ ಮಠದ ಹಿರಿಯ ಗುರುವಿಗೆ ಒಂದು ಪತ್ರ ಬರೆದ. 'ಬೆಟ್ಟದ ತಪ್ಪಲಿನಲ್ಲಿರುವ ಈ ದೇವಾಲಯದಲ್ಲಿ ತುಂಬಾ ಸಾಂಪ್ರದಾಯಿಕ ಕಾರ್ಯಗಳನ್ನು ಮಾಡಬೇಕು. ಈಗ ಇಲ್ಲಿಗೆ ಬರುವ ಭಕ್ತರ ಸಂಖ್ಯೆಯೂ ಹೆಚ್ಚಾಗುತ್ತಿದೆ. ನನ್ನೊಬ್ಬನಿಂದಲೇ ಎಲ್ಲವನ್ನೂ ನಿಭಾಯಿಸುವುದು ಸಾಧ್ಯವಾಗುತ್ತಿಲ್ಲ. ಆದುದರಿಂದ ನನ್ನೊಂದಿಗೆ ಸೇರಿ ಕೆಲಸ ಮಾಡಲು ಇಲ್ಲಿಗೆ ಇನ್ನೊಬ್ಬ ಶಿಷ್ಯನನ್ನು ದಯವಿಟ್ಟು ಕಳಿಸಿಕೊಡಿ' ಎಂದು ಪತ್ರ ಬರೆದ.

ತಮಗೆ ಬಂದ ಆ ಪತ್ರವನ್ನು ಗುರುಗಳು, ಎಲ್ಲಾ ಶಿಷ್ಯರ ಮುಂದೆ ಜೋರಾಗಿ ಓದಿ ಹೇಳಿದರು. ನಂತರ, 'ನಿಮ್ಮಲ್ಲಿ ಯಾರಾದರೂ ಐದು ಜನರನ್ನು ಆಯ್ಕೆ ಮಾಡಿ ನಾನು ಅಲ್ಲಿಗೆ ಕಳಿಸುತ್ತೇನೆ' ಎಂದೂ ಅವರಿಗೆ ತಿಳಿಸಿದರು. 'ಅವರು ಒಬ್ಬರನ್ನು ಕಳಿಸಿ ಎಂದಲ್ಲವೇ ಹೇಳಿರುವುದು? ನೀವೇಕೆ ಐದು ಜನರನ್ನು ಕಳಿಸುತ್ತೀರಿ?' ಎಂದು ಒಬ್ಬ ಶಿಷ್ಯ ಪ್ರಶ್ನಿಸಿದ. 'ಆ ದೇವಾಲಯ ಇಲ್ಲಿಂದ ತುಂಬ ದೂರದಲ್ಲಿದೆ. ದಾರಿಯೂ ಕಠಿಣವಾದುದು. ಇಲ್ಲಿಂದ ಹೊರಟವರು ದಾರಿಯಲ್ಲಿ ಬೇರೆ ನಿರ್ಧಾರ ತೆಗೆದುಕೊಳ್ಳುವುದಕ್ಕೂ ಸಾಧ್ಯವಿದೆ. ಆದುದರಿಂದ ನಾನು ಐದು ಜನರನ್ನು ಕಳಿಸಿದರೆ ಅದರಲ್ಲಿ ಒಬ್ಬರಾದರೂ ಅಲ್ಲಿಗೆ ಹೋಗಿ ಸೇರಬಹುದು. ಒಂದು ವೇಳೆ ಹೆಚ್ಚು ಜನ ಅಲ್ಲಿಗೆ ಹೋಗಿ ಸೇರಿದರೂ ಒಳ್ಳೆಯದೇ. ಎಲ್ಲರೂ ಸೇರಿ ಅಲ್ಲಿನ ದೇವಾಲಯದ ಕೆಲಸ ಕಾರ್ಯಗಳನ್ನು ನೋಡಿಕೊಳ್ಳಬಹುದು' ಎಂದರು ಗುರುಗಳು. ಇದನ್ನು ಕೇಳಿ ಶಿಷ್ಯರು ಒಳಗೇ ನಕ್ಕರು.

ಮರುದಿನ ಐದು ಜನರನ್ನು ಆಯ್ಕೆ ಮಾಡಲಾಯಿತು. ಅವರು ತಮ್ಮ ಪ್ರಯಾಣವನ್ನು ಆರಂಭಿಸಿದರು. ಎರಡು ದಿನಗಳು ಕಳೆದ ಮೇಲೆ ಅವರು ಒಂದು ಗ್ರಾಮವನ್ನು ತಲುಪಿದರು. ಅವರನ್ನು ನೋಡಿದ ಆ ಹಳ್ಳಿಯ ಮುಖಂಡ, 'ನಮ್ಮ ಊರಿನ ದೇವಸ್ಥಾನದಲ್ಲಿ ಪೂಜೆ ಮಾಡುತ್ತಿದ್ದ ಪೂಜಾರಿ ನಿನ್ನೆ ರಾತ್ರಿ ಆಕಸ್ಮಿಕವಾಗಿ ಮರಣ ಹೊಂದಿದ್ದಾರೆ. ಆದುದರಿಂದ ನಿಮ್ಮಲ್ಲಿ ಯಾರಾದರೂ ಒಬ್ಬರು ನಮ್ಮೂರಿನಲ್ಲೇ ಇದ್ದು ದೇವಸ್ಥಾನದ ಕೆಲಸಗಳನ್ನು ನೋಡಿಕೊಳ್ಳಬೇಕು' ಎಂದು ವಿನಂತಿಸಿಕೊಂಡ. ಹಸಿರಿನಿಂದ ನಳನಳಿಸುತ್ತಿದ್ದ ಫಲವತ್ತಾದ ಆ ಊರನ್ನು ನೋಡಿದ ಕೂಡಲೇ ಅವರಲ್ಲಿ ಒಬ್ಬನಿಗೆ ಇಲ್ಲೇ ಇದ್ದ–ರೆ ಚೆನ್ನಾಗಿರುತ್ತದೆ ಎನ್ನಿಸಿತ್ತು. ಕೂಡಲೇ ಅವನು, 'ಇದು ಕೂಡ ದೇವಾಲಯದ ಕೆಲಸ ತಾನೇ! ನಾನು ಇಲ್ಲೇ ಇದ್ದು ಇದನ್ನು ನೋಡಿಕೊಳ್ಳುತ್ತೇನೆ' ಎಂದು ಒಪ್ಪಿಕೊಂಡ. ಉಳಿದ ನಾಲ್ವರೂ ತಮ್ಮ ಪ್ರಯಾಣವನ್ನು ಮುಂದುವರೆಸಿದರು.

ಕೆಲವು ದಿನಗಳ ನಂತರ ಅವರು ಒಂದು ಪಕ್ಕದ ನಾಡನ್ನು ಸಮೀಪಿಸಿದರು. ಬೇಟೆಯಾಡಲು ಕಾಡಿಗೆ ಬಂದಿದ್ದ ರಾಜ ಈ ನಾಲ್ವರನ್ನೂ ಕಾಡಿನಲ್ಲಿ ನೋಡಿದ. ಅವರಲ್ಲಿ ನೋಡಲು ಸ್ಫುರದ್ರೂಪಿಯೂ, ಬಲಿಷ್ಠನೂ ಆಗಿದ್ದ ಒಬ್ಬ ಶಿಷ್ಯನನ್ನು ಸಮೀಪಿಸಿ, 'ನಾನು ತುಂಬಾ ದಿನಗಳಿಂದ ನನ್ನ ಮಗಳಿಗೆ ಒಬ್ಬ ಸ್ಫುರದ್ರೂಪಿ ವರನನ್ನು ಹುಡುಕುತ್ತಿದ್ದೆ. ನೀನು ಅವಳಿಗೆ ಸರಿಯಾದ ವರನಾಗಿರುವೆ. ನನಗಿರುವುದು ಒಬ್ಬಳೇ ಮಗಳು. ಅವಳನ್ನು ನೀನು ಮದುವೆ ಮಾಡಿಕೊಂಡರೆ, ಮುಂದೆ ನೀನು ನನ್ನ ದೇಶದ ರಾಜನಾಗುವೆ' ಎಂದು ತಿಳಿಸಿದೆ. ಇದಕ್ಕಿಂತಲೂ ಒಳ್ಳೆಯ ಅದೃಷ್ಟ ಜೀವನದಲ್ಲಿ ಯಾರಿಗಾದರೂ ಸಿಗಲು ಸಾಧ್ಯವೇ!? ಅವನು ಇದಕ್ಕೆ ಸಮ್ಮತಿಸಿ, ಆ ಕ್ಷಣವೇ ರಾಜನ ಜೊತೆಯಲ್ಲಿ ಹೊರಟು ಬಿಟ್ಟ.

ಉಳಿದ ಮೂವರೂ ಮತ್ತೆ ತಮ್ಮ ಪ್ರಯಾಣವನ್ನು ಮುಂದುವರೆಸಿದರು. ಅವರು ಒಂದು ಗ್ರಾಮವನ್ನು ದಾಟಿಕೊಂಡು ಮುಂದೆ ಸಾಗುವಾಗ ಅವರೆಲ್ಲರಿಗೂ ಅಪಾರ ಹಸಿವೆ ಕಾಣಿಸಿಕೊಂಡಿತು. ಆಯಾಸದಿಂದ ಹೆಜ್ಜೆ ಎತ್ತಿಡುತ್ತಿದ್ದ ಇವರನ್ನು ಕಂಡ ಆ ಊರಿನ ಒಬ್ಬ ವ್ಯಾಪಾರಿ ಇವರ ಬಗ್ಗೆ ವಿಚಾರಿಸಿ, ಇವರಿಗೆ ಆತಿಥ್ಯ ನೀಡಿ ಸತ್ಕರಿಸಿದ. ಅವರ ವಿಶಾಲವಾದ ಮಹಡಿ ಮನೆಯಲ್ಲಿ ಆ ವ್ಯಾಪಾರಿಯೂ, ಅವರ ಹೆಂಡತಿಯೂ ಮಾತ್ರವೇ ವಾಸಿಸುತ್ತಿದ್ದರು. ಅವರಿಬ್ಬರ ಮುಖದಲ್ಲೂ ದು–ಃಖದ ಛಾಯೆ ಇರುವುದನ್ನು ಗಮನಿಸಿದ ಒಬ್ಬ ಶಿಷ್ಯ ಅವರ ಬಳಿ ಪ್ರೀತಿಯಿಂದ ಕಾರಣವೇನೆಂದು



ವಿಚಾರಿಸಿದ. 'ನಾನು ತುಂಬಾ ವರ್ಷಗಳಿಂದ ಒಳ್ಳೆಯ ರೀತಿಯಲ್ಲಿ ವ್ಯಾಪಾರ ಮಾಡಿ ತುಂಬಾ ಹಣ ಸಂಪಾದಿಸಿದ್ದೇನೆ. ಆದರೆ ಕಡೆಗಾಲದಲ್ಲಿ ನಮ್ಮನ್ನು ನೋಡಿಕೊಳ್ಳಲೂ, ನಮಗೆ ಮಾಡಬೇಕಾದ ಕಾರ್ಯಗಳನ್ನು ಮಾಡಲೂ ನಮಗೆ ಪುತ್ರ ಸಂತಾನ ಇಲ್ಲ. ನಿಮ್ಮ ಗುರುಗಳು ಹೇಗೂ ನಿಮಗೆಲ್ಲರಿಗೂ ಒಳ್ಳೆಯ ಶಿಕ್ಷಣವನ್ನೂ, ಸಂಸ್ಕಾರವನ್ನೂ ಕಲಿಸಿರುತ್ತಾರೆ. ನಿಮ್ಮಲ್ಲಿ ಯಾರಾದರೂ ಒಬ್ಬರು ನನ್ನ ದತ್ತು ಮಗನಾಗಿರಲು ಸಮ್ಮತಿಸಿದರೆ, ಅವರನ್ನು ನಾನು ದತ್ತು ತೆಗೆದುಕೊಳ್ಳುತ್ತೇನೆ. ನಾನು ಇಷ್ಟು ವರ್ಷಗಳ ಕಾಲ ಸಂಪಾದಿಸಿರುವ ಆಸ್ತಿಯೆಲ್ಲವೂ ಅವರಿಗೇ ಸೇರುತ್ತದೆ' ಎಂದು ಹೇಳಿದ. ಮೂವರಲ್ಲಿ ಒಬ್ಬ ಶಿಷ್ಯ ಇದಕ್ಕೆ ಒಪ್ಪಿಕೊಂಡು, 'ನಾನು ನಿಮಗೆ ಮಗನಾಗಿರಲು ಬಯಸುತ್ತೇನೆ' ಎಂದು ಹೇಳಿ ಅವರ ಕಾಲುಗಳಿಗೆ ನಮಸ್ಕರಿಸಿದ. ಅವನನ್ನು ಆ ದಂಪತಿಗಳು ಪ್ರೀತಿಯಿಂದ ಆಲಂಗಿಸಿಕೊಂಡರು.

ಈಗ ಉಳಿದದ್ದು ಇಬ್ಬರೇ. ಅವನನ್ನು ಅಲ್ಲೇ ಬಿಟ್ಟು ಅವರಿಬ್ಬರೂ ತಮ್ಮ ಪ್ರಯಾಣವನ್ನು ಮುಂದುವರೆಸಿದರು. ಅವರು ಒಂದು ದಟ್ಟವಾದ ಕಾಡನ್ನು ದಾಟಿಕೊಂಡು ಮುಂದೆ ಹೋಗಬೇಕಾಗಿತ್ತು. ಸ್ವಲ್ಪ ಸಮಯದಲ್ಲಿ ಮಳೆ ಸುರಿಯತೊಡಗಿತು. ಹಾದಿ ಸರಿಯಾಗಿ ಕಾಣಿಸದೇ ಹೋಯಿತು. ಹೇಗೋ ಕಷ್ಟಪಟ್ಟುಕೊಂಡು ನಿಧಾನವಾಗಿ ನಡೆದು ಅವರು ಕಾಡಿನಿಂದ ಹೊರ ಬಂದರು. ಅಷ್ಟು ಹೊತ್ತಿಗಾಗಲೇ ಸೂರ್ಯಾಸ್ತವಾಗಿತ್ತು. ಕಾಡಿನಿಂದ ಹೊರ ಬಂದು ಸುತ್ತಲೂ ನೋಡುವಾಗ ಅವರಿಗೆ ತಾವು ದಾರಿ ತಪ್ಪಿದ್ದೇವೇನೋ ಎಂದು ಅನ್ನಿಸತೊಡಗಿತು. ಕತ್ತಲು ಆವರಿಸುವುದರೊಳಗೆ ಇಬ್ಬರೂ ಒಂದು ಸುರಕ್ಷಿತವಾಗಿ ಸ್ಥಳವನ್ನು ತಲುಪಬೇಕಾಗಿತ್ತು. ತುಂಬಾ ದೂರದಲ್ಲಿ ಒಂದು ಚಿಕ್ಕ ಚುಕ್ಕೆಯಂತೆ ಒಂದು ಬೆಳಕು ಕಾಣಿಸಿತು. ಅಲ್ಲಿ ಯಾರಾದರೂ ಇರಬಹುದು ಎಂಬು ಭಾವಿಸಿ ಅವರು ಆ ಕಡೆಗೆ ವೇಗವೇಗವಾಗಿ ಹೆಜ್ಜೆ ಹಾಕಿದರು.

ಅದು ಕೆಲವೇ ಕೆಲವು ಮನೆಗಳು ಮಾತ್ರ ಇದ್ದ ಒಂದು ಚಿಕ್ಕ ಹಳ್ಳಿ. ಆ ಊರಿನಲ್ಲಿದ್ದ ಒಂದು ಮಹಡಿ ಮನೆಯಲ್ಲಿ ಉರಿಯುತ್ತಿದ್ದ ದೀಪವನ್ನೇ ಅವರು ನೋಡಿದ್ದು. ಆ ಮನೆಯವರ ಬಳಿ ರಾತ್ರಿ ಉಳಿದುಕೊಳ್ಳಲು ಅನುವು ಮಾಡಿಕೊಡಬೇಕೆಂದು ಕೇಳೋಣ ಎಂದುಕೊಂಡು ಅಲ್ಲಿಗೆ ಹೋಗಿ, ಆ ಮನೆಯ ಬಾಗಿಲು ತಟ್ಟಿದರು. ಒಬ್ಬ ಸುಂದರವಾದ ಯುವತಿ ಬಂದು ಬಾಗಿಲು ತೆರೆದಳು. 'ಊರಿನಲ್ಲಿರುವ ಎಲ್ಲರೂ ಒಂದು ಮದುವೆಗಾಗಿ ಪರ ಊರಿಗೆ ಹೋಗಿದ್ದಾರೆ. ನನ್ನ ತಂದೆತಾಯಿಗಳು ಕೂಡ ಅವರ ಜೊತೆಯಲ್ಲಿ ಮದುವೆಗೆ ಹೋಗಿದ್ದಾರೆ. ಅವರು ಹಿಂದಿರುಗಿ ಬರಲು ಎರಡು ದಿನಗಳಾಗಬಹುದು. ಅವರು ಬರುವವರೆಗೂ ಒಬ್ಬಳೇ ಹೇಗೆ ಮನೆಯಲ್ಲಿರುವುದು ಎಂದು ಹೆದರಿಕೊಂಡು, ದೇವರ ಬಳಿ ಪ್ರಾರ್ಥಿಸಿದೆ. ಅವರೇ ನಿಮ್ಮನ್ನು ಇಲ್ಲಿಗೆ ಕಳಿಸಿರುವುದು' ಎಂದು ಅವಳು ಸಂತೋಷದಿಂದ ಹೇಳಿದಳು. ಅವರಿಗೆ ಆಹಾರವನ್ನೂ ನೀಡಿ, ಮನೆಯ ಮುಂದಿನ ಜಗುಲಿಯಲ್ಲಿ ಮಲಗಲು ಏರ್ಪಾಡನ್ನೂ ಮಾಡಿದಳು. ಹೀಗೇ ಮೂವರೂ ಸುಮ್ಮನೆ ಕುಳಿತು ಲೋಕಾಭಿರಾಮವಾಗಿ ಮಾತನಾಡುತ್ತಿರಬೇಕಾದರೆ, ಇವರಲ್ಲಿ ಒಬ್ಬನಿಗೆ ಆ ಯುವತಿಯ ಮೇಲೆ ಪ್ರೇಮ ಹುಟ್ಟಿತು. ಅವಳಿಗೂ ಅದು ಅವನ ನೋಟದಿಂದಲೇ ಅರ್ಥವಾಯಿತು. ಇಬ್ಬರೂ ಆಸೆಯಿಂದ ಮಾತನಾಡಿಕೊಂಡರು. ಅವನನ್ನು ಅವಳು ತುಂಬಾ ಮುತುವರ್ಜಿಯಿಂದ ಗಮನಿಸಿಕೊಂಡಳು.

ಮರುದಿನ ಆ ಯುವಕ ಇನ್ನೊಬ್ಬನೊಂದಿಗೆ ತನ್ನ ಪ್ರಯಾಣವನ್ನು ಮುಂದುವರೆಸಲು ನಿರಾಕರಿಸಿದ. 'ಈ ಯುವತಿಯನ್ನು ಹೀಗೆ ರಕ್ಷಣೆಯೇ ಇಲ್ಲದೆ ಒಬ್ಬಂಟಿಯಾಗಿ ಬಿಟ್ಟು ನಿನ್ನ ಜೊತೆ ಬರಲು ನನ್ನಿಂದಾಗದು. ನೀನು ಹೊರಡು...' ಎಂದು ತಿಳಿಸಿದ. ಇವನೊಬ್ಬನೇ ಪ್ರಯಾಣವನ್ನು ಮುಂದುವರೆಸಿ ಬೆಟ್ಟದ ತಪ್ಪಲಿನಲ್ಲಿದ್ದ ಆ ದೇವಸ್ಥಾನವನ್ನು ತಲುಪಿದ.

ಆಸೆಗಳು ಮನಸ್ಸನ್ನು ಚಂಚಲಗೊಳಿಸಿ ಹಾದಿ ತಪ್ಪಿಸಬಹುದು ಎಂದು ಗುರು ಹೇಳಿದ್ದು ನಿಜವಾಯಿತು!

'ಜೀವನದಲ್ಲಿ ಏನನ್ನಾದರೂ ಸಾಧಿಸಲು ಆಸೆ ಪಡಿ. ಆಗಲೇ ನೀವು ಆ ಗುರಿಯನ್ನು ಮುಟ್ಟಲು ಸಾಧ್ಯವಾಗುವುದು' ಎಂದು ಈ ಸಮಾಜ ಚಿಕ್ಕಂದಿನಿಂದಲೂ ನಮಗೆ ಹೇಳುತ್ತಲೇ ಇರುತ್ತದೆ. ಪ್ರಾಣಿಗಳಿಗೆ ಯಾವ ಆಸೆಗಳೂ ಇರುವುದಿಲ್ಲ. ದಿನವೂ ಒಂದೇ ರೀತಿಯ ಜೀವನವನ್ನೇ ಸಾಗಿಸಿ, ದೊರಕಿದ್ದನ್ನು ತಿಂದು ಅವು ದಿನಗಳನ್ನು ದೂಡುತ್ತವೆ. ಆದರೆ ಮನುಷ್ಯರು ಹೀಗೆ ಬದುಕದೆ, ತಮ್ಮ ಬದುಕನ್ನು ಸರಳ, ಸುಂದರ ಹಾಗೂ ಸುಖಮಯವಾಗಿಸಿಕೊಳ್ಳುವುದಕ್ಕೋಸ್ಕರ ನಾನಾ ಬಗೆಯ ಉಪಕರಣಗಳನ್ನು ಕಂಡು ಹಿಡಿದರು. ಮನುಷ್ಯ ಸಂಕುಲದ ನಾಗರಿಕತೆಯೂ ವಿಜ್ಞಾನವೂ ಬೆಳವಣಿಗೆಯನ್ನು ಕಂಡದ್ದೇ ಮನುಷ್ಯನ ಆಸೆಗಳ ಕಾರಣದಿಂದಲೇ. ಇಂತಹ ಆಸೆಗಳು ಒಂದು ವಿಧಿನಿಯಮಗಳಿಗೆ ಒಳಪಟ್ಟವುಗಳಾಗಿರಬೇಕು.

'ಭವಿಷ್ಯದಲ್ಲಿ ನನ್ನ ಜೀವನ ಹೀಗಿರಬೇಕು' ಎಂದು ನಿರೀಕ್ಷಿಸುವುದೇ ನಮ್ಮ ಆಸೆಯಾಗಿರುತ್ತದೆ. ಅದು ನಡೆದರೆ ಜೀವನದಲ್ಲಿ ನಾವು ಸಂತೋಷದಿಂದ ಇರುತ್ತೇವೆ ಎಂದು ಭಾವಿಸುತ್ತೇವೆ. ಆ ನಿರೀಕ್ಷೆಯಲ್ಲಿ ವರ್ತಮಾನದ ಸಂತೋಷವನ್ನು ಕಳೆದುಕೊಂಡು ಬಿಡುತ್ತಾರೆ ಹಲವರು. ಆಸೆಗಳೇ ನಮಗೆ ಬಲವಾದ ಭವಿಷ್ಯವನ್ನು ರೂಪಿಸಿಕೊಡುತ್ತವೆ. ನಮ್ಮ ಕನಸುಗಳು ನನಸಾಗಲು ಅಗತ್ಯವಾದ ಪ್ರೇರಣೆಯನ್ನೂ ಅವು ನೀಡುತ್ತವೆ. ಆದರೂ, ಆ ನಿರೀಕ್ಷೆಗಳಿಗಾಗಿ ನಮ್ಮ ವರ್ತಮಾನದ ಸಂತೋಷವನ್ನು ಕಳೆದುಕೊಂಡು ಬಿಡಬಾರದು.

ಈ ನಿಮಿಷವನ್ನು ಅನುಭವಿಸಿ ಜೀವಿಸುವುದೇ ನಿಜವಾದ ಜೀವನ. ನಮ್ಮ ಸುತ್ತಲೂ ಇರುವ ಮರಗಳ ಹಸಿರು, ಹೂಗಳ ಪರಿಮಳ, ಹಕ್ಕಿಗಳ ಇಂಚರ, ನೀಲಿಬಾನಿನ ಸೌಂದರ್ಯ, ಮಕ್ಕಳ ನಿಷ್ಕಲ್ಮಶ ನಗು... ಹೀಗೆ ಎಲ್ಲವನ್ನೂ ನೋಡಿ ಆನಂದಿಸಿ ಜೀವಿಸಬೇಕು. ಜೊತೆಗೆ, ಈ ಆನಂದ ನಿರಂತರವಾಗಿರಬೇಕು ಎಂದು ಆಸೆ ಪಡೋಣ! ●





## ಆಸೆಗಳನ್ನು ಕೈ ಬಿಡಬೇಕೇ?

**ಸ**ಂತೋಷದಿಂದ ಇರುವಾಗ, ಈ ಸಂತೋಷ ಹೀಗೇ ಮುಂದುವರೆಯಬೇಕು ಎಂದು ಆಸೆ ಪಡುತ್ತೇವೆ. ಆ ಸಂತೋಷ ಮಾಯವಾದರೆ ಕಷ್ಟಗಳು ಸಮಸ್ಯೆಗಳ ನೋವು ವೇದನೆ ನಮ್ಮನ್ನು ಸಂಕಟಪಡಿಸಬಹುದೋ ಏನೋ ಎಂದು ಭಯ ಪಡುತ್ತೇವೆ. ಈ ಭಯವೇ ನಮ್ಮ ಆಸೆಗಳಿಗೆ ಮೂಲವಾಗಿರುತ್ತದೆ. ಮನುಷ್ಯರು ಭಾಷೆಯನ್ನು ಕಂಡು ಹಿಡಿದು ಮಾತನಾಡಲು ಆರಂಭಿಸುವ ಹಿಂದಿನಿಂದಲೂ ಅವರಲ್ಲಿ ಭಾವನೆಗಳು ಇದ್ದವು. ಆ ಭಾವನೆಗಳಿಂದಾಗಿಯೇ ಆಸೆಗಳು ಹುಟ್ಟುತ್ತವೆ. ಭಾವನೆಗಳನ್ನು ಸರಿಯಾಗಿ ನಿಭಾಯಿಸಿದರೆ, ನಾವು ಆಸೆಗಳನ್ನು ನಿಯಮಗಳೊಳಗೆ ತರಬಹುದು.

ಉದಾಹರಣೆಗೆ, ಒಂದು ಮನೆಯನ್ನು ನಾವು ನೋಡುತ್ತೇವೆ. ಆ ಮನೆ ನೋಡಲು ತುಂಬಾ ಸುಂದರವಾಗಿರುತ್ತದೆ. ಆ ಮನೆ ನಮ್ಮ ಮನೆಯಾಗಿದ್ದರೆ ಚೆನ್ನಾಗಿರುತ್ತದೆ ಎಂದು ಆಸೆ ಪಡುತ್ತೇವೆ. ಈ ಆಸೆಯನ್ನು ನಾವು ವಿಶ್ಲೇಷಿಸಿ ನೋಡಬೇಕು. ಆ ಮನೆಯನ್ನು ಕೊಳ್ಳಲು ಸಾಧ್ಯವಿರುವಷ್ಟು ಮಟ್ಟಿಗೆ ನಮಗೆ ಆರ್ಥಿಕ ಬಲ ಇದೆಯೇ? ಆ ಮನೆಯನ್ನು ಅವರು ಮಾರಲು ಸಿದ್ಧವಾಗಿದ್ದಾರೆಯೇ? ಅವರು ಹೇಳುತ್ತಿರುವುದು ನ್ಯಾಯವಾದ ಬೆಲೆಯೇ? ಆ ಮನೆ ನಮ್ಮ ಕುಟುಂಬಕ್ಕೆ ಹೊಂದುತ್ತದೆಯೇ?.... ಹೀಗೆ ಎಲ್ಲವನ್ನೂ ಪರಿಶೀಲಿಸಿ ನಂತರ ಮುಂದೆ ಹೆಜ್ಜೆ ಎತ್ತಿಡಬೇಕು. ಅದು ನಮಗೆ ಸರಿ ಬರುತ್ತಿಲ್ಲ ಎನ್ನಿಸಿದರೆ ಅದರಿಂದ ಹಿಂದೆ ಸರಿದು ಬಿಡಬೇಕು. ಇದನ್ನು ಸರಿಯಾಗಿ ಮಾಡಿದರೆ ಅದಕ್ಕಾಗಿ ಯಾವುದೇ ಬೇಸರವೂ, ನಿರಾಶೆಯೂ ಏಳುವುದಿಲ್ಲ. ನೆರವೇರದ ಆಸೆಗಳನ್ನು ಜೊತೆಗೇ ಎಳೆದುಕೊಂಡು ಸಾಗಬೇಡಿ.

ಅದಕ್ಕಾಗಿ ನಿಮ್ಮೆಲ್ಲ ಆಸೆಗಳನ್ನೂ ಕೈ ಬಿಡಬೇಕೆಂದೇನೂ ಇಲ್ಲ. ಆದರೆ, ಅನಗತ್ಯ ಆಸೆಗಳನ್ನು ಪಕ್ಕಕ್ಕಿಡಲೇ ಬೇಕು. ಅದೇ ನೆಮ್ಮದಿಯಾದ, ಸಂತೋಷಕರವಾದ ಜೀವನವನ್ನು ನಮಗೆ ನೀಡುತ್ತದೆ.

---

## ಬೊಕ್ಕಸವನ್ನು ತೆರೆದು ನೋಡಿರಿ!!

**ಒ**ಬ್ಬ ಜೆನ್ ಸನ್ಯಾಸಿಯ ಬಳಿಗೆ ಒಬ್ಬ ಯುವಕ ಬಂದ. 'ನನಗೆ ಒಳ್ಳೆಯ ಕೆಲಸ. ಸುಂದರವಾದ ಮಡದಿ, ಸಂತೋಷದ ಕುಟುಂಬ... ಇತ್ಯಾದಿಗಳೆಲ್ಲವೂ ನನಗೆ ದೊರಕಬೇಕು ಎಂದು ನಾನು ಆಸೆ ಪಡುತ್ತೇನೆ. ಅದಕ್ಕೆ ತಕ್ಕ ದಾರಿಯನ್ನು ತೋರಿಸಿ' ಎಂದು ವಿನಂತಿಸಿಕೊಂಡ. 'ಇದೆಲ್ಲವನ್ನೂ ಪಡೆಯಲು ನೀನು ಯಾವ ಪ್ರಯತ್ನ ಮಾಡಿದ್ದೀಯಾ?' ಎಂದು ಕೇಳಿದ ಗುರು. 'ಇವೆಲ್ಲವನ್ನೂ ನಾನು ಹುಡುಕಾಡುತ್ತಿದೇನೆ' ಎಂದು ಉತ್ತರಿಸಿದ ಯುವಕ. 'ನಿನ್ನೊಳಗೆ ಹುಡುಕಾಡಿದೆಯಾ?' ಎಂದು ಕೇಳಿದ ಸನ್ಯಾಸಿ. ಆಗ ಅವನಿಗೆ ಜ್ಞಾನೋದಯವಾಯಿತು.



'ನಿನ್ನ ಮನಸ್ಸು ಎಂಬುದೇ ಒಂದು ಬೊಕ್ಕಸ. ಅದನ್ನು ತೆರೆದು ನೋಡು. ನೀನು ಅಂದುಕೊಂಡದ್ದೆಲ್ಲವನ್ನೂ ಪಡೆದುಕೊಳ್ಳಲು ದಾರಿ ತೋರಿಸುವ ಆಸೆ ಎನ್ನುವ ದೀಪ ಅಲ್ಲಿ ಉರಿಯುತ್ತಿರುತ್ತದೆ. ಅದು ನೀಡುವ ಬೆಳಕಿನಲ್ಲಿ, ಪ್ರಾಮಾಣಿಕವಾದ ಹಾದಿಯಲ್ಲಿ ಪ್ರಯಾಣ ಮಾಡಿದರೆ ಯಾವುದೇ ಗುರಿಯನ್ನಾದರೂ ಮುಟ್ಟಬಹುದು' ಎಂದು ತಿಳಿಸಿದ ಸನ್ಯಾಸಿ.

ನಿಮ್ಮ ಮನಸ್ಸು ಎನ್ನುವ ಬೊಕ್ಕಸವನ್ನು ತೆರೆದು ನೋಡಿರಿ. ನೀವು ಆಸೆ ಪಡುವ ಯಾವುದನ್ನೇ ಆದರೂ ಪಡೆಯಲು ದಾರಿ ಕಾಣಿಸುತ್ತದೆ!

---

## ಆಸೆಗಳು ಬೆಳೆಯುತ್ತವೆ!

**ಆ**ಸೆಗಳು ನಿಮ್ಮ ನೆರಳಿನಂತಹವು. ಸಾಯಂಕಾಲದ ಹೊತ್ತು ನಿಮ್ಮ ನೆರಳು ತುಂಬಾ ಉದ್ದವಾಗಿರುತ್ತದೆ. ಆ ನೆರಳಿನ ತಲೆಯನ್ನು ಮುಟ್ಟಬೇಕೆಂದು ನೀವು ಎಷ್ಟೇ ವೇಗವಾಗಿ ಓಡಿದರೂ ಅದನ್ನು ಮುಟ್ಟಲು ನಿಮ್ಮಿಂದ ಸಾಧ್ಯವಾಗುವುದೇ ಇಲ್ಲ. ನೀವು ಎಷ್ಟು ವೇಗವಾಗಿ ಓಡುವಿರೋ ನಿಮ್ಮ ನೆರಳೂ ಅಷ್ಟೇ ವೇಗವಾಗಿ ಓಡುತ್ತದೆ. ಗಾಡಿಯನ್ನು ಎಳೆಯುತ್ತಿರುವ ಕುದುರೆ ಇನ್ನಷ್ಟು ವೇಗವಾಗಿ ಓಡಬೇಕು ಎನ್ನುವುದಕ್ಕಾಗಿ, ಗಾಡಿ ಓಡಿಸುವವನ ಒಂದು ಕಡ್ಡಿಯಲ್ಲಿ ಕ್ಯಾರೆಟ್ ಅನ್ನು ಕಟ್ಟಿ ಅದರ ತಲೆಯ ಮುಂದೆ ತೂಗು ಬಿಡುವುದುಂಟು. ಹೇಗಾದರೂ ಕ್ಯಾರೆಟ್ಟನ್ನು ಕಚ್ಚಿ ತಿನ್ನಬೇಕೆಂಬ ಆಸೆಯಿಂದ ಕುದುರೆ ವೇಗವಾಗಿ ಓಡತೊಡಗುತ್ತದೆ. ಅದು ಎಷ್ಟು ವೇಗವಾಗಿ ಓಡುತ್ತದೆಯೋ ಅಷ್ಟೇ ವೇಗದಲ್ಲಿ ಕ್ಯಾರೆಟ್ ಕೂಡ ಅದರ ಮುಂದೆ ಓಡುತ್ತಿರುತ್ತದೆ ಎಂದು ಅದಕ್ಕೆ ತಿಳಿಯುವುದಿಲ್ಲ. ಆಸೆಗಳು ನಮ್ಮನ್ನೂ ಹೀಗೆಯೇ ಎಳೆದುಕೊಂಡು ಮುಂದೆ ಸಾಗುತ್ತವೆ.



ಆಸೆಗಳಲ್ಲಿ ಒಂದು ಪೂರ್ಣವಾದ ಕೂಡಲೇ, ಅದರ ಜೊತೆಯಲ್ಲಿ ಇನ್ನೂ ಕೆಲವು ಆಸೆಗಳು ಮೂಡುತ್ತವೆ. ತೂತು ಪಾತ್ರೆಯಲ್ಲಿ ನೀರು ಹಿಡಿದರೆ ಪಾತ್ರೆ ತುಂಬುವುದಿಲ್ಲ. ಹಾಗೆಯೇ ನಮ್ಮ ಆಸೆಗಳೂ ಕೂಡ ಯಾವಾಗಲೂ ಮುಗಿದು ಬಿಡುವುದಿಲ್ಲ. ಆಸೆಗಳು ನಮ್ಮನ್ನು ಯಶಸ್ಸಿನ ಹಾದಿಯತ್ತಲೂ ಕರೆದೊಯ್ಯಬಹುದು, ಕತ್ತಲು ತುಂಬಿದ ಸೋಲಿನ ಹಾದಿಯತ್ತಲೂ ಕರೆದೊಯ್ಯಬಹುದು. ನಾವು ಎಂತಹ ಆಸೆಗಳನ್ನು ಮನಸ್ಸಿನಲ್ಲಿ ಹೊತ್ತಿದ್ದೇವೆ ಎಂಬುದನ್ನು ಅವಲಂಬಿಸಿಯೇ ಯಶಸ್ಸೂ, ಸೋಲೂ ಇರುತ್ತದೆ.



## ಸಕಾರಾತ್ಮಕ ಆಸೆಗಳು!

**ನ**ಮ್ಮ ಕಟ್ಟುಪಾಡಿನಲ್ಲಿ ಆಸೆಗಳು ಇವೆಯೇ, ಅಥವಾ ಆಸೆಗಳ ಕಟ್ಟುಪಾಡಿನೊಳಗೆ ನಾವು ಸಿಕ್ಕಿಕೊಂಡಿದ್ದೇವಾ ಎಂಬುದನ್ನು ಅವಲಂಬಿಸಿಯೇ ನಮ್ಮ ಭವಿಷ್ಯ ರೂಪುಗೊಳ್ಳುತ್ತದೆ. ಆಸೆಗಳೇ ನಮ್ಮ ಗುರಿಯತ್ತ ನಮ್ಮನ್ನು ಕರೆದುಕೊಂಡು ಹೋಗುವ ಮಾರ್ಗದರ್ಶಿಗಳು. ತಪ್ಪಾದ ಮಾರ್ಗದರ್ಶಿಯ ಸಹಕಾರದಿಂದ ಪ್ರಯಾಣವನ್ನು ಮುಂದುವರೆಸಿದರೆ, ನಮ್ಮ ಹಾದಿಯೇ ಬದಲಾಗಿ ಹೋಗುತ್ತದೆ. ಪ್ರಾಮಾಣಿಕವಾದ ಚಿಂತನೆಯೊಂದಿಗೆ ಬೆಳವಣಿಗೆಯನ್ನು ತಂದು ಕೊಡುವ ಆಸೆಗಳೇ ನಮಗೆ ಮೆರುಗನ್ನು ತಂದುಕೊಡುವುದು. ನಕಾರಾತ್ಮಕ ಚಿಂತನೆಯನ್ನು ಬಿತ್ತಿ, ಅಳಿವುಗಳನ್ನು ಉಂಟು ಮಾಡಲು ಬಯಸುವ ಆಸೆಗಳೇ ಒಬ್ಬರ ಬದುಕನ್ನೇ ಛಿದ್ರವಾಗಿಸಬಹುದು.



## ಬರೀ ಆಸೆ ಸಾಕೇ?

**ಜೀ**ವನದಲ್ಲಿ ಮೇಲೆ ಬರಲೂ, ಅಂದುಕೊಂಡ ಗುರಿಯನ್ನು ಸಾಧಿಸಲೂ ಕೇವಲ ಆಸೆ ಪಟ್ಟರೆ ಮಾತ್ರ ಸಾಕೇ? ಒಂದು ಉದಾಹರಣೆಯ ಮೂಲಕ ಇದನ್ನು ಸ್ಪಷ್ಟಪಡಿಸಿಕೊಳ್ಳಬಹುದು. ಒಬ್ಬ ವ್ಯಕ್ತಿ ಒಂದು ಕಛೇರಿಯಲ್ಲಿ ಕೆಳಗಿನ ಹಂತದ ಉದ್ಯೋಗವನ್ನು ಮಾಡುತ್ತಿದ್ದ. ಆದರೆ ಆತ ಮುಂದಿನ ವರ್ಷಗಳಲ್ಲಿ ಕ್ರಮೇಣ ಮೇಲೆ ಮೇಲೆ ಏರಿ ಉನ್ನತ ಹುದ್ದೆಯನ್ನು ಪಡೆದು, ಒಂದು ದಿನ ಈ ಇಡೀ ಸಂಸ್ಥೆಯ ಮ್ಯಾನೇಜರ್ ಸ್ಥಾನವನ್ನು ವಹಿಸಿಕೊಳ್ಳಬೇಕೆಂದು ಆಸೆ ಪಡುತ್ತಾನೆ ಎಂದುಕೊಳ್ಳೋಣ. ಮ್ಯಾನೇಜರ್ ಕೋಣೆಯಲ್ಲಿ ತಿರುಗು ಕುರ್ಚಿಯಲ್ಲಿ ಕುಳಿತು, ಎಲ್ಲರಿಗೂ ಆದೇಶಗಳನ್ನು ನೀಡುತ್ತಿರುವಂತೆ ಆತ ಕನಸು ಕಾಣುತ್ತಾನೆ.

ಹೀಗೆ ತನ್ನ ಭವಿಷ್ಯವನ್ನು ಕುರಿತು ಕನಸು ಕಂಡರೆ ಅದೇ ಅವರನ್ನು ಉನ್ನತ ಹುದ್ದೆಗೆ ತೆಗೆದುಕೊಂಡು ಹೋಗಿ ಬಿಡುತ್ತದೆಯೇ? ಖಂಡಿತ ಇಲ್ಲ. ಭವಿಷ್ಯವನ್ನು ಕುರಿತ ಕನಸುಗಳ ಹಾಗೆಯೇ, ವರ್ತಮಾನದಲ್ಲಿ ಏನು ಮಾಡುತ್ತಿದ್ದೇವೆ ಎಂಬುದೂ ಅಷ್ಟೇ ಮುಖ್ಯ. ಭವಿಷ್ಯದಲ್ಲಿ ಅವನು ಮ್ಯಾನೇಜರ್ ಆಗಲು ಬಯಸಿದರೆ, ವರ್ತಮಾನದಲ್ಲಿ ಆತ ತನ್ನ ಕೆಲಸವನ್ನು ಖಚಿತವಾಗಿ ಸರಿಯಾಗಿ ಮಾಡಬೇಕು. ಸರಿಯಾದ ಸಮಯಕ್ಕೆ ಕೆಲಸಕ್ಕೆ ಬರುವುದು, ತನ್ನ ಕೆಲಸವನ್ನು ಸರಿಯಾಗಿ ಮಾಡುವುದು, ತಾನು ಮಾಡುವ ಕೆಲಸದ ಮೇಲೆ ಅಕ್ಕರೆ ತೋರಿಸುವುದು, ಸಂಸ್ಥೆಗೆ ವಿಶ್ವಾಸದಿಂದ ನಡೆದುಕೊಳ್ಳುವುದು, ಉನ್ನತ ಹುದ್ದೆಗೆ ತಾನು ಅರ್ಹನಾದವನು ಎಂಬುದನ್ನು ಪದೇ ಪದೇ ತೋರಿಸುವುದು... ಇತ್ಯಾದಿಗಳಲ್ಲಿ ಅವರು ಸರಿಯಾಗಿದ್ದರೆ, ಅವರ ಭವಿಷ್ಯಕ್ಕೆ ಯಾವುದೇ ತಡೆಯೂ ಇರುವುದಿಲ್ಲ. ಕೇವಲ ಭವಿಷ್ಯದ ಬಗ್ಗೆ ಕನಸುಗಳೂ, ಆಸೆಯೂ ಮಾತ್ರವೇ ಇದ್ದರೆ ಅಷ್ಟೇ ಸಾಲದು. ●

ಒಬ್ಬ ವ್ಯಕ್ತಿಯ ಮನಸ್ಸಿನಲ್ಲಿ ಆಸೆ ಮೂಡುತ್ತದೆ ಎಂದುಕೊಳ್ಳೋಣ. ಅದು ತಪ್ಪಾಗಿದ್ದಲ್ಲಿ ಮೆದುಳು ಎಚ್ಚರಿಕೆ ನೀಡುತ್ತದೆ. ಸರಿಯಾಗಿರುವಾಗ ಮೆದುಳು ಅದಕ್ಕೆ ಅಗತ್ಯವಾಗಿ ಬೇಕಾದ ಹಾದಿಯನ್ನು ತೋರಿಸುತ್ತದೆ. ಮನಸ್ಸಿಗೂ ಮೆದುಳಿಗೂ ಭಿನ್ನತೆ ಏರ್ಪಡದ ಹಾಗೆ ಆಸೆಗಳನ್ನು ಬೆಳೆಸಿಕೊಂಡರೆ, ಬದುಕು ಚೆನ್ನಾಗಿರುತ್ತದೆ.

ಮನಸ್ಸಿನ ಗುಣಮಟ್ಟವನ್ನು ಆಧರಿಸಿಯೇ ಆಸೆಗಳ ಗುಣಮಟ್ಟವೂ ಇರುತ್ತದೆ. ಬಲಹೀನವಾದ ಮನಸ್ಸು ಕೆಳಮಟ್ಟದ ವಿಷಯಗಳಿಗೇ ಆಸೆ ಪಡುತ್ತವೆ. ಬಲಶಾಲಿಯಾದ ಮನಸ್ಸೇ, ಮಹತ್ತಾದ ಸಾಧನೆಗಳಿಗೆ ಆಸೆ ಪಡುತ್ತದೆ.

ಒಬ್ಬ ವ್ಯಕ್ತಿ ತುಂಬ ದೊಡ್ಡ ದೊಡ್ಡ ವಿಷಯಗಳಿಗೆ ಆಸೆ ಪಡುವಾಗ ಅವರ ನಿರೀಕ್ಷೆಗಳೂ ದೊಡ್ಡದಾಗಿಯೇ ಇರುತ್ತವೆ. ಅದಕ್ಕಾಗಿ ಅವರ ದುಡಿಮೆಯೂ ದೊಡ್ಡ ಪ್ರಮಾಣದಲ್ಲಿಯೇ ಇರುತ್ತದೆ. ಅಂತಹ ದುಡಿಮೆಯೇ ಅವರನ್ನು ಅತ್ಯುತ್ತಮ ಸಾಧನೆಗಳನ್ನು ಮಾಡುವಂತೆ ಮಾಡುತ್ತದೆ. ಇದು ಹಲವರ ಬದುಕಿನಲ್ಲಿ ಒಳಿತನ್ನೂ ಉಂಟು ಮಾಡುತ್ತದೆ.

ಸಾಮಾನ್ಯ ಮನುಷ್ಯರು ಸಾಮಾನ್ಯ ವಿಷಯಗಳಿಗಷ್ಟೇ ಆಸೆ ಪಡುತ್ತಾರೆ. ಯಶಸ್ವೀ ಮನುಷ್ಯರೇ ತುಂಬ ಒಳ್ಳೆಯ ಸಾಧನೆಗಳಿಗೆ ಆಸೆ ಪಡುವುದು.

ನಮ್ಮ ಮನಸ್ಸು ಎಷ್ಟರ ಮಟ್ಟಿಗೆ ಆಸೆ ಪಡುತ್ತದೋ, ಅಷ್ಟರ ಮಟ್ಟಿಗಿನ ವಿಷಯಗಳನ್ನು ಮಾತ್ರವೇ ನಾವು ಮಾಡಲು ಸಾಧ್ಯ. ಮನಸ್ಸಿನ ಆಸೆಗಳಿಗೆ ಎಲ್ಲೆಗಳು ಇರುವುದಿಲ್ಲ. ಆದುದರಿಂದಲೇ ಎಲ್ಲೆಯನ್ನು ಮೀರಿದ ಒಳ್ಳೆಯ ಆಸೆಗಳನ್ನು ಮನಸ್ಸಿನಲ್ಲಿ ಬೆಳೆಸಿಕೊಳ್ಳಿ.

ಚಂಚಲತೆಯಿಲ್ಲದ ಮನಸ್ಸಿನಲ್ಲಿ ದೊಡ್ಡ ಆಸೆಗಳು ಮೂಡುವಾಗ, ಅದನ್ನು ಸಾಧಿಸಲು ಬೇಕಾದ ಹಾದಿಯೂ ದುಡಿಮೆಯ ಮಾರ್ಗವೂ ಅಲ್ಲೇ ಸೃಷ್ಟಿಯಾಗುತ್ತದೆ. ಗೊಂದಲದ ಮನಸ್ಥಿತಿ ಇರುವ ಮನುಷ್ಯರು ದೊಡ್ಡ ದೊಡ್ಡ ವಿಷಯಗಳಿಗೆ ಆಸೆ ಪಡುತ್ತಾರೆ. ಆದರೆ, ಅದನ್ನು ಪಡೆಯಲು ಅಗತ್ಯವಾದ ಹಾದಿ ಅವರ ಕಣ್ಣು ಮುಂದೆ ಇರುವುದಿಲ್ಲ. ಕಡೆಯಲ್ಲಿ ಅದು ಕೇವಲ ನಿರಾಸೆಯಲ್ಲಿಯೇ ಮುಗಿದು ಹೋಗುತ್ತದೆ.

ಸರಿಯಾದ ಆಸೆಗಳೇ ನಮ್ಮನ್ನು ಸರಿಯಾದ ನಿರ್ಧಾರ ತೆಗೆದುಕೊಳ್ಳುವಂತೆ ಮಾಡುತ್ತವೆ. ಆ ನಿರ್ಧಾರಗಳೇ ನಮ್ಮ ಕಾರ್ಯಗಳಿಗೆ ಕಾರಣವಾಗಿರುತ್ತವೆ. ಆ ಕಾರ್ಯಗಳೇ ನಮ್ಮನ್ನು ಸಾಧನೆ ಮಾಡುವವರನ್ನಾಗಿ ಬದಲಾಯಿಸುತ್ತವೆ.

ಮನುಷ್ಯನ ಮನಸ್ಸೇ ಆಸೆಗಳು ಹುಟ್ಟುವ ಗರ್ಭಕೋಶ. ಒಳ್ಳೆಯ ಆಸೆಗಳೂ ತಪ್ಪು ಆಸೆಗಳೂ ದಿನದಿನವೂ ಹುಟ್ಟುತ್ತವೆ. ಎಂತಹ ಆಸೆಗಳು ಹೆಚ್ಚಾಗಿ ಹುಟ್ಟುತ್ತವೆ ಎನ್ನುವುದನ್ನು ಅವಲಂಬಿಸಿಯೇ ಒಬ್ಬ ವ್ಯಕ್ತಿಯ ಗುಣವೂ ರೂಪುಗೊಳ್ಳುತ್ತದೆ.

ಪಾಸಿಟಿವ್ ಚಿಂತನೆಗಳನ್ನು ಬೆಳೆಸಿಕೊಂಡು, ಮನಸ್ಸಿನೊಳಗೆ ಒಳ್ಳೆಯ ವಿಷಯಗಳನ್ನು ಮಾತ್ರವೇ ಕಳಿಸಿದರೆ, ಆ ಮನಸ್ಸು ಸಕಾರಾತ್ಮಕವಾದ ಆಸೆಗಳನ್ನು ಮಾತ್ರವೇ ಸೃಷ್ಟಿಸಿಕೊಳ್ಳುತ್ತದೆ. ಹಾಗಿಲ್ಲದ ಮನಸ್ಸು ನಕಾರಾತ್ಮಕವಾಗಿಯೇ ಚಿಂತಿಸಿ, ನಕಾರಾತ್ಮಕವಾಗಿಯೇ ಕಾರ್ಯ ನಿರ್ವಹಿಸಿ, ತಪ್ಪಾದ ಆಸೆಗಳ ಕಡೆಗೆ ಆ ವ್ಯಕ್ತಿಯನ್ನು ನೂಕುತ್ತದೆ.

ಬಲಿಷ್ಠವಾದ, ಪ್ರಾಮಾಣಿಕವಾದ, ದೊಡ್ಡ ಪ್ರಮಾಣದ ಆಸೆಗಳನ್ನು ಇಟ್ಟುಕೊಂಡಿರುವ ಮನುಷ್ಯರು, ಆ ಆಸೆಗಳಿಂದ ಪ್ರೇರಣೆಯನ್ನು ಹೊಂದುತ್ತಾರೆ. ಆ ಆಸೆಗಳು ಅವರ ಕೆಲಸದ ವಿಧಾನವನ್ನು ಬದಲಾಯಿಸುತ್ತವೆ. ಅವರ ಗುಣವನ್ನು ಅವು ರೂಪಿಸುತ್ತವೆ, ಜೀವನದ ಗುರಿಯನ್ನು ಅವರಿಗೆ ಸ್ಪಷ್ಟಪಡಿಸುತ್ತವೆ, ಅವರ ಹಣೆಬರಹವೂ ಇದರಿಂದ ಬದಲಾಗಿ ಬಿಡುತ್ತದೆ! ●

# ಆಸೆಗೆ ಅಣೆಕಟ್ಟು ಹಾಕಿ!





# ನೆಲೆಯಾದ ಬದುಕಿಗೆ ಆಸೆಪಡಿ!

ಹಲವರ ಬದುಕು ಬೆಟ್ಟದ ಹಾದಿಯ ಪ್ರಯಾಣದಂತಿರುತ್ತದೆ! ಅನಿರೀಕ್ಷಿತ ರೀತಿಯಲ್ಲಿ ಅವರ ಪ್ರಾಣ ಹೋಗಬಹುದು. ದಿಢೀರನೆ ಕುಸಿತಗಳಾಗಬಹುದು. ಒಂದೆಡೆ ಬಿಸಿಲು ಸುಡುತ್ತಿದ್ದರೆ, ಇನ್ನು ಸ್ವಲ್ಪ ಮುಂದೆ ಸಾಗುತ್ತಿದ್ದಂತೆಯೇ ಜೋರಾಗಿ ಮಳೆ ಸುರಿಯಬಹುದು. ಹೀಗೆ ಏನನ್ನೂ ನಿಶ್ಚಿತವಾಗಿ ಹೇಳಲು ಸಾಧ್ಯವಾಗುವುದಿಲ್ಲ. ನಡೆದು ಸಾಗುವಾಗ ದೂರದಲ್ಲಿ ಕಾಣುವ ತಿರುವು ಮುಗಿದ ಕೂಡಲೇ ಅಲ್ಲಿ ಮುಂದೇನು ಕಾಣಿಸಬಹುದು ಎಂಬುದನ್ನು ಊಹಿಸಲೂ ಸಾಧ್ಯವಾಗುವುದಿಲ್ಲ. ತುಂಬಾ ಜನರು ಇಷ್ಟಪಟ್ಟೋ, ಪಡದೆಯೋ ಇಂತಹ ಅನಿರ್ದಿಷ್ಟ ಹಾದಿಯಲ್ಲೇ ಬದುಕಿನ ಪ್ರಯಾಣವನ್ನು ಮಾಡುತ್ತಿದ್ದಾರೆ. ಆದುರಿಂದಲೇ ಹಲವರ ಆಸೆ ನೆಲೆಯಾದ, ಸ್ಥಿರವಾದ ಜೀವನವನ್ನು ನಡೆಸಬೇಕು ಎಂಬುದೇ ಆಗಿರುತ್ತದೆ.

ಕೆಲಸದ ನಿಮಿತ್ತ ಯಾವ್ಯಾವುದೋ ಊರುಗಳಿಗೆ ಪದೇಪದೇ ಹೋಗಬೇಕಾದ ಪರಿಸ್ಥಿತಿಯಲ್ಲಿ ಕಾರ್ಯ ನಿರ್ವಹಿಸುವ ಒಬ್ಬ ವ್ಯಕ್ತಿ, ಎಲ್ಲಾದರೂ ಒಂದು ಸ್ಥಳದಲ್ಲಿ ಸ್ಥಿರವಾಗಿ ವಾಸ ಮಾಡಿಕೊಂಡು, ಅಲ್ಲೇ ಕೆಲಸ ಮಾಡುವುದಕ್ಕಾಗಿ ಆಸೆ ಪಡುತಾನೆ. ಹಾಗೆಯೇ, ಪ್ರತಿನಿತ್ಯವೂ ಎಷ್ಟು ಆದಾಯ ಬರಬಹುದು ಎಂಬುದನ್ನು ನಿಶ್ಚಿತವಾಗಿ ಗಣಿಸಲು ಸಾಧ್ಯವಿಲ್ಲದಂತಹ ಒಬ್ಬ ಸಾಮಾನ್ಯ ವ್ಯಾಪಾರಿ, ಸ್ಥಿರವಾದ ಆದಾಯ ಬರುವಂತಹ ಉದ್ಯೋಗಕ್ಕಾಗಿ ಆಸೆ ಪಡುತ್ತಾನೆ. ಒಂದು ಸ್ವಂತ ಮನೆ, ಅರ್ಥ ಮಾಡಿಕೊಳ್ಳುವಂತಹ ಜೀವನ ಸಂಗಾತಿ, ಮಕ್ಕಳಿಗೆ ಒಂದು ಒಳ್ಳೆಯ ಉದ್ಯೋಗಾವಕಾಶ ಒದಗಿಸುವಂತಹ ವಿದ್ಯಾಭ್ಯಾಸ... ಹೀಗೆ ಮನುಷ್ಯರ ಆಸೆಗಳೂ, ಕನಸುಗಳೂ ಸ್ಥಿರವಾದ ಜೀವನಕ್ಕೆ ಸಂಬಂಧಿಸಿದವುಗಳೇ ಆಗಿರುತ್ತವೆ. 'ಜೀವನದಲ್ಲಿ ಸಂಕಟ ಇರಬಾರದು, ಕೇವಲ ಸಂತೋಷ ಮಾತ್ರವೇ ಇರಬೇಕು' ಎನ್ನುವುದೇ ಬಹುಪಾಲು ಮನುಷ್ಯರ ಆಸೆಯಾಗಿರುತ್ತದೆ.

ಜೀವನದಲ್ಲಿ 40 ವರ್ಷಗಳ ನಂತರ ಹೊಸ ಕ್ಷೇತ್ರದಲ್ಲಿ ರಿಸ್ಕ್ ತೆಗೆದುಕೊಳ್ಳುವ ಹಲವರು, ಮೊದಲು ತಮ್ಮ ಕುಟುಂಬಕ್ಕೆ ಸ್ಥಿರವಾದ ಒಂದು ಆದಾಯ ಬರುವಂತೆ ಏರ್ಪಾಟು ಮಾಡಿದ ನಂತರವಷ್ಟೇ ಈ ಹೊಸ ರಿಸ್ಕ್‌ನೊಳಗೆ ಕೈ ಹಾಕುತ್ತಾರೆ. ಕೆಲವರಿಗೆ ಸ್ಥಿರವಾದ ಜೀವನ ದೊರಕುತ್ತದೆ. ಹಲವರಿಗೆ ಅದು ನೆರವೇರದ ಆಸೆಯಾಗಿಯೇ ಉಳಿದು ಬಿಡುತ್ತದೆ.

ಮನುಷ್ಯರ ಹಾಗೆಯೇ ಎಲ್ಲಾ ಜೀವಿಗಳಿಗೂ ಸ್ಥಿರವಾದ ಜೀವನದ ಆಸೆ ಇದ್ದೇ ಇರುತ್ತದೆ. ಆದರೆ ಅವುಗಳಿಗೆ ಅದು ದೊರಕುವುದಿಲ್ಲ. ಚಳಿಗಾಲದಲ್ಲಿ ತಮ್ಮ ದೇಶದ ಚಳಿಯನ್ನು ತಾಳಲು ಸಾಧ್ಯವಿಲ್ಲದೆ ಹಲವು ಬಗೆಯ ಹಕ್ಕಿಗಳು ಭಾರತಕ್ಕೆ ವಲಸೆ ಬರುತ್ತವೆ. ಅವುಗಳಿಗೆ ಬದುಕುವ ಆಸೆ ಇರುತ್ತದೆ. ಆದರೆ ಅವುಗಳಿಗೆ ಸ್ಥಿರವಾದ ಒಂದು ಆವಾಸ ಸ್ಥಾನ ದೊರಕುವುದಿಲ್ಲ. ಬೇಸಿಗೆಯಲ್ಲಿ ಕಾಡಿನಲ್ಲಿ ಅಹಾರ ದೊರಕದೇ ಇರುವಾಗ ಹಲವು ಬಗೆಯ ಪ್ರಾಣಿಗಳು ಕೂಡ ಹೀಗೆ ವಲಸೆ ಹೋಗುತ್ತವೆ. ಬೇಟೆಯಾಡುವ ಪ್ರಾಣಿಗಳಿಂದ ತಪ್ಪಿಸಿಕೊಳ್ಳಲು ಚಿಕ್ಕಚಿಕ್ಕ ಪ್ರಾಣಿಗಳು ಯಾವಾಗಲೂ ಜೀವಭಯದಿಂದ ತಮ್ಮ ಆವಾಸ ಸ್ಥಾನವನ್ನು ಬದಲಾಯಿಸುತ್ತಲೇ ಇರುತ್ತವೆ.

ಸ್ಪರ್ಧಾತ್ಮಕ ವಾತಾವರಣ, ಸುರಕ್ಷಿತವಲ್ಲದ ಉದ್ಯೋಗ, ಅವಕಾಶಗಳನ್ನು ಕಿತ್ತುಕೊಳ್ಳುವ ಮನುಷ್ಯರು, ತೀರ ಆಪ್ತರಾದವರೇ ಮೋಸ ಮಾಡುವ ರೀತಿ.... ಹೀಗೆ ಎಲ್ಲವುಗಳನ್ನೂ ಮೀರಿ, ಸ್ಥಿರವಾದ ಒಂದು ಜೀವನವನ್ನು ರೂಪಿಸಿಕೊಳ್ಳುವುದು ಹಲವರಿಗೆ ಸವಾಲಾಗಿಯೇ ಇರುತ್ತದೆ. ಇದೆಲ್ಲವನ್ನೂ ಮೀರಿ, ಜೊತೆಯಲ್ಲಿರುವ ಬಂಧುಬಾಂಧವರನ್ನೂ, ಸ್ನೇಹಿತರನ್ನೂ, ಸ್ಥಿರವಾದ ಆದಾಯ ದೊರಕುವ ಪರಿಸ್ಥಿತಿಯನ್ನೂ ನಿರ್ಮಿಸಿಕೊಂಡವರು ಅದೃಷ್ಟಶಾಲಿಗಳು.

ಸ್ಥಿರವಾದ ಜೀವನ ದೊರೆತ ನಂತರ ಹಲವರು ರಿಸ್ಕ್ ತೆಗೆದುಕೊಳ್ಳಲು ಇಷ್ಟಪಡುವುದಿಲ್ಲ. ಅವರ ಜೀವನ ಅದರ ನಂತರ ಹೆಚ್ಚೇನೂ ಬದಲಾಗುವುದಿಲ್ಲ. ತುಂಬಾ ಜನರು ಇದರಿಂದ ತಮ್ಮ ಸಾಮರ್ಥ್ಯಕ್ಕೂ ಅರ್ಹತೆಗೂ ಸಂಬಂಧವೇ ಇಲ್ಲದ, ಸಾಮಾನ್ಯವಾದ ಕೆಲಸಗಳನ್ನು ಮಾಡುತ್ತಿರುತ್ತಾರೆ. 'ನನ್ನಿಂದ ಇದನ್ನು ಮೀರಿಯೂ ಸಾಧಿಸಲು ಸಾಧ್ಯ' ಎಂದು ಯೋಚಿಸುವವರು ಮುನ್ನುಗ್ಗಿ ಯಾವುದೇ ರಿಸ್ಕ್ ತೆಗೆದುಕೊಳ್ಳಬಹುದು.

ನನ್ನ ಮನೆ ಹೀಗಿರಬೇಕು, ಇಂತಹವರೆಲ್ಲ ನನ್ನ ಗೆಳೆಯರಾಗಿರಬೇಕು, ನನ್ನ ಬದುಕಿನ ಶೈಲಿ ಹೀಗೆ ಬದಲಾಗಬೇಕು, ಇಂತಹ ಕೆಲಸವನ್ನು ನಾನು ಮಾಡಬೇಕು ಎಂದು ಆಸೆ ಪಡುವವರೇ ತಮ್ಮ ಸುತ್ತಲೂ ಇರುವ ಚಿಕ್ಕ ಜಗತ್ತನ್ನು ಬದಲಾಯಿಸುವುದು. ಸ್ಥಿರವಾದ ಜೀವನ ಇರಬೇಕು, ಸರಿ. ಆದರೆ, ಅರ್ಹತೆಗೂ ಸಾಮರ್ಥ್ಯಕ್ಕೂ ಕಡಿಮೆಯಾದ ಒಂದು ಜೀವನವನ್ನು ಜೀವಿಸುವುದು ನಮ್ಮನ್ನು ನಾವೇ ಮೋಸ ಮಾಡಿಕೊಂಡು ಬದುಕಿದಂತೆ!

‘ಆಸೆಗಳೇ ದುಃಖಕ್ಕೆ ಮೂಲ’ ಎನ್ನುವ ಗೌತಮ ಬುದ್ಧನ ಮಾತುಗಳನ್ನು ಹೇಳಿ, ‘ಯಾವುದಕ್ಕೂ ಆಸೆಪಡಬೇಡ’, ಎಂದು ಹಿರಿಯರು ಉಪದೇಶಿಸುತ್ತಾರೆ. ಆದರೆ, ‘ಆಸೆಗಳೇ ಇಲ್ಲದೆ ಬದುಕಬೇಕು’ ಎಂದು ಯೋಚಿಸುವುದು ಕೂಡ ಒಂದು ಬಗೆಯ ಆಸೆ ತಾನೇ! ಆದುದರಿಂದ ‘ಎಲ್ಲಕ್ಕೂ ಆಸೆ ಪಡು’ ಎಂದು ಹೇಳುವವರೂ ಇದ್ದಾರೆ.

ಕಾಡಿನಲ್ಲಿ ಒಂದು ಕೋತಿ ವಾಸ ಮಾಡುತ್ತಿತ್ತು. ಒಮ್ಮೆ ಅದಕ್ಕೆ ಕಾಯಿಲೆ ಬಂದುದರಿಂದ ಅದರ ದೇಹದಲ್ಲೆಲ್ಲ ಹೇನು ತುಂಬಿಕೊಂಡಿತು. ತಲೆಯಲ್ಲಿ ಮಾತ್ರವೇ ಅಲ್ಲದೆ, ದೇಹವಿಡೀ ರೋಮಗಳಲ್ಲೆಲ್ಲ ನೂರಾರು ಸಂಖ್ಯೆಯಲ್ಲಿ ಹೇನುಗಳು ಸೇರಿಕೊಂಡವು. ಇದರಿಂದ ಆ ಕೋತಿ ಕೃಶವಾಗಿ, ರೋಗಿಯಂತೆ ಬಲಹೀನವಾಗಿ ಹೋಯಿತು.

ಒಂದು ದಿನ ಕಾಡಿನಲ್ಲಿದ್ದ ಕೊಳಕ್ಕೆ ನೀರು ಕುಡಿಯಲು ಹೋಯಿತು ಆ ಕೋತಿ. ದಿನವೂ ಅದು ಕೊಳದ ದಡದಲ್ಲಿ ನೀರಿನತ್ತ ಚಾಚಿ–ಕೊಂಡಿದ್ದ ಒಂದು ಮರದ ರೆಂಬೆಯ ಮೇಲೆ ಕುಳಿತುಕೊಂಡು, ಅಲ್ಲಿಂದಲೇ ಬಾಗಿ ನೀರು ಕುಡಿಯುವುದು ಅದಕ್ಕೆ ರೂಢಿ. ಆ ದಿನ ಮಳೆ ಹೆಚ್ಚಾಗಿ ಬಂದುದರಿಂದ ಮರವೇ ಮುಳುಗಿ ಹೋಗುವಷ್ಟು ನೀರು ತುಂಬಿಕೊಂಡಿತ್ತು. ಆದುದರಿಂದ ಅದು ಮರದ ರೆಂಬೆಯಲ್ಲಿ ಕುಳಿತು, ಅಲ್ಲಿಂದ ನೀರು ಕುಡಿಯಲು ಸಾಧ್ಯವಾಗಲಿಲ್ಲ. ಕೊಳದಲ್ಲಿಳಿದೇ ನೀರು ಕುಡಿಯಬೇಕಾಗಿತ್ತು.

ಕೋತಿ ಕೊಳದೊಳಗೆ ಇಳಿದಾಗ ಅದರ ಕಾಲುಗಳು ನೀರಿನಲ್ಲಿ ಮುಳುಗಿದವು. ಆಗ ಅದರ ಕಾಲುಗಳಲ್ಲಿದ್ದ ಹೇನುಗಳು ದೇಹದ ಮೇಲ್ಭಾಗಕ್ಕೆ ಹತ್ತಿಕೊಂಡದ್ದನ್ನು ಅದು ಗಮನಿಸಿತು. ಈಗ ಅದು ಇನ್ನೂ ಸ್ವಲ್ಪ ಆಳಕ್ಕಿಳಿದು ನೋಡಿತು. ಆಗಲೂ ಹೇನುಗಳು ನೀರಿನಿಂದ ತಪ್ಪಿಸಿಕೊಳ್ಳುವುದಕ್ಕಾಗಿ ಇನ್ನೂ ಮೇಲೆ ಹತ್ತಿದವು. ಆಗ ಕೋತಿ ಒಂದು ಉಪಾಯವನ್ನು ಯೋಚಿಸಿತು. ತನ್ನ ಕೈಯಲ್ಲಿ ಒಂದು ಚಿಕ್ಕ ರೆಂಬೆಯನ್ನು ಹಿಡಿದುಕೊಂಡು, ಕೈಯನ್ನು ಮೇಲೆತ್ತಿ ಹಿಡಿದು, ನೀರಿನಲ್ಲಿ ಇನ್ನೂ ಆಳಕ್ಕೆ ಇಳಿಯಿತು. ಹೆಚ್ಚೂ ಕಡಿಮೆ ಕೋತಿ ಪೂರ್ಣವಾಗಿ ನೀರಿನಲ್ಲಿ ಮುಳುಗುವಂತೆ ನಿಂತುಕೊಂಡಿತು. ಅದರ ಮೈಯಲ್ಲಿದ್ದ ಎಲ್ಲಾ ಹೇನುಗಳೂ ಕೈಯಲ್ಲಿದ್ದ ರೆಂಬೆಯನ್ನೇರಿ ಬಿಟ್ಟವು. ಆಗ ಕೋತಿ ತನ್ನ ಕೈಯಲ್ಲಿದ್ದ ಆ ರೆಂಬೆಯನ್ನು ನೀರಿಗೆ ಎತ್ತಿ ಹಾಕಿ, ದಡಕ್ಕೆ ಬಂದು ಮುಟ್ಟಿತು. ಈಗ ಅದರ ಮೈಯಲ್ಲಿ ಹೇನುಗಳೇ ಇರಲಿಲ್ಲ.

ಕೋತಿ ತನಗೆ ಅಂಟಿಕೊಂಡಿದ್ದ ಹೇನುಗಳ ಕಾಟದಿಂದ ಸಂಪೂರ್ಣ ಮುಕ್ತವಾದಂತೆ, ನಮ್ಮಿಂದಲೂ ಆಸೆಗಳಿಂದ ಬಿಡುಗಡೆ ಹೊಂದಲು ಸಾಧ್ಯವೇ? ಯಾವುದೇ ಬಗೆಯ ಆಸೆಗಳೂ ಇಲ್ಲದೆ ಬದುಕಲು ಸಾಧ್ಯವೇ? ‘ಆಸೆಗಳೇ ಕಷ್ಟಗಳಿಗೆ ಮೂಲ’ ಎಂದು–ಕೊಂಡು ಅವುಗಳನ್ನು ಬಿಟ್ಟುಬಿಟ್ಟರೆ, ಆಸೆಗಳೇ ಇಲ್ಲದ ಜೀವನ ಅರ್ಥಪೂರ್ಣವಾಗಿ ಬದಲಾಗುತ್ತದೆಯೇ? ಅಂತಹ ಜೀವನದಲ್ಲಿ ಎಂತಹ ಸ್ವಾರಸ್ಯ ನಮಗೆ ದೊರೆಯುತ್ತದೆ?

# ಆಸೆಗಳೇ ಇಲ್ಲದೆ ಬದುಕಬೇಕೇ?





ಆಸೆ ಪಡುವುದರಲ್ಲಿ ಯಾವ ತಪ್ಪೂ ಇಲ್ಲ. ನಮ್ಮ ಜೀವನದಲ್ಲಿ ಖಂಡಿತವಾಗಿಯೂ ಅವುಗಳಿಗೆ ಸ್ಥಾನ ನೀಡಲೇ ಬೇಕು. ಮೂಲಭೂತ ಅವಶ್ಯಕತೆಗಳಿಗಾಗಿ ಏಳುವ ಆಸೆಗಳಿಗೂ, ಆಡಂಬರಕ್ಕಾಗಿ ಏಳುವ ಆಸೆಗಳಿಗೂ ನಡುವೆ ವ್ಯತ್ಯಾಸ ಇದೆ. ಆಹಾರ, ಬಟ್ಟೆ, ಮನೆ, ಕುಟುಂಬದ ಆರ್ಥಿಕ ಅವಶ್ಯಕತೆಗಳು, ಮೂಲಭೂತ ಅವಶ್ಯಕತೆಗಳು ಇತ್ಯಾದಿಗಳನ್ನು ಪಡೆಯುವುದ್ಕಾಗಿ ಆಸೆ ಪಡುವುದರಲ್ಲಿ ತಪ್ಪಿಲ್ಲ. ಆ ಆಸೆಗಳು ನೆರವೇರುವಾಗ ಸಂತೋಷವೂ ದೊರಕುತ್ತದೆ. ತನ್ನ ಅರ್ಹತೆಗೂ ಅನುಕೂಲತೆಗೂ ಮೀರಿದ ಆಡಂಬರಗಳಿಗಾಗಿ ವ್ಯಕ್ತಿಗಳು ಆಸೆ ಪಡುವಾಗ ಅವರಿಗೆ ಸಂತೋಷವೋ, ನೆಮ್ಮದಿಯೋ ದೊರೆಯುವುದಿಲ್ಲ. ಆ ಆಸೆಗಳು ನೆರವೇರದಿದ್ದಲ್ಲಿ ಅವರು ನಿರಾಶೆಯನ್ನೂ ಅನುಭವಿಸುತ್ತಾರೆ. ಜೀವನದಲ್ಲಿ ನೆಮ್ಮದಿಯನ್ನೂ ಕಳೆದುಕೊಳ್ಳುತ್ತಾರೆ.

ಆಸೆಗಳಿಗೆ ಅಂತ್ಯವೆಂಬುದೇ ಇಲ್ಲ. ಒಂದು ನೆರವೇರಿದರೆ, ಇನ್ನೊಂದು ಹೊಸ ಆಸೆ ಮನಸ್ಸಿನಲ್ಲಿ ಏಳುತ್ತದೆ. ಅದು ನಮ್ಮನ್ನು ನೆಮ್ಮದಿಯಿಲ್ಲದವರನ್ನಾಗಿ ಮಾಡುತ್ತದೆ. ಯಾವುದೇ ಪರಿಸ್ಥಿತಿಯಲ್ಲೇ ಆದರೂ ನಿರಂತರ ಸಂತೋಷ ಹಾಗೂ ನೆಮ್ಮದಿಯನ್ನು ನೀಡುವುದಿಲ್ಲ. ತೃಪ್ತಿ ಎನ್ನುವ ಅಂತಿಮಚುಕ್ಕೆಯನ್ನು ಪಡೆದಾಗಲೇ ಮನಸ್ಸು ನೆಮ್ಮದಿಯನ್ನು ಹೊಂದಲು ಸಾಧ್ಯವಾಗುತ್ತದೆ.

ಉದಾಹರಣೆಗೆ ಒಂದು ಟಿ.ವಿ.ಯನ್ನು ಹೊಸದಾಗಿ ಕೊಳ್ಳುತ್ತೀರಿ ಎಂದಿಟ್ಟುಕೊಳ್ಳೋಣ. 'ನಮ್ಮ ಮನೆಯಲ್ಲಿ ಎಲ್ಲರೂ ಮನರಂಜನೆ ಪಡೆಯಲು ಒಂದು ಒಳ್ಳೆಯ ಟಿ.ವಿ.ಯನ್ನು ಕೊಳ್ಳಬೇಕು' ಎಂದು ನೀವಂದುಕೊಳ್ಳುವುದು ಸರಿ. ಆದರೆ ಅದಕ್ಕಾಗಿ ನಿಮ್ಮ ಆದಾಯವನ್ನು ಅನುಸರಿಸಿ, ಮನೆಯ ವಿಸ್ತೀರ್ಣವನ್ನು ಅವಲಂಬಿಸಿ ಸರಿಯಾದ ಯೋಜನೆ ಹಾಕಿಕೊಂಡು ಅದನ್ನು ಕೊಳ್ಳಬೇಕು. ಹಾಗೆ ಅದನ್ನು ಕೊಂಡ ಮೇಲೆ ನಮ್ಮ ಮನಸ್ಸಿಗೆ ನೆಮ್ಮದಿ ದೊರಕುತ್ತದೆ. ಆದರೆ, 'ಪಕ್ಕದ ಮನೆಯಲ್ಲಿರುವುದಕ್ಕಿಂತಲೂ ದೊಡ್ಡ ಟಿ.ವಿ.ಯನ್ನು ಕೊಳ್ಳಬೇಕು' ಎಂದೋ, 'ನಮ್ಮ ಬಂಧುಗಳ ಮನೆಯಲ್ಲಿರುವಂತಹ ಟಿ.ವಿ.ಯನ್ನು ಕೊಳ್ಳಬೇಕು' ಎಂದೋ ಆಸೆಪಡುವುದು ಸರಿಯಲ್ಲ! ಹಾಗೆ ಕೊಳ್ಳುವ ಟಿ.ವಿ. ತಾತ್ಕಾಲಿಕ ಸಂತೋಷವನ್ನು ಬೇಕಾದರೆ ನೀಡಬಹುದು ಅಷ್ಟೇ. ಅವರ ಮನೆಯಲ್ಲಿರುವ ಟಿ.ವಿ. ಬದಲಾದ ಕೂಡಲೇ ನಿಮ್ಮ ಸಂತೋಷವನ್ನೂ ಕಳೆದುಕೊಳ್ಳುವಿರಿ.

ಹಲವು ವಸ್ತುಗಳು ನಮಗೆ ಹೀಗೆ ತಾತ್ಕಾಲಿಕ ಸಂತೋಷವನ್ನು ಮಾತ್ರವೇ ನೀಡುತ್ತವೆ. 'ನಾವು ಅಂದುಕೊಂಡದ್ದನ್ನು ಪಡೆದುಕೊಳ್ಳುತ್ತೇವೆ' ಎನ್ನುವ ಹೆಮ್ಮೆ ನಮ್ಮಲ್ಲಿ ಮೂಡುತ್ತದೆ. ಆರಂಭದಲ್ಲಿರುವ ಆ ಸಂತೋಷ, ಕೆಲವೇ ದಿನಗಳಲ್ಲಿ ಕಾಣದೆ ಹೋಗುತ್ತದೆ. ನಾವು ಅದರ ಮೇಲಿನ ಆಕರ್ಷಣೆಯನ್ನು ಕಳೆದುಕೊಳ್ಳುತ್ತೇವೆ. ಬೇರೆ ಯಾವುದೋ ಒಂದು ವಸ್ತುವಿನ ಮೇಲೆ ನಾವು ಆಸೆ ಪಡುತ್ತೇವೆ ಎಂದುಕೊಳ್ಳಿ. ಹೀಗೆ ಒಂದು ಸರಪಳಿಯಂತೆ ಆಸೆಗಳು ಒಂದರ ನಂತರ ಒಂದರಂತೆ ಬದಲಾಗುತ್ತಲೇ ಇರುತ್ತವೆ.

ಮನೆ, ಕಾರು, ಆದಾಯ, ಅನುಕೂಲ, ಆಡಂಬರ ಜೀವನ ಹೀಗೆ ಎಲ್ಲಾ ಆಸೆಗಳೂ ನೆರವೇರಿದರೆ ನಿರಂತರ ಸಂತೋಷ ದೊರಕುತ್ತದೆ ಎಂದು ಭಾವಿಸುವವರು ಒಂದು ವಿಷಯವನ್ನು ಅರ್ಥ ಮಾಡಿಕೊಳ್ಳಬೇಕು. ಒಬ್ಬರ ಸಂತೋಷಕ್ಕೆ ಇಂತಹ ಹಲವು ವಸ್ತುಗಳು ಮಾತ್ರವೇ ಕಾರಣ ಎಂದಾದರೆ, ಏಳೆಂಟು ಮನೆಗಳು, ಸಾಲು ಸಾಲು ದುಬಾರಿ ಕಾರುಗಳು, ಕೋಟಿಗಟ್ಟಲೆ ಆದಾಯ ನೀರುವ ಉದ್ಯಮ... ಹೀಗೆ ಜೀವಿಸುವ ಕೋಟ್ಯಾಧಿಪತಿಗಳೆಲ್ಲರೂ ಸಂತೋಷದಿಂದ ಬದುಕಬೇಕಾಗಿತ್ತಲ್ಲವೇ!? ಆದರೆ ಹಾಗೆ ಎಲ್ಲರೂ ಸಂತೋಷದಿಂದ ಇಲ್ಲ ಎಂಬುದೇ ನಿಜ. ಬಡತನವೋ, ಅಭಾವವೋ ಆ ಕೋಟೀಶ್ವರರ ಜೀವನದಲ್ಲಿ ಇಲ್ಲದೇ ಇರಬಹುದು. ಆದರೆ, ಅವರ ಆಸೆಗಳು ಇನ್ನೂ ದೊಡ್ಡದಾಗಿರಬಹುದು.

ಆಸೆಗಳು ಹೇಗೆ ಇರಬೇಕು ಎನ್ನುವುದಕ್ಕೆ ಉದಾಹರಣೆಯಾಗಿ ಒಂದು ಕಥೆಯಿದೆ:

ಹೇಗಾದರೂ ಶ್ರೀಮಂತನಾಗಬೇಕು ಎಂದು ಒಬ್ಬ ಯುವಕ ಆಸೆ ಪಟ್ಟ. ದೇವರನ್ನು ಕುರಿತು ಕಠಿಣವಾಗಿ ತಪಸ್ಸು ಮಾಡಿದರೆ, ದೇವರು ಪ್ರತ್ಯಕ್ಷನಾಗಿ ವರ ನೀಡುತ್ತಾನೆ' ಎಂದು ಒಂದು ಉಪನ್ಯಾಸದಲ್ಲಿ ಅವನು ಕೇಳಿಸಿಕೊಂಡ. ಅದರಂತೆಯೇ ಅವನು ಕಾಡಿಗೆ ಹೋಗಿ ಒಂಟಿಯಾಗಿ ತಪಸ್ಸು ಮಾಡತೊಡಗಿದ. ದೇವರು ತನ್ನ ತಪಸ್ಸಿಗೆ ಮೆಚ್ಚಿ ಪ್ರತ್ಯಕ್ಷವಾದರೆ, ರಾಶಿರಾಶಿ ಬಂಗಾರದ ಆಭರಣಗಳು, ಪೆಟ್ಟಿಗೆ ಪೆಟ್ಟಿಗೆ ಹಣ, ಅಪಾರವಾದ ಜಮೀನು, ವಿಶಾಲವಾದ ಮಹಡಿ ಮನೆ, ಹೀಗೆ ಎಲ್ಲವನ್ನೂ ಸಾಮರ್ಥ್ಯವಾಗಿ ಒಂದೇ ಒಂದು ವರದಲ್ಲಿ ಕೇಳಿ ಪಡೆದುಕೊಳ್ಳಬೇಕು ಎಂದು ಮನಸ್ಸಿನಲ್ಲೇ ನಿಶ್ಚಯಿಸಿಕೊಂಡ. ಆದರೆ, ಹಲವು ವರ್ಷಗಳು ಅವನು ಕಠಿಣ ತಪಸ್ಸನ್ನು ಮಾಡಿದರೂ ದೇವರು ಪ್ರತ್ಯಕ್ಷನಾಗಲೇ ಇಲ್ಲ.

ಇದರ ನಡುವೆ ಅವನಿಗೆ ವಯಸ್ಸೂ ಆಗಿ ಬಿಟ್ಟಿತು. ನೋಡಲು ಸನ್ಯಾಸಿಯಂತೆ ಆತನ ರೂಪ ಬದಲಾಗಿತ್ತು. ಅವನು ಕಾಡಿನಲ್ಲಿ ಜೀವಿಸುತ್ತಿದ್ದುದರಿಂದ ತುಂಬಾ ಜನರು ಅವನ ಬಳಿಗೆ ಬಂದು ಶಿಷ್ಯರಾಗಿ ಸೇರಿಕೊಂಡರು. ಹೀಗೆ ಅಲ್ಲಿ ಒಂದು ಆಶ್ರಮ ನಿರ್ಮಾಣವಾಯಿತು. ಅಕ್ಕಪಕ್ಕದ ಹಳ್ಳಿಗಳಲ್ಲಿದ್ದ ಜನರು ಬಂದು ಅಗತ್ಯವಾದ ಸಹಾಯ ಮಾಡಿ ಹೋಗುತ್ತಿದ್ದರು. ಇಷ್ಟು ದಿನಗಳ ಕಾಲ ತಾನು ಗಳಿಸಿದ್ದ ಆಧ್ಯಾತ್ಮಿಕ ಅನುಭವಗಳನ್ನು ಅವನು ತನ್ನ ಶಿಷ್ಯರಿಗೆ ಬೋಧಿಸತೊಡಗಿದ. ಇದರ ಪರಿಣಾಮವಾಗಿ ಅವನ ಮನಸ್ಸಿನಲ್ಲಿದ್ದ ಎಲ್ಲ ಆಸೆಗಳೂ ಹೊರಟು ಹೋಗಿ, ಒಂದು ಬಗೆಯ ನೆಮ್ಮದಿ ಅವನ ಮನಸ್ಸಿನೊಳಗೆ ನೆಲೆಸಿತು.

ಒಂದು ದಿನ ಅವನು ಪ್ರಾರ್ಥನೆ ಮಾಡುತ್ತಿದ್ದಾಗ ದಿಢೀರನೆ ದೇವರು ಅವನ ಮುಂದೆ ಪ್ರತ್ಯಕ್ಷನಾದ. 'ನಿನಗೇನು ಬೇಕು?' ಎಂದು ಕೇಳಿದ. ಅವನಿಗೆ ಈಗ ಗೊಂದಲ. 'ನಾನು ತುಂಬಾ ನಿರೀಕ್ಷೆ ಮತ್ತು ಆಸೆಗಳೊಂದಿಗೆ ತಪಸ್ಸು ಮಾಡಿದಾಗ ನೀನು ಪ್ರತ್ಯಕ್ಷನಾಗಲಿಲ್ಲ. ಈಗ ನನ್ನೊಳಗೆ ಯಾವುದೂ ಆಸೆಗಳಿಲ್ಲ. ಈಗ ಬಂದು ಏನು ವರ ಬೇಕೆಂದು ಕೇಳುತ್ತಿರುವೆಯಲ್ಲ?' ಎಂದು ಕೇಳಿದ. 'ನಿನ್ನನ್ನು ನಾನು ಭೇಟಿಯಾಗಲು ತಡೆಯಾಗಿದ್ದುದೇ ಆ ಆಸೆಗಳು' ಎಂದ ದೇವರು.

ತೃಪ್ತಿ ನೀಡುವ ಆಸೆಗಳೊಂದಿಗೆ ಜೀವಿಸುವುದೇ ನೆಮ್ಮದಿಯಾದ ಜೀವನ!



# ಆಸೆಯೂ ಯಶಸ್ಸೂ...!

ಒಂದು ಗ್ರಾಮದಲ್ಲಿ ಒಬ್ಬ ಕಲ್ಲುಕುಟಿಗ ಇದ್ದ. ದಿನವೂ ಅವನು ಹಲವು ಗಂಟೆಗಳ ಕಾಲ ಶ್ರಮಪಟ್ಟು ಕಲ್ಲು ಒಡೆದು ದುಡಿದು ಸಂಪಾದಿಸಿದರೆ ಮಾತ್ರವೇ ಅವನ ಕುಟುಂಬ ಅಂದು ಊಟ ಮಾಡಲು ಸಾಧ್ಯವಾಗುತ್ತಿದ್ದುದು. ಒಂದು ದಿನ ಅವನು ಕಲ್ಲು ಒಡೆಯುತ್ತಿರುವಾಗ, ಬೀದಿಯಲ್ಲಿ ರಾಜ ತನ್ನ ಪರಿವಾರದೊಂದಿಗೆ ನಗರ ಪ್ರದಕ್ಷಿಣೆ ಬರುತಿದ್ದುದನ್ನು ನೋಡಿದ. 'ರಾಜನಾದರೆ ಏನೂ ಕಷ್ಟ ಪಡಬೇಕಾಗಿಲ್ಲ. ಅವನ ಎಲ್ಲಾ ಕೆಲಸಗಳನ್ನೂ ಮಾಡಲು ತುಂಬಾ ಜನ ಸೇವಕರು ಅವನ ಜೊತೆ ಇರುತ್ತಾರೆ. ರಾಜ ಯಾವಾಗಲೂ ಆನಂದದಿಂದ ಮನರಂಜನೆಯಲ್ಲಿ ಕಾಲ ಕಳೆಯುತ್ತಾನೆ. ನಾನೂ ರಾಜನಾಗಿದ್ದರೆ ಚೆನ್ನಾಗಿರುತ್ತಿತ್ತು, ಇಷ್ಟ ಕಷ್ಟಪಡಬೇಕಾಗಿರಲಿಲ್ಲ...' ಎಂದು ಮನಸ್ಸಿನಲ್ಲೇ ಅಂದುಕೊಂಡ.

ಮರುಕ್ಷಣವೇ ಅವನು ಅದು ಹೇಗೋ ರಾಜನಾಗಿ ಬಿಟ್ಟಿದ್ದ! ಅವನಿಗೇ ಆಶ್ಚರ್ಯ! ಬಿಸಿಲಿನಲ್ಲಿ ಅವನು ನಗರ ಪ್ರದಕ್ಷಿಣೆ ಮಾಡುವಾಗ ಬಿಸಿಲಿನ ಬೇಗೆಯನ್ನು ತಾಳಿಕೊಳ್ಳಲು ಅವನಿಂದ ಸಾಧ್ಯವಾಗಲಿಲ್ಲ. ಮೈಯೆಲ್ಲ ಉರಿಯುತ್ತಿತ್ತು. ತಲೆಯ ಮೇಲೆ ಕಿರೀಟ ಇದ್ದುದರಿಂದ ತಲೆಯೆಲ್ಲ ಬೆವೆತು ಹೋಯಿತು. 'ಎಲ್ಲರಿಗಿಂತ ಸೂರ್ಯನಿಗೇ ಹೆಚ್ಚು ಶಕ್ತಿ. ನಾನು ಸೂರ್ಯನಾಗಿದ್ದರೆ ಚೆನ್ನಾಗಿರುತ್ತಿತ್ತು' ಎಂದು ಅವನು ಅಂದುಕೊಂಡ. ಮರುಕ್ಷಣ ಅವನು ಸೂರ್ಯನಾಗಿದ್ದ!

ಸುಡುವ ಸೂರ್ಯನನ್ನೇ ಮೇಘಗಳು ಮರೆ ಮಾಡಿದಾಗ ಅವನಿಗೆ ಸೂರ್ಯನಿಗಿಂತ ಮೇಘವೇ ಹೆಚ್ಚು ಬಲಶಾಲಿ ಎನ್ನಿಸಿತು. ತಾನೂ ಮೇಘವಾಗಿದ್ದರೆ ಚೆನ್ನಾಗಿರುತ್ತಿತ್ತು ಎಂದು ಅವನು ಆಶಿಸಿ ಮೇಘವಾಗಿ ಪರಿವರ್ತನೆಗೊಂಡ! ಮೇಘಗಳನ್ನು ಗಾಳಿ ಚೆದುರಿಸಿದ್ದನ್ನು ಕಂಡು ಗಾಳಿಯಾಗಿರಲು ಆಶಿಸಿದ.

- ಆ ಗಾಳಿಯನ್ನು ಬೆಟ್ಟವೊಂದು ತಡೆದಾಗ ಎಲ್ಲಕ್ಕಿಂತ ಬೆಟ್ಟವೇ ಶಕ್ತಿಶಾಲಿ ಎಂದು ಯೋಚಿಸಿ, ಇವನೂ ಒಂದು ಬೆಟ್ಟವಾಗಿ ಹೋದ. ಆದರೆ ಆ ಬೆಟ್ಟವನ್ನು ಒಬ್ಬ ಕಲ್ಲುಕುಟಿಗ ತನ್ನ ಉಳಿಯಿಂದ ಸೀಳುವುದನ್ನು ನೋಡಿ, ಕಲ್ಲುಕುಟಿಗನೇ ಇವರೆಲ್ಲರಿಗಿಂತ ಶಕ್ತಿಶಾಲಿ ಎಂದು ಅವನು ಭಾವಿಸಿದ. ಈಗ ಅವನು ಮತ್ತೆ ಎಂದಿನಂತೆ ಕಲ್ಲು ಒಡೆಯುವ ಕೆಲಸದಲ್ಲಿ ನಿರತನಾಗಿದ್ದ!

'ಇತರರನ್ನು ನೋಡಿ ಆಸೆ ಪಡುವುದು ಬೇಡ. ನಾವು ಏನೇ ಆಗಿದ್ದರೂ ಅದುವೇ ಶಕ್ತಿಯುತವಾದುದು ಎಂದು ಭಾವಿಸಬೇಕು' ಎನ್ನುವುದೇ ಈ ಕಥೆ ಹೇಳುವ ನೀತಿ.

ನಮ್ಮ ಆಸೆಗಳು ಹೇಗಿದ್ದರೆ ನಮಗೆ ಯಶಸ್ಸು ದೊರೆಯುತ್ತದೆ...

- ಪ್ರಾಮಾಣಿಕವಾದ ಆಸೆ, ಅದನ್ನು ಪಡೆಯುವುದಕ್ಕೆ ಅಗತ್ಯ ಯೋಜನೆಗಳನ್ನು ರೂಪಿಸುವುದು, ಅದರ ಕಡೆಗೆ ಸರಿಯಾದ ರೀತಿಯಲ್ಲಿ ಹೆಜ್ಜೆ ಇಡುವುದು... ಇವುಗಳೇ ಯಶಸ್ಸಿನ ಮೂಲ ಸೂತ್ರಗಳು!
- ಆಸೆಗಳನ್ನು ಬೇರು ಸಹಿತ ಕಿತ್ತೆಸೆಯಬೇಕಾದ ಅಗತ್ಯವೇನಿಲ್ಲ. ಆಸೆಗಳನ್ನು ಕ್ರಮಪಡಿಸಿಕೊಂಡು ಸಮೃದ್ಧಿಯ ಜೀವನ ನಡೆಸುವುದೇ ಉತ್ತಮವಾದುದು.
- ಒಂದು ಅಗತ್ಯವನ್ನು ಅವಲಂಬಿಸಿ ಮೂಡುವ ಆಸೆ, ಆ ಅಗತ್ಯ ಪೂರೈಕೆಗೊಂಡ ಮೇಲೆ ಕೊನೆಗೊಳ್ಳಬೇಕು. ಇನ್ನೂ ಬೇಕು, ಇನ್ನೂ ಬೇಕು ಎಂದು ಮೂಡುವ ದುರಾಸೆಯನ್ನು ನಿಯಂತ್ರಿಸಬೇಕು.
- ಅನಗತ್ಯ ಆಸೆ ಮನಸ್ಸಿನೊಳಗೆ ಮೂಡಿದರೆ, 'ಇದು ತಪ್ಪು, ಇದರಿಂದ ಹಲವು ಕಷ್ಟಗಳು ಬರಬಹುದು. ಆದುದರಿಂದ ಇದನ್ನು ನಾನು ಬಿಟ್ಟು ಬಿಡುತ್ತೇನೆ' ಎಂದು ಸ್ಪಷ್ಟವಾಗಿ ನಿರ್ಧರಿಸಬೇಕು. ಯಾವ ಕಾಲದಲ್ಲೇ ಆದರೂ ಅದಕ್ಕೆ ವಿರುದ್ಧವಾಗಿ ನಡೆದುಕೊಳ್ಳಬಾರದು.
- ಆಸೆಯನ್ನು ಪೂರ್ಣಗೊಳಿಸಿಕೊಳ್ಳದೆ, ಅದನ್ನು ಮನಸ್ಸಿನಿಂದಲೂ ತ್ಯಜಿಸದೆ ಸುಮ್ಮನೆ ಒಳಗೇ ಹುದುಗಿಸಿಟ್ಟುಕೊಂಡಿದ್ದರೆ ಮನಸ್ಸಿನ ನೆಮ್ಮದಿ ಕೆಡುತ್ತದೆ. ಇದರಿಂದ ದೇಹವೂ ಅನಾರೋಗ್ಯದ ಗೂಡಾಗಿ ಬದಲಾಗಬಹುದು. ಯಾವ ಕೆಲಸವನ್ನೂ ಸರಿಯಾಗಿ, ಪೂರ್ಣವಾಗಿ ಮಾಡಲು ಸಾಧ್ಯವಾಗದೆ ಅದರಲ್ಲೂ ಸೋಲು ಎದುರಾಗಬಹುದು.
- ನಮ್ಮ ಆಸೆಗಳು ನಮ್ಮ ಸ್ಥಿತಿಗತಿಗಳಿಗೆ ತಕ್ಕವಾಗಿರಬೇಕು. ಇದರಿಂದ ನಮ್ಮ ಮನಸ್ಸಿನ ನೆಮ್ಮದಿ ಕೆಡದೆ ಇರುತ್ತದೆ. ಪ್ರಕೃತಿಯ ನಿಯಮಕ್ಕೆ ಹೊಂದುವ ಹಾಗೆ ಆಸೆಗಳು ಇರಬೇಕು.
- ನಮ್ಮ ಆಸೆಗಳಿಂದ ನಮಗೋ, ಇತರರಿಗೋ ಕಷ್ಟಗಳೇರ್ಪಡಬಹುದು ಎಂದಾದರೆ, ಆ ಆಸೆಯನ್ನು ಕೈಬಿಡುವುದು ಒಳ್ಳೆಯದು. ಕೆಟ್ಟ ಪರಿಣಾಮಗಳನ್ನು ತರಬಹುದಾದ ಆಸೆಗಳನ್ನು ಕಟ್ಟುಪಾಡಿಗೊಳಿಸುವುದು ಒಳ್ಳೆಯದು.
- ಆಸೆಗಳನ್ನು ಕ್ರಮಪಡಿಸಿಕೊಂಡರೆ ಯಶಸ್ಸು ಸಿಗುತ್ತದೆ. ಆ ಯಶಸ್ಸಿನ ಮೂಲಕ ಒಳಿತುಗಳನ್ನು ಪಡೆಯಬಹುದು!



# ಆಸೆಯ ನಾಲ್ಕು ಗುಣಗಳು!

ಒಳ್ಳೆಯ ಆಸೆಗಳು ಮಾತ್ರವೇ ನಮ್ಮ ಜೀವನವನ್ನು ಮುನ್ನಡೆಸಬೇಕು. ಆಗಲೇ ನಾವು ಸಾಗುವ ಹಾದಿಯೂ, ನಮ್ಮ ಜೀವನದ ಉದ್ದೇಶವೂ ಶಿಸ್ತಿಗೊಳಪಟ್ಟಿರುತ್ತದೆ. ಪ್ರತಿದಿನವೂ ಇಂತಹ ಸ್ಪಷ್ಟತೆಯೊಂದಿಗೆ ಯೋಚಿಸಿ ನಡೆದುಕೊಳ್ಳಬೇಕು.

ನೆನ್ನೆಯ ಆಸೆಗಳು ಹಾಗೂ ಕಾರ್ಯಗಳ ಪರಿಣಾಮವೇ ನಮ್ಮ ಇಂದಿನ ಕಷ್ಟ ಅಥವಾ ಸುಖಗಳು! ಪ್ರಾಮಾಣಿಕವಾದ ಆಸೆಗಳು ಸುಖವನ್ನು ನೀಡುತ್ತವೆ. ತಪ್ಪಾದ ಆಸೆಗಳು ದುಃಖವನ್ನು ನೀಡುತ್ತವೆ. ಕೆಲವರಿಗೆ ಮನಸ್ಸಿನಲ್ಲಿ ಪ್ರಾಮಾಣಿಕವಾದ ಸಕಾರಾತ್ಮಕ ಆಸೆಗಳು ಮೂಡುತ್ತವೆ. ಆದ-ರೆ, ಅವುಗಳನ್ನು ಕಾರ್ಯಗತಗೊಳಿಸುವ ಮಾನಸಿಕ ದೃಢತೆ ಅವರಲ್ಲಿ ಇರುವುದಿಲ್ಲ. ಅದೂ ಅವರ ಸಂತೋಷವನ್ನು ಹಾಳುಗೆಡವಬಹುದು.

ಮನಸ್ಸಿನ ಆಸೆಗಳೇ ನಮಗೆ ಹಲವು ಕ್ಷಣಗಳಲ್ಲಿ ಸಮಸ್ಯೆಗಳನ್ನು ತಂದೊಡ್ಡಬಹುದು. ಆಸೆಗಳು ಬದಲಾಗುವಾಗ, ನಮ್ಮ ಕೆಲಸಗಳೂ ಬದಲಾಗುತ್ತವೆ. ನಮ್ಮ ಜೀವನ ವಿಧಾನವೂ ಬದಲಾಗುತ್ತವೆ. ಆಸೆಗಳ ಬಗೆಗಿನ ನಾಲ್ಕು ವಿಷಯಗಳನ್ನು ಅರ್ಥ ಮಾಡಿಕೊಂಡರೆ, ನಮ್ಮ ಜೀವನ ಸಂತೃಪ್ತವಾಗಿರುತ್ತದೆ.

- ಒಬ್ಬರಲ್ಲಿ ಮೂಡುವ ತಪ್ಪಾದ ಆಸೆಗಳೇ ಅವರ ಜೀವನದ ದಿಕ್ಕನ್ನು ಬದಲಾಯಿಸುವುದು. ತಪ್ಪಾದ ಆಸೆಗಳಿಂದ ಹಾದಿ ಬದಲಾಗಿ ತಮ್ಮ ಜೀವನವನ್ನೇ ನಾಶ ಮಾಡಿಕೊಂಡ ಹಲವರ ಬದುಕಿನ ಉದಾಹರಣೆಗಳು ನಮ್ಮ ಮುಂದಿವೆ. ಸೆರೆಮನೆಗಳಲ್ಲಿರುವ ಎಲ್ಲಾ ಖೈದಿಗಳೂ ದುರಾಸೆಯ ಪ್ರೇರಣೆಯಿಂದ ತಪ್ಪು ಮಾಡಿದವರೇ. ತಪ್ಪಾದ ಆಸೆಗಳು ತಾನಾಗಿಯೇ ಮೂಡಬಹುದು ಅಥವಾ ತಪ್ಪು ಗೆಳೆಯರ ಸಹವಾಸದಿಂದಲೂ ಮೂಡಬಹುದು. ಆದುದರಿಂದ ನಮ್ಮ ಮನಸ್ಸನ್ನು ಸ್ಪಷ್ಟವಾಗಿಟ್ಟುಕೊಳ್ಳಬೇಕು. ನಮ್ಮ ಮನಸ್ಸನ್ನು ಚಂಚಲಗೊಳಿಸುವ ಹೇರಳವಾದ ದೃಶ್ಯಗಳೂ, ಸಲಕರಣೆಗಳೂ ನಮ್ಮ ಕಣ್ಣ ಮುಂದೆ ಕಾಣಿಸುತ್ತವೆ. ಎಚ್ಚರಿಕೆಯಿಂದ ಅವುಗಳಿಂದ ದೂರವಾಗುವುದನ್ನು ಕಲಿತುಕೊಳ್ಳಬೇಕು.

- ಆಸೆಗಳು ಬಲಶಾಲಿಯಾದವು. ಒಂದು ಸರಪಳಿಯಲ್ಲಿ ಕಟ್ಟಿ ಹಾಕಿ ಎಳೆದೊಯ್ಯುವ ಬೆಕ್ಕಿನ ಹಾಗೆ, ಆಸೆಗಳು ನಿಮ್ಮನ್ನೂ ಎಳೆದುಕೊಂಡು ಹೋಗಿ ಬಿಡಬಹುದು. ಅಧಿಕಾರದಲ್ಲಿದ್ದು ತಪ್ಪು ಮಾಡುವವರನ್ನು ನೋಡಿ. ಆಸೆಗಳೇ ಹಾಗೆ ಅವರನ್ನು ತಪ್ಪು ಮಾಡಲು ಪ್ರೇರೇಪಿಸುತ್ತವೆ. ನಮ್ಮ ಜೀವನದಲ್ಲಿ ಎಷ್ಟೋ ವಿಷಯಗಳು ನಮ್ಮ ಕಟ್ಟುಪಾಡನ್ನು ಮೀರಿದವುಗಳಾಗಿರುತ್ತವೆ. ಆಸೆಗಳೂ ಹಾಗೆ ಆಗಿಬಿಡಬಾರದು. ನಮ್ಮ ಎಲ್ಲ ಆಸೆಗಳೂ ನಮ್ಮ ಕಟ್ಟುಪಾಡಿನೊಳಗೇ ಇರಬೇಕು ಎಂದು ಆಸೆಪಡಿ.

- ನಮ್ಮ ಮನಸ್ಸು ಎನ್ನುವುದು ನೆಲ ಎಂದಾದರೆ, ಆಸೆಗಳು ಬೀಜಗಳು. ನೀರು ಹಾಯಿಸಿ, ಉತ್ತು ಹದಗೊಳಿಸಿದ ನೆಲದಲ್ಲಿ ನಾವು ಬಿತ್ತುವ ಉತ್ತಮ ಬೀಜಗಳಿಗಿಂತಲೂ ಹೆಚ್ಚಾಗಿ ಕಳೆಗಳೇ ಬೆಳೆಯುವುದು. ಅಲ್ಲದೆ, ಅವುಗಳೇ ಹೆಚ್ಚು ವೇಗವಾಗಿ ಬೆಳೆಯುವುದೂ ಕೂಡ. ಕಳೆಗಳನ್ನು ನಾಶ ಮಾಡಿ, ಬಿತ್ತಿದ ಬೀಜಗಳಿಗೆ ಗೊಬ್ಬರ ಹಾಕಿ, ಬೆಳೆಯುವವರೇ ಒಳ್ಳೆಯ ರೈತರು. ಪ್ರಾಮಾಣಿಕವಾದ ಆಸೆಗಳನ್ನು ಮನಸ್ಸಿನಲ್ಲಿ ಬಿತ್ತಿ, ಬೆಳೆಯುವಾಗ ಒಳ್ಳೆಯ ವ್ಯವಸಾಯಿಯಂತೆ ನಾವಿರಬೇಕು.

- ಒಳ್ಳೆಯ ಕಾರ್ಯಗಳನ್ನು ಮಾಡಿ ಒಳ್ಳೆಯ ಹೆಸರು ಗಳಿಸುತ್ತೇವೆಯೇ, ಅಥವಾ ತಪ್ಪುಗಳನ್ನು ಮಾಡಿ ಶಾಪಗಳನ್ನು ಗಳಿಸಿಕೊಳ್ಳುತ್ತೇವೆಯೇ ಎನ್ನುವುದನ್ನು ನಮ್ಮ ಆಸೆಗಳೇ ತೀರ್ಮಾನಿಸುತ್ತವೆ. ನಮ್ಮ ಅತ್ಯುತ್ತಮವಾದ ಗೆಳೆಯರೋ, ವೈರಿಗಳೋ ಹೊರಗೆಲ್ಲೂ ಇಲ್ಲ. ಸರಿಯಾದ ಆಸೆಗಳೊಂದಿಗೆ ಪ್ರಾಮಾಣಿಕವಾಗಿ ಬದುಕಿದರೆ, ನಾವೇ ನಮ್ಮ ಅತ್ಯುತ್ತಮ ಗೆಳೆಯರಾಗಿರುತ್ತೇವೆ. ತಪ್ಪಾದ ಆಸೆಗಳೊಂದಿಗೆ ಕೆಟ್ಟ ಹಾದಿಯಲ್ಲಿ ಸಾಗಿದರೆ, ನಾವೇ ನಮ್ಮ ಅತಿ ದುಷ್ಟ ವೈರಿಗಳಾಗುತ್ತೇವೆ. ನಿಮ್ಮ ನಂಬರ್ 1 ವೈರಿಯನ್ನು ನೀವೇ ಸೃಷ್ಟಿಸಬೇಡಿ. ಯಾವಾಗಲೂ ನಿಮ್ಮ ಅತ್ಯುತ್ತಮ ಗೆಳೆಯನಾಗಿ ಮಾತ್ರವೇ ನೀವು ಇರಿ. ●

# ವರಸೆಗಳ ಎಲ್ಲೆ ಯಾವುದು?

ಒಂದು ಚಿಕ್ಕ ನಗರದಲ್ಲಿ ರಾಮು, ಸೋಮು ಎಂಬ ಇಬ್ಬರು ಗೆಳೆಯರು ಸೇರಿ ಒಂದು ವಾಚ್ ಅಂಗಡಿಯನ್ನು ಇಟ್ಟು–ಕೊಂಡಿದ್ದರು. ರಾಮು ಅಂಗಡಿಯ ಮುಂಭಾಗದಲ್ಲಿ ಕುಳಿತು, ಬರುವ ಗ್ರಾಹಕರೊಂದಿಗೆ ಮಾತನಾಡಿ ವಾಚುಗಳ ಮಾರಾಟ ಮಾಡುತ್ತಿದ್ದ. ಸೋಮು ಅಂಗಡಿಯ ಒಳಬದಿಯಲ್ಲಿ ಕುಳಿತು ಗ್ರಾಹಕರು ರಿಪೇರಿಗಾಗಿ ತಂದು ಕೊಡುತ್ತಿದ್ದ ವಾಚುಗಳನ್ನು ಪರಿಶೀಲಿಸಿ ಅವುಗಳನ್ನು ಸರಿಪಡಿಸಿ ಕೊಡುತ್ತಿದ್ದ.

ಅಂಗಡಿಗೆ ಬರುವ ಗ್ರಾಹಕರು ಅಲ್ಲಿರುವ ಹಲವು ಬಗೆಯ ವಾಚ್‌ಗಳನ್ನು ತೆಗೆದು ತೋರಿಸುವಂತೆ ರಾಮುವಿನ ಬಳಿ ಕೇಳುತ್ತಿದ್ದರು. 'ನನಗೆ ಸರಿಯಾಗಿ ಕಿವಿ ಕೇಳಿಸುವುದಿಲ್ಲ. ಸ್ವಲ್ಪ ಜೋರಾಗಿ ಮಾತನಾಡಿ' ಎಂದು ರಾಮು ಅವರ ಬಳಿ ಕೇಳುತ್ತಿದ್ದ. ಆದರೆ ನಿಜವಾಗಿ ಅವನಿಗೆ ಕಿವಿ ಚೆನ್ನಾಗಿ ಕೇಳಿಸುತ್ತಿತ್ತು.

ಅಂಗಡಿಗೆ ಬರುವ ಗ್ರಾಹಕರು ಯಾವುದೋ ಒಂದನ್ನು ಆಯ್ಕೆ ಮಾಡಿಕೊಂಡ ನಂತರ ಅದರ ಬೆಲೆಯ ಬಗ್ಗೆ ಅವನ ಬಳಿ ವಿಚಾರಿಸುತ್ತಿದ್ದರು. ರಾಮು ತನಗೆ ಅದರ ಬೆಲೆ ಗೊತ್ತಿಲ್ಲ ಎಂಬಂತೆ ನಟಿಸುತ್ತಿದ್ದ. ಅಂಗಡಿಯ ಒಳಗೆ ಕುಳಿತು ವಾಚ್‌ಗಳನ್ನು ರಿಪೇರಿ ಮಾಡುತ್ತಿರುವ ಸೋಮುವಿನ ಬಳಿ ಈ ವಾಚ್‌ನ ಬೆಲೆ ಎಷ್ಟು ಎಂದು ಕೇಳುತ್ತಿದ್ದ. ಸೋಮು ಅಲ್ಲಿಂದಲೇ 'ಎಂಟುನೂರು ರೂಪಾಯಿ' ಎಂದು ಜೋರಾಗಿ ಹೇಳುತ್ತಿದ್ದ. ಅದು ಗ್ರಾಹಕರಿಗೆ ಚೆನ್ನಾಗಿ ಕೇಳಿಸುತ್ತಿತ್ತು. ರಾಮು ಗ್ರಾಹಕರ ಕಡೆ ತಿರುಗಿ, 'ಮುನ್ನೂರು ರೂಪಾಯಿ' ಎನ್ನುತ್ತಿದ್ದ.

ಅದನ್ನು ಕೇಳಿದ ಗ್ರಾಹಕರು ಆಮಿಷಕ್ಕೊಳಗಾಗುತ್ತಿದ್ದರು. 800 ರೂಪಾಯಿಯ ವಾಚ್, ಕೇವಲ 300 ರೂಪಾಯಿಗೆ ದೊರಕುತ್ತದೆ ಎಂದು ಒಳಗೊಳಗೇ ಆನಂದಿಸಿ, ರಾಮುವಿಗೆ ಅವನು ಹೇಳಿದ್ದು ಸರಿಯಾಗಿ ಕೇಳಿಸಿಲ್ಲ ಎಂದೇ ನಂಬಿ, ಅವನು ಹೇಳಿದ ಹಣವನ್ನು ತೆಗೆದು–ಕೊಟ್ಟು ವಾಚನ್ನು ಪಡೆದುಕೊಂಡು ಅಲ್ಲಿಂದ ವೇಗವಾಗಿ ಹೊರಟು ಹೋಗುತ್ತಿದ್ದರು. ರಾಮು ಸೋಮು ಇಬ್ಬರೂ ನಗುತ್ತಿದ್ದರು. ಕಾರಣ ಆ ವಾಚಿನ ಬೆಲೆ ಕೇವಲ 200 ರೂಪಾಯಿಗಳು ಮಾತ್ರ. ಇವರಿಬ್ಬರೂ ತಮ್ಮೊಳಗೆ ಹೀಗೆ ಮೊದಲೇ ಮಾತನಾಡಿಕೊಂಡು ಗ್ರಾಹಕರ ಮುಂದೆ ನಾಟಕ ಮಾಡಿ ತಂತ್ರದಿಂದ ವ್ಯಾಪಾರ ಮಾಡುತ್ತಿದ್ದರು.

ಇನ್ನೊಬ್ಬ ತಂತ್ರಗಾರ ವ್ಯಾಪಾರಿಗೆ ಸಂಬಂಧಿಸಿದಂತೆ ಇನ್ನೊಂದು ಕಥೆಯೂ ಉಂಟು: ಒಂದು ನಗರದಲ್ಲಿದ್ದ ಬಸ್ ನಿಲ್ದಾಣದಲ್ಲಿ ಒಬ್ಬ ವೃದ್ಧ ಹಣ್ಣುಗಳ ವ್ಯಾಪಾರ ಮಾಡುತ್ತಿದ್ದ. ನಿಲ್ದಾಣಕ್ಕೆ ಬರುತ್ತಿದ್ದ ಪ್ರತಿಯೊಂದು ಬಸ್‌ನೊಳಗೂ ಹತ್ತಿ ಇಳಿದು, ಕೂಗಿ ಕೂಗಿ ಹಣ್ಣುಗಳನ್ನು ಮಾರುತ್ತಿದ್ದ. ಒಂದು ದಿನ ಅವನು ಸೀಬೆಕಾಯಿಗಳನ್ನು ಬುಟ್ಟಿಯಲ್ಲಿ ಹೊತ್ತುಕೊಂಡು ಒಂದು ಬಸ್‌ನೊಳಗೆ ಹತ್ತಿದ. 'ಐದು ಹಣ್ಣುಗಳಿಗೆ ಇಪ್ಪತ್ತು ರೂಪಾಯಿ' ಎಂದು ಅವನು ಕೂಗಿ ಮಾರಾಟ ಮಾಡುತ್ತಿದ್ದ. ನೋಡಲು ಆತ ಪರಿತಾಪಕರವಾಗಿ ಕಾಣುತ್ತಿದ್ದ. ಆದರೂ ಯಾರೂ ಅವನ ಬಳಿ ಹಣ್ಣುಗಳನ್ನು ಕೊಳ್ಳಲಿಲ್ಲ. ಹೊತ್ತುಕೊಂಡಿದ್ದ ಬುಟ್ಟಿಯನ್ನು ಹೊರಲು ಸಾಧ್ಯವಾಗದೆ ಕಷ್ಟಪಟ್ಟು ಆತ ಬಸ್‌ನಿಂದ ಕೆಳಗಿಳಿದ.

ಅವನು ಕೆಳಗಿಳಿದ ಮರುಕ್ಷಣವೇ ಆ ಬಸ್‌ನೊಳಗೆ ಒಬ್ಬ ಯುವಕ ಹತ್ತಿದ. 'ಆರು ಸೀಬೆಕಾಯಿಗಳು ಇಪ್ಪತ್ತು ರೂಪಾಯಿ' ಎಂದು ಅವನು ಜೋರಾಗಿ ಕೂಗಿದ. 'ಆಪಲ್‌ಗಿಂತ ಹೆಚ್ಚು ಸತ್ವಭರಿತವಾದ ಹಣ್ಣು ಇದು. ಇದು ನಮ್ಮೂರಿನಲ್ಲೇ ಬೆಳೆಯುವ ದೇಸೀಯ ಹಣ್ಣು...' ಎಂದು ಅವನು ಸೀಬೆ ಹಣ್ಣಿನ ಮಹತ್ವವನ್ನು ಮನವರಿಕೆ ಮಾಡಿಕೊಟ್ಟ. ಬಸ್‌ನಲ್ಲಿದ್ದ ಹಲವರು ಅವನ ಬಳಿ ಹಣ್ಣುಗಳನ್ನು ಕೊಂಡುಕೊಂಡರು.



ಇದರ ನಡುವೆ ಇನ್ನೊಂದು ಬಸ್‌ಗೆ ಹತ್ತಿದ ಆ ವೃದ್ಧ ಅಲ್ಲೂ ತನ್ನಲ್ಲಿದ್ದ ಹಣ್ಣುಗಳನ್ನು 'ಇಪ್ಪತ್ತು ರೂಪಾಯಿಗೆ ಐದು ಹಣ್ಣುಗಳು ಎಂದು ಮಾರಲು ಪ್ರಯತ್ನಿಸಿದ. ಅಲ್ಲೂ ಯಾರೂ ಅವರ ಬಳಿ ಹಣ್ಣುಗಳನ್ನು ಕೊಳ್ಳಲಿಲ್ಲ. ಆತ ಇಳಿದ ಮೇಲೆ ಅಲ್ಲೂ ಈ ಯುವಕ ಬಸ್‌ನೊಳಗೆ ಹತ್ತಿ, 'ಆರು ಸೀಬೇಕಾಯಿಗಳಿಗೆ ಇಪ್ಪತ್ತು ರೂಪಾಯಿ' ಎಂದು ಹೇಳಿ ಅದರ ಮಹಿಮೆಯನ್ನೂ ತಿಳಿಸಿ, ಮಾರಾಟ ಮಾಡಿದ.



ಆ ಬಸ್‌ನಲ್ಲಿ ಎಂ.ಬಿ.ಎ., ಓದಿದ್ದ ಒಬ್ಬ ವ್ಯಕ್ತಿ ಇವೆಲ್ಲವನ್ನೂ ಗಮನಿಸುತ್ತಿದ್ದ. ಆತ ವೃದ್ಧನನ್ನು ಕರೆದು, 'ಆ ಯುವಕನ ಬಳಿ ಇರುವ ಸಾಮರ್ಥ್ಯ ನಿಮ್ಮ ಬಳಿ ಇಲ್ಲ. ಅವನಿಗೆ ಸ್ಪರ್ಧೆಯಾಗಿ ನೀವೂ ಅದೇ ಬೆಲೆಗೆ ಮಾರಾಟ ಮಾಡಬೇಕು. ಅಲ್ಲದೆ ಹೆಚ್ಚಿನ ಹಣ್ಣುಗಳನ್ನು ನೀವು ಸಗಟಾಗಿ ಖರೀದಿಸಿದರೆ ಇನ್ನೂ ಕಡಿಮೆ ಬೆಲೆಗೆ ನಿಮ್ಮಿಂದ ಮಾರಲು ಸಾಧ್ಯವಾಗುತ್ತದೆ. ಹೆಚ್ಚು ಲಾಭ ಸಿಗಬೇಕು ಎಂದು ನೋಡಬೇಡಿ. ಲಾಭವನ್ನು ಕಡಿಮೆ ಮಾಡಿಕೊಂಡು ಹೆಚ್ಚಿನ ಸಂಖ್ಯೆಯಲ್ಲಿ ಮಾರಾಟ ಮಾಡಿ' ಎಂದು ಅವನಿಗೆ ಮಾರಾಟದ ತಂತ್ರಗಾರಿಕೆಯನ್ನು ವಿವರಿಸಿದ.

ಮುದುಕ ನಗುತ್ತಾ ಉತ್ತರಿಸಿದ : 'ಆ ಯುವಕ ಬೇರ್‍ಯಾರೂ ಅಲ್ಲ. ನನ್ನ ಮಗ ಅವನು. ಈ ಹಣ್ಣುಗಳೂ ಅವನವೇ. 'ಇಪ್ಪತ್ತು ರೂಪಾಯಿಗಳಿಗೆ ಆರು ಹಣ್ಣುಗಳು' ಎಂದು ಒಂದೇ ಸಲಕ್ಕೆ ಹೋಗಿ ಹೇಳಿದರೆ ಯಾರಿಗೂ ಅವುಗಳನ್ನು ಕೊಳ್ಳಲು ಮನಸ್ಸು ಬರುವುದಿಲ್ಲ. ಆದುದರಿಂದ ನಾನು, 'ಐದು ಹಣ್ಣುಗಳಿಗೆ ಇಪ್ಪತ್ತು ರೂಪಾಯಿ' ಎಂದು ಮೊದಲು ಹೋಗಿ ಅವರಿಗೆ ತಿಳಿಸುತ್ತೇನೆ. ನಂತರ ಅವನು ಬಂದು, 'ಇಪ್ಪತ್ತು ರೂಪಾಯಿಗಳಿಗೆ ಆರು ಹಣ್ಣುಗಳು' ಎಂದು ಹೇಳಿದರೆ ಆಗ ಜನರು ಅವನ ಬಳಿ ಕೊಳ್ಳುತ್ತಾರೆ. ಅವನ ಬಳಿ ಬೆಲೆ ಕಡಿಮೆ ಎಂದು ಅವರಿಗನ್ನಿಸುತ್ತದೆ. ಜನರ ಮನಸ್ಸನ್ನು ಬದಲಾಯಿಸುವುದಕ್ಕಾಗಿಯೇ ಅವನು ಮೊದಲು ನನ್ನನ್ನು ಕಳಿಸುತ್ತಾನೆ. ಇದು ಒಂದು ತಂತ್ರ' ಎಂದು ಹೇಳಿದ!

ಆಸೆ ಎನ್ನುವುದು ಬೆಂಕಿಯಂತಹುದು. ಆ ಬೆಂಕಿಯನ್ನು ಉಪಯೋಗಿಸಿಕೊಂಡು ಅಕ್ಕಿಯನ್ನು ಅನ್ನವನ್ನಾಗಿಯೂ ಮಾಡಬಹುದು. ಅದನ್ನು ತಪ್ಪಾಗಿ ಬಳಸಿ ಮನೆಯನ್ನೇ ಸುಟ್ಟು ಹಾಕಲೂ ಬಹುದು. ಒಳ್ಳೆಯ ಆಸೆಗಳು ಮಾತ್ರ ಇದ್ದರೆ ಸಾಕು ಎಂದು ಭಾವಿಸಿದರೂ, ಅದರ ಜೊತೆಯಲ್ಲೇ ಕೆಟ್ಟ ಆಸೆಗಳೂ ಸೇರಿಯೇ ಬರುತ್ತವೆ. ಕೆಟ್ಟ ಆಸೆಗಳು ಒಳ್ಳೆಯ ಆಸೆಗಳನ್ನು ನಾಶ ಮಾಡುವ ಶಕ್ತಿಯನ್ನು ಹೊಂದಿರುವಂತಹವು. ಏಕೆಂದರೆ ಹಲವರು ಕೆಟ್ಟ ಆಸೆಗಳ ಕಡೆಗೇ ಹೆಚ್ಚು ವಾಲುತ್ತಾರೆ.

ನಾವು ಮುಂಜಾನೆ ಉತ್ಸಾಹದಿಂದ ಏಳುವಾಗಲೇ ನಮ್ಮ ಆಸೆಗಳೂ ಎಚ್ಚೆತ್ತುಕೊಳ್ಳುತ್ತವೆ. ನಮ್ಮ ಕೆಲವು ಆಸೆಗಳು ದುರಾಸೆಗಳು ಎಂಬುದು ನಮಗೂ ಗೊತ್ತು. ಅವುಗಳಿಂದ ಮನಸ್ಸಿಗೆ ನೆಮ್ಮದಿ ಸಿಗುವುದಿಲ್ಲ ಎಂದು ನಮಗೆ ತಿಳಿದಿದ್ದರೂ ಅವುಗಳ ಹಿಡಿತದಿಂದ ತಪ್ಪಿಸಿಕೊಳ್ಳಲು ನಮ್ಮಿಂದಾಗುವುದಿಲ್ಲ. ನದಿಯಲ್ಲಿ ಉಕ್ಕುವ ಪ್ರವಾಹದಂತೆ ಅವು ನಮ್ಮನ್ನು ಮುಳುಗಿಸಿ ಉಸಿರುಗಟ್ಟಿಸುವಂತೆ ಮಾಡುತ್ತವೆ ಎಂಬ ಎಚ್ಚರಿಕೆ ಸದಾ ನಮ್ಮೊಳಗೆ ಇರಬೇಕು.

ಕಳಂಕವಿಲ್ಲದ ಮಕ್ಕಳ ಮನಸ್ಸಿನಲ್ಲಿ ದುರಾಸೆಗಳ್ಯಾವುವೂ ಇರುವುದಿಲ್ಲ. ಬೆಳೆಯುತ್ತಾ, ಬೆಳೆಯುತ್ತಾ ನಮಗಿಂತಲೂ ವೇಗವಾಗಿ ನಮ್ಮ ಆಸೆಗಳು ನಮ್ಮೊಳಗೆ ಬೆಳೆಯುತ್ತಾ ಹೋಗುತ್ತವೆ. ಯುವಕರು, ವೃದ್ಧರು ಯಾರನ್ನೂ ಆಸೆಗಳು ಬಿಡುವುದಿಲ್ಲ. ಆಸೆಗಳ ಎಲ್ಲೆಯನ್ನು ಅರಿತು ಅವುಗಳನ್ನು ಕಟ್ಟುಪಾಡಿನಲ್ಲಿಟ್ಟುಕೊಳ್ಳಬೇಕು. ಅದಕ್ಕೆ ತಕ್ಕ ಹಾದಿಗಳನ್ನು ಹುಡುಕಿ ಕಂಡು ಹಿಡಿಯುವವರೇ ಮಾನಸಿಕ ನೆಮ್ಮದಿಯನ್ನೂ ಹೊಂದುತ್ತಾರೆ. ●


RAMRAJ

**ಬಿಳುಪು**

ಭಾವನೆಗಳು

**ಸಂಚಿಕೆ 7 ಸಂಪುಟ 2**
**ಜುಲೈ 2024**

ಪ್ರಕಾಶಕರು ಮತ್ತು ಪ್ರಧಾನ ಸಂಪಾದಕರು
**ಕೆ.ಆರ್. ನಾಗರಾಜನ್**

ಲೇಖಕರು
**ತ.ಸೆ. ಜ್ಞಾನವೇಲ್**

ಗೌರವ ಸಂಪಾದಕರು ಮತ್ತು
ಕನ್ನಡಾನುವಾದ
**ಡಾ. ತಮಿಳ್ ಸೆಲ್ವಿ**
ಎಂ.ಎ., ಪಿಎಚ್.ಡಿ., ಡಿ.ಲಿಟ್.,
ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು
ಕನ್ನಡ ವಿಭಾಗ
ಮದ್ರಾಸ್ ವಿಶ್ವವಿದ್ಯಾಲಯ, ಚೆನ್ನೈ.

ರಚನೆ ಮತ್ತು ವಿನ್ಯಾಸ
**ತರು ಮೀಡಿಯಾ (ಪ್ರೈ) ಲಿ.,**
10/55, ರಾಜು ಸ್ಟ್ರೀಟ್
ವೆಸ್ಟ್ ಮಾಂಬಳಂ
ಚೆನ್ನೈ 600 033



ಈ ಸಂಚಿಕೆಯಲ್ಲಿರುವ ಯಾವುದೇ ಭಾಗವನ್ನಾಗಲೀ ವಿಷಯಗಳನ್ನಾಗಲೀ ಸಂಪಾದಕರ ಲಿಖಿತ ಪೂರ್ವ ಅನುಮತಿ ಪಡೆಯದೆ ಮರುಪ್ರಕಟಣೆ ಮಾಡುವುದಾಗಲೀ, ಅಂತರ್‌ಜಾಲ ತಾಣಗಳಲ್ಲಿ ಪುನರ್‌ದಾಖಲಿಸುವುದಾಗಲೀ ಮಾಹಿತಿ ಹಕ್ಕು ಕಾನೂನು ಬಾಹಿರ ಪ್ರಕ್ರಿಯೆಯಾಗಿರುತ್ತದೆ.



Published by
K.R. NAGARAJAN,
Published from
10, Sengunthapuram, Mangalam Road,
TIRUPUR - 641 604.
Ph: 0421-4304106

# ಟ್ವಿಟ್ಟರ್ ಆಸೆ!

**@ramya03709**

ಅತಿಯಾಗಿ ಆಸೆ ಪಟ್ಟರೆ ಬದುಕು ನಮಗೆ ಸುಲಭವಾಗಿ ಮೋಸ ಮಾಡಿ ಬಿಡುತ್ತದೆ!

**@allama_ajith.**

ದುಡಿಯುವ ಆಸೆ ಮೂಡಿದ ಒಬ್ಬ ವ್ಯಕ್ತಿಯ ಬಳಿ ಬೇರಾವ ಆಸೆಗಳೂ ಇರುವುದಿಲ್ಲ!

**@shankar.guru**

ಆಸೆಗಳನ್ನು ನಿಗ್ರಹಿಸಲು ಕಲಿತುಕೊಂಡರೆ, ಎಲ್ಲವೂ ಕಾಲ ಕೆಳಗೇ ಇರುತ್ತವೆ!

**@mg.pooja**

ಮಗುವಾಗಿದ್ದಾಗ ಸಾವಿರ ಸಾವಿರ ಆಸೆಗಳು ಇರುತ್ತವೆ... ಬೆಳೆದ ನಂತರ ಒಂದೇ ಒಂದು ಆಸೆ ಮಾತ್ರ ಇರುತ್ತದೆ. 'ಮಗುವಾಗಿಯೇ ಇದ್ದಿದ್ದರೆ ಚೆನ್ನಾಗಿರುತ್ತಿತ್ತು' ಎಂದು!

**@kalpana.rai**

ತನ್ನ ಬಲ ಏನೆಂಬುದನ್ನೇ ಮರೆತು ಮಾವುತನ ಮೇಲೆ ಆನೆ ತೋರಿಸುವ ಪ್ರೀತಿಯಂತೆಯೇ, ನಿಷ್ಕಲ್ಮಶ ಪ್ರೀತಿಯನ್ನು ಎಲ್ಲರ ಬಳಿಯೂ ತೋರಿಸಬೇಕು ಎನ್ನುವ ಆಸೆ!

**@manwitha.john**

ಇತರರು ನಿನ್ನತ್ತ ತಿರುಗಿ ನೋಡಬೇಕು ಎನ್ನುವ ಆಸೆ ಇದ್ದರೆ, ನೀನು ಯಾರನ್ನೂ ತಿರುಗಿ ನೋಡದೆ ನಿನ್ನ ಕೆಲಸವನ್ನು ಮಾತ್ರವೇ ಗಮನಿಸಬೇಕು!

**@sumitra.taranath**

ಆಸೆ ಇರಬಹುದು, ಆದರೆ ದುರಾಸೆ ಇರಬಾರದು. ಅದು ನಿಮ್ಮನ್ನು ಅತಲವಿತಲ ಪಾತಾಳಕ್ಕೆ ತಳ್ಳಿಬಿಡಬಹುದು ಎನ್ನುವುದನ್ನು ಕಾಲವೇ ನಿಮಗೆ ಅರ್ಥ ಮಾಡಿಸುತ್ತದೆ.

**@divaakar_udupi**

ಆಸೆಗಳೆಲ್ಲವನ್ನೂ ಅನುಭವಿಸಿದ ನಂತರ ನಾನೂ ಬುದ್ಧನಾಗುತ್ತೇನೆ... ಅದುವರೆಗೂ ಕಾದಿರು ನನ್ನ ಬೋಧಿ ವೃಕ್ಷವೇ!

**@manula_vaani**

ಅಳತೆಗಿಂತ ಹೆಚ್ಚಾಗಿ ದುಡಿಯಲು ನೀವು ಸಿದ್ಧವಾಗಿದ್ದರೆ, ನಿಮ್ಮ ಅರ್ಹತೆಗೆ ಮೀರಿ ಆಸೆ ಪಡುವುದರಲ್ಲಿ ತಪ್ಪೇನಿಲ್ಲ!

**@sharanya.raj**

ನೇರವೇರುವುದಿಲ್ಲ ಎಂದು ತಿಳಿದ ಮೇಲೂ ಕಡಿಮೆಯಾಗದೆ ಹೆಚ್ಚುತ್ತಲೇ ಇರುವ ಆಸೆಗಳು ಎಂತಹ ಶಾಪದ ಸ್ಥಿತಿಯೋ...?

**@vasantha9720**

ನಾವು ಚಿಕ್ಕಂದಿನಲ್ಲಿ ಹೇಳಿದ ಅಷ್ಟೂ ಸುಳ್ಳುಗಳೂ ನಮ್ಮ ಆಸೆಗಳೇ ಆಗಿದ್ದವು!

**@saritha.ramu**

ಆಸೆಗಳೇ ಇಲ್ಲದ ಜಾಗದಲ್ಲಿ ಅಪರಾಧಗಳೂ ಇರುವುದಿಲ್ಲ!

**@mahesh.chintamani**

ಆಸೆಗಳೇ ಇಲ್ಲದ ಮನುಷ್ಯ ಅರಸನಂತಿರುತ್ತಾನೆ!

**@maalavika.darshan**

ಬಡತನ ಬರುವುದು ಸಂಪತ್ತು ಕಡಿಮೆಯಾದುದರಿಂದಲ್ಲ... ಆಸೆಗಳು ಹೆಚ್ಚಾಗುವುದರಿಂದ!

**@shwetha.maanikya**

ಮನುಷ್ಯರಿಗೆ ಪೂರ್ಣಗೊಂಡ ಆಸೆಗಳನ್ನು ಸರಿಯಾಗಿ ಅನುಭವಿಸಲೂ ಗೊತ್ತಿಲ್ಲ. ಅರ್ಹತೆಗೆ ಮೀರಿದ ಆಸೆಗಳು ಮನುಷ್ಯರನ್ನು ನೆಮ್ಮದಿಯಾಗಿ ಬದುಕಲು ಬಿಡುವುದಿಲ್ಲ. ನ್ಯಾಯವಾದ ಆಸೆಗಳು ಜೀವನವನ್ನು ಸಮೃದ್ಧವಾಗಿಸುತ್ತವೆ. ಅಳತೆಯನ್ನು ಅರಿತು ಆಸೆ ಪಡಬೇಕು!

**@itihaasa.ts**

ಕಲ್ಪನೆ ಎನ್ನುವ ಹೊದಿಕೆಯೊಳಗೆ ಅಡಗಿವೆ... ನಮ್ಮ ನೆರವೇರದ ಆಸೆಗಳು!

**@saarika**

ಎಲ್ಲೆ ಮೀರಿದ ಆಸೆಗಳು ಜೀವನವನ್ನೇ ಅಲುಗಾಡಿಸಿಬಿಡಬಲ್ಲದು. ಕಂಡದ್ದಕ್ಕೆಲ್ಲ ಆಸೆ ಪಡಬಾರದು. ಬದುಕಲು ಅಗತ್ಯವಾದ ಮೂಲಭೂತ ವಿಷಯಗಳಿಗಷ್ಟೇ ಆಸೆಪಡಿ!

**@wilson_vinod**

ದೊರಕದ ವಸ್ತುವಿನ ಮೇಲಿನ ನಮ್ಮ ಆಸೆ ಯಾವಾಗಲೂ ಕಡಿಮೆಯಾಗುವುದೇ ಇಲ್ಲ. ಯಾವಾಗಲೂ ಅದು ನಮ್ಮ ಮನಸ್ಸಿನಲ್ಲಿ ಕೊರೆಯುತ್ತಲೇ ಇರುತ್ತದೆ. ನೆರವೇರದ ಆಸೆಗಳು ಎಂದಿಗೂ ನೆಮ್ಮದಿಯನ್ನು ನೀಡಲಾರವು.

**@little.Princess**

ಆಸೆಗಳು ಕಡಿಮೆಯಾಗುತ್ತಾ ಹೋದಂತೆಲ್ಲಾ ನೆಮ್ಮದಿ ಹೆಚ್ಚುತ್ತದೆ!

**@peethambari**

ಆಸೆಗಳು ನೆರವೇರದೆ ಹೋದಾಗಲೆಲ್ಲಾ ಆಗಾಗ ನಾವೂ ಸನ್ಯಾಸಿಗಳಾಗಿ ಬದಲಾಗುತ್ತೇವೆ!

**@taarika.tanwi**


ಕೈಗೆಟುಕದ ದೂರದಲ್ಲಿ ಆಸೆಗಳು ಇದ್ದರೂ, ಅವುಗಳನ್ನು ಹೇಗಾದರೂ ಮುಟ್ಟಿಬಿಡಬಲ್ಲೆ ಎನ್ನುವ ಧೈರ್ಯ ನನ್ನಲ್ಲಿದೆ... ಅದೇ ನನ್ನ ಆತ್ಮವಿಶ್ವಾಸ!

**@queen.maanya**

ಮನಸ್ಸು ಕೂಡ ಒಂದು ಸಮಾಧಿಯೇ... ಅಲ್ಲಿ ದಿನವೂ ಹಲವು ಆಸೆಗಳನ್ನು ಹೂಳಲಾಗುತ್ತದೆ. ●


RAMRAJ
LITTLE STARS
KIDS DHOTIS ● PYJAMA ● PANCHAKACHAM
SCAN QR CODE FOR
STORE LOCATION


Culture India™
TRADITIONAL KURTA • PANCHAKACHAM
BY
RAMRAJ
SCAN QR CODE
FOR STORE LOCATION
Available at Ramraj Showrooms & All leading textile shops | Shop online @ www.ramrajcotton.in


RAMRAJ
SHIRTINGS & SUITINGS
COTTON • LINEN • TRADITIONAL
A weave of Comfort
and Confidence
Crafted for Distinction
Crafted for Comfort,
Tailored for Confidence.
SCAN QR CODE
FOR STORE LOCATION
Available at Ramraj Showrooms & All leading textile shops | Shop online @ www.ramrajcotton.in





Available at Ramraj Showrooms & All leading textile shops | Shop online @ www.ramrajcotton.in



# ಒಳ್ಳೆಯ ಆಸೆಯೋ ಕೆಟ್ಟ ಆಸೆಯೋ

‘ಗೋಡೆಯನ್ನು ಮಾರಿ ಚಿತ್ರ ಕೊಳ್ಳಕೂಡದು’ ಎನ್ನುವ ಮಾತು ಉಂಟು. ಆಸೆಗಳನ್ನು ಕುರಿತು ಇದೇ ರೀತಿಯಲ್ಲಿ ಹಲವು ಹಾಡುಗಳೂ ಇವೆ... ‘ನಿದ್ರೆಯನ್ನು ಮಾರಿ ಒಂದು ಮಂಚ ಕೊಳ್ಳುವ ಆಸೆ... ಗಾಳವನ್ನು ಮಾರಿ ಮೀನು ಕೊಳ್ಳುವ ಆಸೆ... ನಾಲಿಗೆ ಮಾರಿ ಜೇನು ಕೊಂಡು, ನೀರು ಮಾರಿ ದಾಹ ಕೊಂಡು, ಹೂವು ಮಾರಿ ಪರಿಮಳ ಕೊಂಡು, ತಾಯಿಯ ಮಾರಿ ಪ್ರೀತಿ ಕೊಂಡು, ಬೀಗ ಮಾರಿ ಕೀ ಕೊಳ್ಳುವ ಒಲ್ಲದ ಆಸೆ... ಆಸೆ’ ಎನ್ನುವ ಹಾಡು ಮನುಷ್ಯರಲ್ಲಿ ಮೂಡುವ ವಿಪರೀತ ಆಸೆಗಳನ್ನು ವಿವರಿಸುತ್ತದೆ.

ದುಷ್ಟ ಆಸೆಗಳಲ್ಲಿ ಮೂರು ಹಂತಗಳಿರುತ್ತವೆ. ಮೊದಲ ಹಂತ, ಒಂದು ವಸ್ತು ನಮಗೆ ಬೇಕು ಎಂದು ಎನ್ನಿಸುವುದು. ಎರಡನೇ ಹಂತ, ಆ ವಸ್ತು ಯಾವಾಗಲೂ ನಮ್ಮ ಬಳಿಯೇ ಇರಬೇಕು ಎಂದು ಅನ್ನಿಸುವುದು. ಮೂರನೇ ಹಂತ, ಅದಿಲ್ಲದೆ ನಮ್ಮಿಂದ ಬದುಕಲು ಸಾಧ್ಯವೇ ಇಲ್ಲ ಎಂದು ಅದನ್ನು ಅಪಾರವಾಗಿ ಬಯಸುವುದು. ಇಂತಹ ಆಸೆಗಳು ಮನುಷ್ಯನ ವೈರಿಗಳು. ಒಳ್ಳೆಯ ಆಸೆಗಳು ಇದ್ದಲ್ಲಿ, ‘ಈ ಆಸೆ ಎಂದಾದರೂ ಒಂದು ದಿನ ನಿಜವಾಗುತ್ತದೆ’ ಎಂಬ ನಂಬಿಕೆಯಿಂದ ದುಡಿಯಲು ಸಾಧ್ಯವಾಗುತ್ತದೆ. ದುಷ್ಟ ಆಸೆಗಳೋ, ‘ಈ ಆಸೆ ಪೂರೈಕೆಯಾಗದೇ ಇದ್ದಲ್ಲಿ ನನಗೆ ನೆಮ್ಮದಿಯೇ ಇಲ್ಲ’ ಎನ್ನುವ ಭಾವವನ್ನು ನಮ್ಮೊಳಗೆ ಮೂಡಿಸುತ್ತವೆ.

ದುಷ್ಟ ಆಸೆಗಳನ್ನು ಮೊದಲಿಗೆ ಕಂಡು ಹಿಡಿದು ಅವುಗಳನ್ನು ನಮ್ಮ ಮನಸ್ಸಿನಿಂದ ಕಿತ್ತೊಗೆಯಲು ಕೆಲವು ದಾರಿಗಳಿವೆ. ಅವು...

- ಒಂದು ಮರವನ್ನು ಕಡಿಯಬೇಕಾದರೆ ಮೊದಲಿಗೆ ಅವುಗಳ ರೆಂಬೆಗಳನ್ನು ಕಡಿಯಬೇಕು. ಅದರ ನಂತರ ಮರದ ಬೇರನ್ನು ಕಡಿದು ಅದನ್ನು ತೆಗೆಯುವುದು ಸುಲಭವಾಗುತ್ತದೆ. ಅದೇ ರೀತಿಯಲ್ಲೇ ಆಸೆ ಎನ್ನುವ ಮರವನ್ನು ಕಡಿದು ಹಾಕಬೇಕಾದರೆ ಮೊದಲಿಗೆ, ಅದರ ರೆಂಬೆಗಳಂತಿರುವ ಇಷ್ಟಾನಿಷ್ಟಗಳನ್ನು ಕತ್ತರಿಸಿ ಒಗೆಯಬೇಕು.

- ದೇವರ ಮೇಲೆ ಭಕ್ತಿ ಇರುವವರು, ‘ನಮಗೆ ಏನು ಬೇಕೋ ಅದನ್ನು ದೇವರು ನಮಗೆ ನೀಡುತ್ತಾನೆ’ ಎಂದು ದೇವರ ಮೇಲೆ ಭಾರ ಹಾಕಿ ನಮ್ಮಲ್ಲಿರುವ ದುಷ್ಟ ಆಲೋಚನೆಗಳನ್ನು ಕೈಬಿಡಬೇಕು. ಇಲ್ಲದವರು, ‘ನಮಗೆ ಯಾವುದು ಒಳಿತೋ ಅದು ಖಂಡಿತಾ ನಮಗೆ ದೊರಕುತ್ತದೆ’ ಎಂದು ಭಾವಿಸಿ ಅದರಿಂದ ದೂರ ಇರಬಹುದು.

- ಹಠವಾರಿ ಸ್ವಭಾವವುಳ್ಳವರ ಮನಸ್ಸಿನಲ್ಲೇ ದುಷ್ಟ ಆಲೋಚನೆಗಳು ಹೆಚ್ಚಾಗಿ ಮೂಡುವುದು. ‘ಬೇಕು... ಬೇಡ...’ ಎನ್ನುವ ವಿಷಯದಲ್ಲಿ ಹೆಚ್ಚು ಹಠ ಹಿಡಿಯಬಾರದು. ಪ್ರತಿಯೊಂದರ ಪರಿಣಾಮವನ್ನೂ ಅರಿತು ಕಾರ್ಯ ನಿರ್ವಹಿಸಬೇಕು.

- ಒಂದು ಮನೆಗೆ ಬರುವ ಒಬ್ಬ ಅತಿಥಿ ಆ ಮನೆಗೆ ಸಂಬಂಧಿಸಿದ ವಿಷಯಗಳಲ್ಲಿ ಕಂಡೂ ಕಾಣದಂತೆ ನಡೆದುಕೊಳ್ಳುವರು. ಆಸೆಗಳ ವಿಷಯದಲ್ಲೂ ಹೀಗೇ ಇರಬೇಕು. ಆಸೆಗೆ ದಾಸರಾಗದೆ, ದೂರ ನಿಂತು ಅದನ್ನು ನೋಡಬೇಕು. ಆಗಲೇ ಅದು ಸರಿಯೇ, ತಪ್ಪೇ ಎನ್ನುವುದು ಅರ್ಥವಾಗುವುದು.

- ನಮಗೇನು ದೊರಕಬೇಕಾಗಿದೆಯೋ ಅದೇ ನಮಗೆ ದೊರಕುವುದು ಎಂದು ನಂಬಿ. ‘ಇದು ಖಂಡಿತಾ ನನಗೆ ಬೇಕೇ ಬೇಕು’ ಎಂದು ಹಠ ಹಿಡಿಯುವುದರಿಂದ ಆಗುವ ಪರಿಣಾಮಗಳನ್ನು ಯೋಚಿಸಿ ನೋಡಿ. ಅಂತಹ ಆಸೆಗಳನ್ನು ಬೇರು ಸಮೇತ ಕಿತ್ತು ಹಾಕುವಿರಿ. ‘ನನಗೆ ಇದು ಬೇಕು, ಇದು ಬೇಡ’ ಎನ್ನುವುದರಲ್ಲಿ ಸ್ಪಷ್ಟತೆ ಇದ್ದರೆ ಅಷ್ಟು ಸಾಕು!

- ಒಂದು ಆಸೆ ನಿಮ್ಮಲ್ಲಿ ಮೂಡಿದಾಗ, ಅದನ್ನು ಅನುಸರಿಸಿದರೆ ಅದರಿಂದ ನಮಗೆ ಒಳ್ಳೆಯದಾಗುತ್ತದೆಯೇ, ಇಲ್ಲ ಸಮಸ್ಯೆಗಳು ತೋರಬಹುದೇ ಎಂದು ಯೋಚಿಸಿ ನೋಡಿ. ಕಡೆಯಲ್ಲಿ ನಿಮಗೆ ಸಮಸ್ಯೆಯನ್ನು ತಂದೊಡ್ಡದ ಆಸೆಗಳನ್ನು ಮಾತ್ರವೇ ಅನುಸರಿಸಿರಿ.


- ಕಾರು ಓಡಿಸುವುದಕ್ಕೇ ಬಾರದ ಒಬ್ಬರು ಕಾರ್ ರೇಸ್‌ನಲ್ಲಿ ಜಯ ಗಳಿಸಬೇಕು ಎಂದು ಬಯಸುವ ರೀತಿಯಲ್ಲಿ, ನಮ್ಮ ಕೈಗುಟುಕದ ವಿಷಯಗಳಿಗೆ ಆಸೆ ಪಡುವುದು ಆಭಾಸವಾಗುತ್ತದೆ. ನಮ್ಮಿಂದ ಸಾಧ್ಯವಿಲ್ಲ ಎಂದು ಅನ್ನಿಸುವ ವಿಷಯಗಳ ಮೇಲಿನ ಆಸೆಯನ್ನು ಕೈಬಿಡುವುದೇ ಒಳ್ಳೆಯದು. ●

# ಆಸೆಗೆ ಏನು ಬೇಕು?

ಒಬ್ಬ ಯುವಕ, ಮಹಾತತ್ವಜ್ಞಾನಿ ಸಾಕ್ರೆಟೀಸನ ಬಳಿಗೆ ಬಂದ. 'ನಾನು ಜೀವನದಲ್ಲಿ ಏನನ್ನಾದರೂ ಸಾಧಿಸಲು ಬಯಸುತ್ತೇನೆ. ಅದ–ಕ್ಕೆ ಬೇಕಾದ ತಿಳಿವಳಿಕೆಯೂ, ಸಾಮರ್ಥ್ಯವೂ ನನಗೆ ಹೇಗೆ ದೊರಕುತ್ತದೆ?' ಎಂದು ಅವರ ಬಳಿ ಕೇಳಿದ. ಸಾಕ್ರೆಟೀಸ್ ಅವನನ್ನೇ ನೋಡಿ ಶಾಂತವಾಗಿ ಎದ್ದು, 'ನನ್ನ ಜೊತೆಯಲ್ಲಿ ಬಾ' ಎಂದು ಹೇಳಿ ಅವನನ್ನು ತನ್ನ ಜೊತೆ ಕರೆದುಕೊಂಡು ಹೊರಟ. ಇವನೂ ಸಾಕ್ರೆಟೀಸನನ್ನು ಅನುಸರಿಸಿದ. ಊರಿನ ಕೊನೆಯಲ್ಲಿದ್ದ ಕೊಳದ ಬಳಿಗೆ ತಲುಪಿದ ಸಾಕ್ರೆಟೀಸ್ ಕೊಳದೊಳಗೆ ಇಳಿದು ನಡೆ–ಯತೊಡಗಿದ. ಇವನೂ ಅವನನ್ನೇ ಅನುಸರಿಸಿದ.

ಕುತ್ತಿಗೆಯವರೆಗೆ ನೀರು ಬರುವವರೆಗೂ ಸುಮ್ಮನೆ ನಡೆದು ಹೋಗುತ್ತಿದ್ದ ಸಾಕ್ರೆಟೀಸ್, ಥಟ್ಟನೆ ಹಿಂದೆ ತಿರುಗಿ ಆ ಯುವಕನ ತಲೆಯನ್ನು ಹಿಡಿದು ಅವನನ್ನು ನೀರಿನಲ್ಲಿ ಮುಳುಗಿಸಿದ. ಇದನ್ನು ನಿರೀಕ್ಷಿಸದಿದ್ದ ಯುವಕ ಉಸಿರು ಬಿಡುವುದಕ್ಕೇ ಒದ್ದಾಡಿದ. ತುಂಬಾ ನೀರು ಕುಡಿದು, ಒದ್ದಾಡಿ ಇನ್ನೇನು ಪ್ರಾಣವೇ ಹೋಗಿ ಬಿಡಬಹುದು ಎನ್ನುವ ಸ್ಥಿತಿಯಲ್ಲಿ ಅದು ಹೇಗೋ ಪ್ರಯತ್ನ ಪಟ್ಟು ಸಾಕ್ರೆಟೀಸನ ಹಿಡಿತವನ್ನು ಬಿಡಿಸಿಕೊಂಡು ಅವನು ನೀರಿನಿಂದ ಮೇಲೆ ಬಂದ. ವೇಗವಾಗಿ ದಡದತ್ತ ಓಡಿ ಹೋಗಿ, ಚೆನ್ನಾಗಿ ಉಸಿರೆಳೆದುಕೊಂಡು ಬಿಡತೊಡಗಿದ.

'ನಿನ್ನನ್ನು ಕೊಲ್ಲಬೇಕೆಂಬುದು ನನ್ನ ಉದ್ದೇಶವಲ್ಲ. ಅನುಭವದ ಪಾಠವನ್ನು ನಿನಗೆ ಹೇಳಿ ಕೊಡಲು ನಾನು ಬಯಸಿದೆ. ನೀನು ನೀರಿನೊಳಗೆ ಮುಳುಗಿದ ಆ ಕ್ಷಣದಲ್ಲಿ ನಿನಗೆ ಯಾವುದು ತೀರ ಅಗತ್ಯ ಎಂದು ಅನ್ನಿಸಿತು?' ಎಂದು ಸಾಕ್ರೆಟೀಸ್ ಕೇಳಿದ. 'ಉಸಿರಾಡುವ ಗಾಳಿ' ಎಂದು ಅವನು ಉತ್ತರಿಸಿದ. 'ಅದೇ ರೀತಿಯಲ್ಲಿ ನೀನು ನಿನ್ನ ಅರಿವನ್ನು ಬೆಳೆಸಿಕೊಳ್ಳಲೂ ತೀವ್ರವಾಗಿ ಬಯಸಿದರೆ ಅದನ್ನು ಖಂಡಿತಾ ಪಡೆದುಕೊಳ್ಳುವೆ' ಎಂದು ತಿಳಿಸಿದ ಸಾಕ್ರೆಟೀಸ್.



ಜೀವನದಲ್ಲಿ ನೀವು ಏನನ್ನಾದರೂ ಸಾಧಿಸಲು ಬಯಸಿದರೆ ಅದನ್ನು ನಿಮ್ಮ ಪ್ರಾಣವಾಯುವಿನಂತೆ ಭಾವಿಸಿ, ಇಂದೇ ಅದಕ್ಕಾಗಿ ದುಡಿಯಲು ಆರಂಭಿಸಿ. ನಂಬಿಕೆಗಿಂತಲೂ, ಸಾಮರ್ಥ್ಯಕ್ಕಿಂತಲೂ ಆಸೆಯೇ ಹೆಚ್ಚು ಸಾಧನೆಗಳಿಗೆ ಕಾರಣವಾಗಿದೆ. ಇದನ್ನು ಮಾಡಿಯೇ ಮಾಡಬೇಕು ಎಂದು ಮನಸ್ಸಿನಲ್ಲಿ ಆಸೆ ಮೂಡುವಾಗ, ಅದನ್ನು ಸಾಧಿಸುವ ದಾರಿಯೂ ನಿಮಗೆ ತೋರುತ್ತದೆ. ಪ್ರಾಮಾಣಿಕವಾದ ಆಸೆಯನ್ನು ಹೇಗೆ ಪೂರ್ತಿ ಮಾಡಿಕೊಳ್ಳುವುದು ಎನ್ನುವ ದಾರಿ ಕಾಣಿಸದೆಯೇ ಹಲವರು ಸೋಲನ್ನು ಅನುಭವಿಸುವುದು.

ಕಂಡಕ್ಟರ್ ಸಿಳ್ಳೆ ಹಾಕಿದ ಕೂಡಲೇ ಬಸ್ ಮುಂದೆ ಚಲಿಸುವಂತೆ, ಯಾವುದಾದರೂ ಒಂದು ಘಟನೆ ನಮ್ಮ ಬದುಕಿನಲ್ಲಿ ಸಂಭವಿಸಿದರೇನೇ ನಮ್ಮಿಂದ ಏನನ್ನಾದರೂ ಸಾಧಿಸಲು ಸಾಧ್ಯ ಎಂದು ಕೆಲವರು ಭಾವಿಸುತ್ತಾರೆ. ಹೀಗೆ ಕಾಯುವುದರಲ್ಲಿ ಯಾವ ಅರ್ಥವೂ ಇಲ್ಲ. ಮುಂದಿನ ಅವಕಾಶ ಯಾವಾಗ ಬಂದು ಬಾಗಿಲು ತಟ್ಟುತ್ತದೆ ಎಂದು ನಿರೀಕ್ಷಿಸುವುದನ್ನು ಬಿಟ್ಟು, ಈಗ ನಿಮ್ಮ ಮುಂದೆ ಇರುವ ಅವಕಾಶವನ್ನು ಉಪಯೋಗಿಸಿಕೊಳ್ಳಿ. ಸಂಪೂರ್ಣ ಪ್ರಯತ್ನವನ್ನು ಮಾಡುವುದಕ್ಕಿಂತಲೂ ಉತ್ತಮವಾದ ವಿಷಯ ಬೇರಾವುದೂ ಇರಲು ಸಾಧ್ಯವೇ ಇಲ್ಲ. ಇಂದು ನಾವು ಏನನ್ನೂ ಮಾಡದೆ ಸುಮ್ಮನೆ ಇದ್ದರೆ, ನಾಳೆ ಎಂಬುದು ನಮಗೆ ಇರುವುದಿಲ್ಲ. ನಾಳೆ ಸಿಗಬಹುದಾದ ಮನುಷ್ಯರಿಗಾಗಿ ಕಾಯದೆ, ಇಂದು ನಿಮ್ಮ ಜೊತೆಯಲ್ಲಿರುವ ಮನುಷ್ಯರ ಜೊತೆಯಲ್ಲಿ ಈ ದಿನವನ್ನು ಕಳೆಯಿರಿ. ನಾಳೆಯ ದಿನಗಳ ಪರಿಣಾಮಗಳಿಗಾಗಿ ಕಾಯುತ್ತಿರದೆ, ಇಂದಿನ ಕೆಲಸಗಳನ್ನು ಮಾಡಿ ಮುಗಿಸಿ. ನಾಳಿನ ಬದಲಾವಣೆಗಳ ಬಗ್ಗೆ ನಂಬಿಕೆ ಇಡದೆ, ಇಂದಿನ ದಿನವನ್ನು ಬದಲಾಯಿಸಲು ಅಗತ್ಯವಾದ ಕೆಲಸಗಳನ್ನು ಮಾಡಿ.

ಪ್ರತಿಯೊಬ್ಬ ಮನುಷ್ಯರ ಜೀವನವೂ ಒಂದು ಕತೆಯೇ. ಅದನ್ನು ಚೆನ್ನಾಗಿ ಬರೆಯುವ ಅವಕಾಶ ದೊರಕುವುದೂ ಅವರಿಗೆ ಮಾತ್ರವೇ. ಭೂತಕಾಲಕ್ಕಿಂತಲೂ ಭವಿಷ್ಯವನ್ನು ಇನ್ನೂ ಉತ್ತಮವಾದುದನ್ನಾಗಿ ಬದಲಾಯಿಸಿಕೊಳ್ಳಬೇಕು ಎನ್ನುವುದೇ ಪ್ರತಿಯೊಬ್ಬರ ಆಸೆಯಾಗಿರುತ್ತದೆ. ಇಂದು ನಾವು ಯಾವ ಸ್ಥಳದಲ್ಲಿದ್ದೇವೆ ಎನ್ನುವುದನ್ನು ಯೋಚಿಸಿ ನೋಡಿ. ಇಂದು ನಾವು ಸರಿಯಾದ ರೀತಿಯಲ್ಲಿ ಪಡುತ್ತಿರುವ ಶ್ರಮವನ್ನು, ಒಂದು ವಾರದ ಹಿಂದೆಯೇ ಪಟ್ಟಿದ್ದರೆ ಇಂದು ನಾವು ಎಲ್ಲಿರುತ್ತಿದ್ದೆವು ಎಂದು ಯೋಚಿಸಿ ನೋಡಿ. ಹಾಗೆಯೇ ಒಂದು ತಿಂಗಳ ಹಿಂದೆಯೇ, ಒಂದು ವರ್ಷಕ್ಕೆ ಮೊದಲೇ, ಐದು ವರ್ಷಗಳೇ ಮೊದಲೇ ಈ ಕೆಲಸ ಮಾಡಿದ್ದರೆ ಇಂದು ನಾವು ಯಾವ ಸ್ಥಾನದಲ್ಲಿರುತ್ತಿದ್ದೆವು ಎಂದು ಯೋಚಿಸಿ ನೋಡಿ. ಆಗ ನಿಮಗೆ ದೊರಕುವ ಉತ್ತರ ನಿಮ್ಮನ್ನು ಬೇಸರ ಹಾಗೂ ಸಂಕಟಪಡಿಸಬಹುದು. ಇನ್ನೂ ಕೆಲವು ವರ್ಷಗಳ ನಂತರ ಇದೇ ರೀತಿಯ ಪ್ರಶ್ನೆಯನ್ನು ನಿಮಗೆ ನೀವೇ ಕೇಳಿಕೊಂಡಲ್ಲಿ ಆಗಲೂ ನೀವು ಇದೇ ರೀತಿಯಲ್ಲಿ ಸಂಕಟ ಪಡುವ ಪರಿಸ್ಥಿತಿ ನಿಮಗೆ ಬರಬಾರದು. ಈ ಪ್ರಶ್ನೆ ನಿಮ್ಮೊಳಗೆ ಮೂಡಿದರೆ ಸಾಕು. ನ್ಯಾಯವಾದ ಆಸೆಗಳನ್ನು ನೆರವೇರಿಸುವ ತಾರಕ ಮಂತ್ರ ಇದೇ!

ಒಂದು ಗ್ರಾಮದಲ್ಲಿ ಇಬ್ಬರು ಸೋದರರು ಇದ್ದರು. ಅಣ್ಣ ತುಂಬಾ ಬಲಶಾಲಿಯಾಗಿದ್ದ. ಮನೆಗೆಲಸದಲ್ಲಿ ಅವನು ತನ್ನ ಪೋಷಕರಿಗೆ ಸಹಾಯ ಮಾಡುತ್ತಿದ್ದ.

ಚೆನ್ನಾಗಿ ಊಟ ಮಾಡುತ್ತಿದ್ದ. ತಮ್ಮ ಹುಟ್ಟುವಾಗಲೇ ಕೃಶವಾಗಿದ್ದ. ಅವನ ಕಲಿಕಾ ಸಾಮರ್ಥ್ಯವೂ ಅಷ್ಟಕ್ಕಷ್ಟೇ. ಈ ಕಾರಣಗಳಿಂದಾಗಿ ಅವನು ಎಲ್ಲಾ ಕೆಲಸಗಳನ್ನೂ ನಿಧಾನವಾಗಿಯೇ ಮಾಡುತ್ತಿದ್ದ.

ಆ ಗ್ರಾಮಕ್ಕೆ ಅಂಟಿಕೊಂಡಂತೆ ಒಂದು ನದಿ ಹರಿಯುತ್ತಿತ್ತು. ನದಿಯ ಆ ದಡ ಇಲ್ಲಿಂದ ಕಾಣುತ್ತಿರಲಿಲ್ಲ. ಅಷ್ಟರ ಮಟ್ಟಿಗೆ ದೊಡ್ಡ ಪ್ರಮಾಣದ ನದಿ ಅದು. ಆ ನದಿಯಲ್ಲಿ ಈ ಸೋದರರಿಬ್ಬರೂ ಪದೇಪದೇ ಈಜುವ ಸ್ಪರ್ಧೆಯನ್ನು ಮಾಡುತ್ತಿದ್ದರು. 'ನದಿಯಲ್ಲಿ ಈಜಿ ಮೊದಲು ಆ ಬದಿಯ ದಡವನ್ನು ಯಾರು ತಲುಪುತ್ತಾರೆ?' ಎನ್ನುವುದೇ ಅವರ ನಡುವೆ ನಡೆಯುತ್ತಿದ್ದ ಸ್ಪರ್ಧೆ. ಪೂರ್ತಿ ಈಜಲು ಸಾಧ್ಯವಾಗದಿದ್ದಲ್ಲಿ, ಯಾರು ಮೊದಲು ಹಿಂದಿರುಗಿ ಬರುತ್ತಾ–ರೋ ಅವರು ಸೋತಂತೆ.

ಅವರು ಈಜಲು ಆರಂಭಿಸುವಾಗಲೇ, ಮತ್ತೆ ಹಿಂದಿರುಗುವ ಶಕ್ತಿಯೂ ಅವರಲ್ಲಿ ಇರಬೇಕಾಗಿತ್ತು. ಪ್ರತಿ ಸಲ ಸ್ಪರ್ಧೆ ನಡೆಯುವಾಗಲೂ ಅರ್ಧದಲ್ಲೇ ಹೆದರಿಕೊಂಡು ತಮ್ಮ ಹಿಂದಿರುಗಿ ಈ ದಡಕ್ಕೆ ಮೊದಲು ಬಂದು ಬಿಡುತ್ತಿದ್ದ. ಸ್ವಲ್ಪ ದೂರ ಸಾಗುತ್ತಿದ್ದಂತೆಯೇ ಅವನ ಕಾಲುಗಳು ನೋಯತೊಡಗುತ್ತಿದ್ದವು. ಉಸಿರಾಡಲು ಕಷ್ಟವಾಗುತ್ತಿತ್ತು. ಇವನು ಬಂದ ಸ್ವಲ್ಪ ಸಮಯದೊಳಗೇ ಅಣ್ಣ ಕೂಡ ಹಿಂದಿರುಗಿ ಬಂದು ಬಿಡುತ್ತಿದ್ದ. ದಡಕ್ಕೆ ಹಿಂದಿರುಗಿದ ಮೇಲೆ ಅಣ್ಣ ಅವನತ್ತ ನೋಡಿ ಗೆಲುವಿನ ನಗೆ ಬೀರುತ್ತಿದ್ದ. ಆದರೆ ಒಮ್ಮೆ ಕೂಡ ಇಬ್ಬರೂ ಆಚೆ ದಡವನ್ನು ತಲುಪಿದ್ದೇ ಇಲ್ಲ.



ಒಂದು ದಿನ ಇಬ್ಬರ ನಡುವೆ ಒಂದು ತೀವ್ರವಾದ ಸ್ಪರ–್ಧೆ ನಡೆಯಿತು. ಅಂದು ತಮ್ಮನ ಮನಸ್ಸಿನಲ್ಲಿ ಎಂದಿನಂತೆ ತವಕವೋ, ಭಯವೋ ಇರಲಿಲ್ಲ. ಒಂದು ದೃಢ ನಿಶ್ಚಯ ಅವನ ಮನಸ್ಸಿನಲ್ಲಿ ಮನೆ ಮಾಡಿಕೊಂಡಿತ್ತು. ಆದ್ದರಿಂದ ಕಾಲುಗಳು ನೋಯುತ್ತಿವೆ ಎಂದು ಅವನು ಹೇಳಲಿಲ್ಲ. ಸಹಜವಾಗಿ ಉಸಿರೆಳೆದುಕೊಂಡು ನಿಧಾನವಾಗಿ ಈಜಲು ಆರಂಭಿಸಿದ. ಎಂದಿನಂತೆ ಅವನೇ ಮೊದಲು ಹಿಂದಿರುಗುವುದು ನಿಶ್ಚಯ ಎಂದು ಅಣ್ಣ ಅಂದುಕೊಂಡ. ಹೀಗಾಗಿ ಅವನು ಎಂದಿಗಿಂತಲೂ ಹೆಚ್ಚು ವೇಗವಾಗಿ ಈಜಲು ಆರಂಭಿಸಿದ.

ಸ್ವಲ್ಪ ಮುಂದೆ ಸಾಗಿದ ಮೇಲೆ ಅಣ್ಣನಿಗೆ ಸ್ವಲ್ಪ ಭಯ ಕಾಣಿಸಿಕೊಂಡಿತು. 'ತಮ್ಮಾ! ನಾವು ಎಂದಿಗಿಂತಲೂ ತುಂಬಾ ದೂರ ಬಂದು ಬಿಟ್ಟಿದೇವೆ. ಹಿಂದಿರುಗಿ ನೋಡಿದರೆ, ನಾವು ಹೊರಟ ದಡವೇ ಕಾಣಿಸುತ್ತಿಲ್ಲ' ಎಂದ. ತಮ್ಮ ನಿಧಾನವಾಗಿ, 'ಏಕೆ ತಿರುಗಿ ನೋಡುತ್ತೀಯಾ? ಮುಂದಿನ ದಡವನ್ನು ತಲುಪಬೇಕು ಎನ್ನುವುದು ತಾನೇ ನಮ್ಮ ನಡುವಿನ ಸ್ಪರ್ಧೆ. ನಾವು ಹೊರಟ ದಡ ಎಲ್ಲಿದ್ದರೇನು?' ಎಂದು ಕೇಳಿದ.

'ಹಾಗಲ್ಲ, ನಮ್ಮಿಂದ ಸಾಧ್ಯವಿಲ್ಲ ಎಂದಾದರೆ ಮತ್ತೆ ನಾವು ಹಿಂದಿರುಗಿ ಹೋಗಲು ನಮ್ಮಲ್ಲಿ ಶಕ್ತಿ ಇರಬೇಕಲ್ಲವೇ? ಆದ್ದ–ರಿಂದ ಹೇಳಿದೆ' ಎಂದ ಅಣ್ಣ. 'ನೀನು ಸೋಲನ್ನು ಒಪ್ಪಿಕೊಂಡು ಹಿಂದಿರುಗಿ ಹೋಗುತ್ತೀಯಾ?' ಎಂದು ತಮ್ಮ ಕೇಳಿದಾಗ ಅಣ್ಣನಿಗೆ ಕೋಪ ಬಂತು. 'ಇಲ್ಲ' ಎಂದು ಹೇಳಿ ಮುಂದೆ ಈಜತೊಡಗಿದ.

ಹೀಗೆಯೇ ಪರಸ್ಪರ ಇಬ್ಬರೂ ವಾದ ವಿವಾದ ಮಾಡುತ್ತಾ ಮುಂದೆ ಈಜಿದರು. ಒಂದು ಹಂತದಲ್ಲಿ ಅಣ್ಣ ತುಂಬಾ ಭಯಗ–ೊಂಡು, 'ಬೇಡ ತಮ್ಮಾ! ಬಾ ಹಿಂದಕ್ಕೆ ಹೋಗಿ ಬಿಡೋಣ' ಎಂದು ವಿನಂತಿಸಿಕೊಂಡ. ಆದರೆ ತಮ್ಮ ದೃಢವಾಗಿ, 'ಇಲ್ಲ ಅಣ್ಣಾ! ಸಾಧ್ಯವಿಲ್ಲ. ಈಗ ನಮಗೆ ಹತ್ತಿರ ಇರುವುದು ಎದುರು ದಡವೇ. ಹಿಂದಿರುಗಿ ಹೋಗುವುದಕ್ಕಿಂತ ಆಚೆ ದಡವನ್ನು ತಲುಪುವುದೇ ನಮಗೆ ಸುಲಭ' ಎಂದ. ಆದರೆ ಅಣ್ಣ ಅವನ ಮಾತನ್ನು ಕೇಳದೆ ಹಿಂದಿರುಗಿ ತಾವು ಬಂದ ಕಡೆಯೇ ಸಾಗುವಾಗ ನೀರಿನಲ್ಲಿ ಮುಳುಗಿ ಬಿಟ್ಟ. ಅವನನ್ನೂ ರಕ್ಷಿಸಿ ಎಳೆದುಕೊಂಡು ಹೋಗಿ ಆಚೆ ದಡವನ್ನು ತಲುಪಿದ ತಮ್ಮ.

ದಡ ಮುಟ್ಟಿದ ಕೆಲವು ನಿಮಿಷಗಳ ನಂತರ ಕಣ್ತೆರೆದ ಅಣ್ಣ, 'ಅದು ಹೇಗೆ ನಿನ್ನಿಂದ ಇದು ಸಾಧ್ಯವಾಯಿತು!?' ಎಂದು ಆಶ್ಚರ್ಯದಿಂದಲೂ ಪ್ರೀತಿಯಿಂದಲೂ ತಮ್ಮನನ್ನು ಪ್ರಶ್ನಿಸಿದ. 'ಇಂದು ನಾನು ಹಿಂದಿರುಗಿ ಹೋಗುವುದಕ್ಕಾಗಿ ನನ್ನ ಶಕ್ತಿಯನ್ನು ಸೇರಿಸಿಡಲಿಲ್ಲ. ನನ್ನ ಪ್ರಾಣವನ್ನು ಪಣವಿಟ್ಟಾದರೂ ಸರಿಯೇ, ಆಚೆ ದಡವನ್ನು ಸೇರಲೇಬೇಕು ಎಂದು ಬಲವಾಗಿ ಆಸೆ ಪಟ್ಟೆ' ಎಂದ ತಮ್ಮ.

ನೀವು ಒಮ್ಮೆ ನಿರ್ಧಾರವನ್ನು ತೆಗೆದುಕೊಂಡು ಬಿಟ್ಟರೆ, ಯಾವ ಆಸೆಯೇ ಆಗಿದ್ದರೂ ಅದು ನೀವು ಮುಟ್ಟಬಹುದಾದ ಗುರಿಯೇ ಆಗಿರುತ್ತದೆ. ಆದರೆ, ದೃಢವಾದ ನಿರ್ಧಾರ ತೆಗೆದುಕೊಳ್ಳಬೇಕಾದುದು ಮುಖ್ಯ. ●

# ಸಂತೃಪ್ತಿಗೆ ಆಸೆಪಡಿ!

ಅಮೇರಿಕಾದ ಅತಿ ದೊಡ್ಡ ಶ್ರೀಮಂತ ವ್ಯಕ್ತಿಯ ಬಳಿ ಒಮ್ಮೆ, 'ಎಷ್ಟು ಹಣ ಇದ್ದರೆ ನಿಮಗೆ ಸಾಕು?' ಎಂಬ ಪ್ರಶ್ನೆಯನ್ನು ಒಬ್ಬ ವ್ಯಕ್ತಿ ಕೇಳಿದ. 'ನನ್ನ ಬಳಿ ಈಗ ಇರುವುದಕ್ಕಿಂತಲೂ ತುಂಬ ಹೆಚ್ಚು ಹಣ ಇರಬೇಕು' ಎಂದು ಉತ್ತರಿಸಿದ ಆ ಶ್ರೀಮಂತ.

ಯೂರೋಪ್ ಖಂಡದಲ್ಲೇ ಅತಿ ದೊಡ್ಡ ದೇಶ ಫ್ರಾನ್ಸ್. ಫ್ರಾನ್ಸ್ ದೇಶದ ರಾಜನಾಗಿದ್ದವನು ಹದಿನಾರನೇ ಲೂಯಿ. ಅವನು ತುಂಬಾ ದೀರ್ಘ ಕಾಲ ಅಲ್ಲಿ ಆಳ್ವಿಕೆ ನಡೆಸಿದ. ಅವನ ಸಾಮ್ರಾಜ್ಯ ಸಮೃದ್ಧವಾಗಿತ್ತು. ಅವನು ಬಯಸಿದ್ದೆಲ್ಲವೂ ಅವನಿಗೆ ದೊರಕುವ ಮಟ್ಟಿಗೆ, ಅರಮನೆಯಲ್ಲಿ ಎಲ್ಲವೂ ಸಂಪದ್ಭರಿತವಾಗಿದ್ದವು. ಆದರೂ ಆತ ಹೊಸ ಹೊಸ ನಿಯಮಗಳನ್ನು ಜಾರಿಗೆ ತರುತ್ತಲೇ ಇದ್ದ. ಇನ್ನೂ ಹೆಚ್ಚಿನ ಅಧಿಕಾರಕ್ಕಾಗಿ ಆತ ಬಯಸುತ್ತಿದ್ದ.

'ಇನ್ನೂ ಬೇಕು... ಇನ್ನೂ ಬೇಕು' ಎನ್ನುವ ಯೋಚನೆಯೂ ಆಸೆಗಳಿಗೆ ಮೂಲಾಧಾರವಾಗಿರುತ್ತದೆ. ದೊಡ್ಡ ದೊಡ್ಡ ಮನುಷ್ಯರಿಗೆ ದೊಡ್ಡ ದೊಡ್ಡ ಆಸೆಗಳೇ ಇರುತ್ತವೆ. ಚಿಕ್ಕವರಿಗೆ ಚಿಕ್ಕ ಪ್ರಮಾಣದ ಆಸೆಗಳು ಮಾತ್ರವೇ ಇರುತ್ತವೆ.


ಒಬ್ಬ ರಾಜನಿಗೆ ಒಂದು ಅಭ್ಯಾಸ ಇತ್ತು. ದಿನವೂ ಬೆಳಿಗ್ಗೆ ತಾನು ಅರಮನೆಯಿಂದ ಹೊರಗೆ ಬರುವಾಗ ಎದುರಾಗುವ ಮೊದಲ ವ್ಯಕ್ತಿಯ ಆಸೆಯನ್ನು ಆತ ಪೂರೈಸುತ್ತಿದ್ದ. ಒಂದು ದಿನ ಹಾಗೆ ಅವನು ಬೆಳಿಗ್ಗೆ ಹೊರಗೆ ಬಂದಾಗ ಒಬ್ಬ ಸನ್ಯಾಸಿ ಅವನ ಕಣ್ಣಿಗೆ ಮೊದಲು ಕಾಣಿಸಿದ. 'ಸನ್ಯಾಸಿಗೆ ಹೋಗಿ ಯಾವ ಆಸೆ ಇರುತ್ತದೆ? ಸರಳವಾಗಿ ಏನಾದರೂ ಕೇಳಬಹುದು. ಅದನ್ನು ಸುಲಭವಾಗಿ ನಾನು ಪೂರೈಸಬಹುದು' ಎಂದು ಅರಸ ಮನಸ್ಸಿನಲ್ಲೇ ಯೋಚಿಸಿದ.


ಹತ್ತಿರ ಹೋಗಿ ಸನ್ಯಾಸಿಗೆ ನಮಸ್ಕರಿಸಿ, ತನ್ನ ಎಂದಿನ ಅಭ್ಯಾಸವನ್ನು ಅವನಿಗೆ ತಿಳಿಸಿ, 'ನಿಮ್ಮ ಆಸೆ ಏನು ಹೇಳಿ? ಪೂರೈಸುತ್ತೇನೆ' ಎಂದ. ಸನ್ಯಾಸಿ, 'ಏನೂ ಬೇಡ ಅರಸೇ! ಅದನ್ನು ಪೂರೈಸುವುದು ನಿನ್ನಿಂದ ಸಾಧ್ಯವಾಗುವುದಿಲ್ಲ. ಮಾತು ಕೊಟ್ಟು ಸಂಕಷ್ಟದಲ್ಲಿ ಸಿಲುಕಿಕೊಳ್ಳದಿರು' ಎಂದು ಎಚ್ಚರಿಸಿದ. ಅರಸನಿಗೆ ಅದನ್ನು ಕೇಳಿ ಸಿಟ್ಟೇ ಬಂತು. 'ನನ್ನಿಂದ ಸಾಧ್ಯವಿಲ್ಲದುದು ಈ ಜಗತ್ತಿನಲ್ಲಿ ಇಲ್ಲವೇ ಇಲ್ಲ. ನಿಮ್ಮ ಆಸೆ ಏನೆಂದು ತಿಳಿಸಿರಿ!?' ಎಂದು ಒತ್ತಾಯ ಮಾಡಿದ. ಆಗ ಸನ್ಯಾಸಿ, 'ಸರಿ, ಹಾಗಾದರೆ ನಿನ್ನಿಷ್ಟ' ಎಂದ ಸನ್ಯಾಸಿ, ತನ್ನ ಕೈಯಲ್ಲಿದ್ದ ಒಂದು ಭಿಕ್ಷಾ ಪಾತ್ರೆಯನ್ನು ತೋರಿಸಿ, 'ಇದರಲ್ಲಿ ಏನನ್ನಾದರೂ ದಾನವನ್ನಾಗಿ ಹಾಕಿ ಈ ಪಾತ್ರೆಯನ್ನು ತುಂಬಿಸು' ಎಂದು ಹೇಳಿದ.

ರಾಜ ತನ್ನ ಅರಮನೆಯ ಭಂಡಾರಿಯನ್ನು ಕರೆಸಿದ. 'ಈ ಭಿಕ್ಷಾ ಪಾತ್ರೆ ತುಂಬ ನಾಣ್ಯಗಳನ್ನು ಹಾಕಿದರೆ ಸಾಕು.... ಅದನ್ನೇ ಹಾಕಿ' ಎಂದು ಅವನು ಸಲಹೆ ನೀಡಿದ. ರಾಜ ತನ್ನ ಕೈತುಂಬ ನಾಣ್ಯಗಳನ್ನು ತೆಗೆದು ಹಾಕಿದ. ಹಾಕಿದ ಕೂಡಲೇ ಪಾತ್ರೆ ಎಲ್ಲವನ್ನೂ ತನ್ನೊಳಗೆ ಸೆಳೆದುಕೊಂಡಿತು. ಹಾಕುತ್ತಿದ್ದಂತೆಯೇ ಕ್ಷಣ ಮಾತ್ರದಲ್ಲಿ ಎಲ್ಲಾ ನಾಣ್ಯಗಳೂ ಮಾಯವಾಗಿ, ತಟ್ಟೆ ಖಾಲಿಯಾಯಿತು. ನಾಣ್ಯಗಳನ್ನು ತಟ್ಟೆಯಲ್ಲಿ ಹಾಕುತ್ತಿದ್ದಂತೆ ಎಲ್ಲವನ್ನೂ ಅದು ತನ್ನೊಳಗೆ ಸೆಳೆದುಕೊಂಡು ಬಿಡುತ್ತಿತ್ತು. ಎಷ್ಟು ಹಾಕಿದರೂ ಪಾತ್ರೆ ತುಂಬಲೇ ಇಲ್ಲ. ಮೂಟೆ ಮೂಟೆ ನಾಣ್ಯಗಳನ್ನು ತಂದು ಅದರೊಳಗೆ ಸುರಿದರು. ಎಷ್ಟು ಹಾಕಿದರೂ ಪಾತ್ರೆ ಖಾಲಿಯಾಗಿಯೇ ಇತ್ತು. ಇಷ್ಟು ಚಿಕ್ಕ ಪಾತ್ರೆ ಅದು ಹೇಗೆ ಇಷ್ಟೊಂದು ರಾಶಿಗಟ್ಟಲೆ ನಾಣ್ಯಗಳನ್ನು ನುಂಗಿ ಹಾಕುತ್ತಿದೆ ಎಂದು ಎಲ್ಲರಿಗೂ ಆಶ್ಚರ್ಯವಾಯಿತು. ತನ್ನ ಕಣ್ಣ ಮುಂದೆ ನಡೆಯುತ್ತಿರುವುದನ್ನು ಕಣ್ಣಾರೆ ನೋಡಿಯೂ ರಾಜನಿಂದ ಅದನ್ನು ನಂಬಲು ಸಾಧ್ಯವೇ ಆಗಲಿಲ್ಲ. ಎಲ್ಲವನ್ನೂ ಸುಮ್ಮನೆ ನೋಡುತ್ತಾ ನಿಂತುಕೊಂಡಿದ್ದ.

ಅರಮನೆಯ ಬೊಕ್ಕಸವೆಲ್ಲ ಖಾಲಿಯಾಯಿತು. ಅರಮನೆಯಲ್ಲಿದ್ದ ಚಿನ್ನ ಬೆಳ್ಳಿ ವಜ್ರ ವೈಢೂರ್ಯಗಳು, ಆಭರಣಗಳು ಎಲ್ಲವನ್ನೂ ತಂದು ಅದರಲ್ಲಿ ಸುರಿಯಲಾಯಿತು. ದಾನ ನೀಡಲು ಇನ್ನು ಇಲ್ಲಿ ಏನೂ ಇಲ್ಲ ಎಂಬ ಸ್ಥಿತಿ ನಿರ್ಮಾಣವಾಯಿತು. ಆಗಲೂ ಆ ಭಿಕ್ಷಾ ಪಾತ್ರೆ ತುಂಬಲೇ ಇಲ್ಲ.

ಈ ಸನ್ಯಾಸಿ ಸಾಮಾನ್ಯ ವ್ಯಕ್ತಿ ಅಲ್ಲ ಎಂಬುದು ಅರಸನಿಗೆ ಆಗ ಅರ್ಥವಾಯಿತು. ಆತನ ಪಾದಗಳಿಗೆ ಬಿದ್ದು, 'ನನ್ನ ಸೋಲನ್ನು





ಒಪ್ಪಿಕೊಳ್ಳುತ್ತೇನೆ. ಯಾರ ಆಸೆಯನ್ನೂ ನನ್ನಿಂದ ಪೂರ್ತಿ ಮಾಡಲು ಸಾಧ್ಯವಿಲ್ಲ ಎಂದು ನನಗೆ ಅರ್ಥವಾಗಿದೆ' ಎಂದ. ಸನ್ಯಾಸಿ ನಕ್ಕ. 'ಈ ಭಿಕ್ಷಾ ಪಾತ್ರೆ ಏಕೆ ತುಂಬಲಿಲ್ಲ?' ಎಂದು ತನ್ನ ಸಂದೇಹವನ್ನು ಕೇಳಿದ ಅರಸ. 'ತೃಪ್ತಿಯೇ ಇಲ್ಲದೆ ಮರಣ ಹೊಂದಿದ ಒಬ್ಬ ವ್ಯಕ್ತಿಯ "ಮನಸ್ಸಿ"ನಿಂದ ತಯಾರಿಸಲಾದ ಪಾತ್ರೆ ಇದು. ಆದುದರಿಂದಲೇ ಇದು ಹೀಗಿದೆ. ಈ ಜಗತ್ತಿನ ಎಲ್ಲಾ ಸಂಪತ್ತನ್ನೂ ಇದರಲ್ಲಿ ತಂದು ಸುರಿದರೂ ಇದು ತುಂಬುವುದಿಲ್ಲ. ನೀನು ಹೆಚ್ಚು ಚಿಂತಿಸಬೇಡ... ನೀನು ನಿನ್ನ ಸೋಲನ್ನು ಒಪ್ಪಿಕೊಂಡಿದ್ದೀಯಾ. ಆದುದರಿಂದ ನಿನ್ನ ಬೊಕ್ಕಸದ ಎಲ್ಲವೂ ಮತ್ತೆ ನಿನಗೆ ಹಿಂದಿರುಗಿ ಬರುತ್ತವೆ' ಎಂದು ಸಮಾಧಾನ ಹೇಳಿದ ಸನ್ಯಾಸಿ.

ಕೆಲಸ, ಉದ್ಯಮ, ವ್ಯಾಪಾರ, ಮನರಂಜನೆ, ಬಾಂಧವ್ಯಗಳು, ಪರಿಸ್ಥಿತಿ ಹೀಗೆ ಯಾವುದೇ ಆಗಿದ್ದರೂ, ಅದರಲ್ಲಿ ಮೊದಲಿಗೆ ನಾವು ಪಡೆಯಲು ಆಸೆ ಪಡಬೇಕಾದುದು ಸಂತೃಪ್ತಿಯನ್ನೇ.

ನೀವು ಒಂದು ಕೆಲಸ ಮಾಡುತ್ತಿದ್ದೀರಿ ಎಂದಾದರೆ, ಇಂದು ಯಾವ ಕೆಲಸ ಮಾಡಿದರೆ ಪೂರ್ತಿಯಾದ ಮಾನಸಿಕ ಸಂತೃಪ್ತಿ ದೊರಕುತ್ತದೆ ಎಂದು ಯೋಚಿಸಿ, ನಿಮಗೆ ತೃಪ್ತಿಯಾಗುವಂತೆ ಆ ಕೆಲಸವನ್ನು ಮಾಡಿರಿ. ನೀವು ಒಂದು ಉದ್ಯಮವನ್ನು ಮಾಡುತ್ತೀರಿ ಎಂದಾದರೆ, ಅದರಲ್ಲಿ ನೀವು ಉತ್ಪಾದಿಸುವುದು ಯಾವುದೇ ಆಗಿದ್ದರೂ ಅದನ್ನು ಅತ್ಯುತ್ತಮವಾದುದನ್ನಾಗಿ ತಯಾರಿಸಿ. ನೀವು ಯಾವುದಾದರೂ ವ್ಯಾಪಾರವನ್ನು ಮಾಡುತ್ತಿದ್ದೀರಿ ಎಂದಾದರೆ, ನಿಮ್ಮ ಗ್ರಾಹಕರಿಗೆ ಪೂರ್ಣ ತೃಪ್ತಿಯಾಗುವ ಹಾಗೆ ಅದನ್ನು ಮಾಡಿರಿ. ಇದರಿಂದ ನೀವೂ ತೃಪ್ತಿ ಹೊಂದಿರಿ. ಮನರಂಜನೆಯಲ್ಲಿ ನೀವು ಮುಳುಗಿದ್ದರೂ ಸುಮ್ಮನೆ ಮೇಲ್ನೋಟಕ್ಕೆ ಅದರಲ್ಲಿ ತೊಡಗದಿರಿ. ಹಾಗೆಂದು ಸಂಪೂರ್ಣವಾಗಿ ಅದೊಂದರಲ್ಲೇ ಮುಳುಗಿ ಹೋಗುವುದೂ ಬೇಡ. ಬಂಧುಗಳನ್ನು ನಿಭಾಯಿಸುವುದರಲ್ಲೂ ಪೂರ್ಣ ಮನಸ್ಸಿನೊಂದಿಗೆ ಅದರಲ್ಲಿ ತೊಡಗಿಸಿಕೊಳ್ಳಿ. ಯಾರನ್ನೂ ಅಲಕ್ಷಿಸಬೇಡಿ.

ಹೀಗೆ ಎಲ್ಲವನ್ನೂ ತೃಪ್ತಿಯಾಗಿ ಮಾಡಲು ಆಸೆ ಪಟ್ಟರೆ, ನಿಮ್ಮ ಮನಸ್ಸಿನಲ್ಲಿ ಪ್ರೀತಿ ಉಕ್ಕಿ ಹರಿಯುತ್ತದೆ. ಮುಖದಲ್ಲಿ ಅರಳಿರುವ ನಗೆಯೊಂದಿಗೆ ರಾತ್ರಿ ನೆಮ್ಮದಿಯಾಗಿ ನಿದ್ರೆ ಮಾಡಲೂ ಸಾಧ್ಯವಾಗುತ್ತದೆ.

ಹಲವರಿಗೆ ಜೀವನ ಎನ್ನುವುದು ಒಂದು ರಿಲೇ ಓಟದ ಪಂದ್ಯದ ಹಾಗೇ ಇರುತ್ತದೆ. ಶಿಕ್ಷಣದ ಹಿಂದೆ, ಕೆಲಸದ ಹಿಂದೆ, ಹಣದ ಹಿಂದೆ, ಯಶಸ್ಸಿನ ಹಿಂದೆ, ಕೀರ್ತಿಯ ಹಿಂದೆ... ಹೀಗೆ ಓಡುತ್ತಲೇ ಇರುವ ರಿಲೇ ಪಂದ್ಯದಂತಹ ಪ್ರಯಾಣ ಅದು. ಇದರಲ್ಲಿ ಯಾವುದೋ ಒಂದು ಹಂತದಲ್ಲಿ ತೃಪ್ತಿಯನ್ನು ಪಡೆಯದೇ ಹೋದರೆ, ನಿರಂತರವಾಗಿ ಜೀವನವಿಡೀ ಓಡುತ್ತಲೇ ಇರಬೇಕಾಗಿರುತ್ತದೆ.

ಹೀಗೆ ಓಡುವುದು ಮಾತ್ರವೇ ಮುಖ್ಯ ಎಂದು ಭಾವಿಸುವ ಕೆಲವರು, ಬದುಕಿನ ಉಳಿದೆಲ್ಲಾ ಅನುಭವಗಳನ್ನೂ ಕಳೆದುಕೊಳ್ಳುತ್ತಾರೆ. ಮಕ್ಕಳ ಪ್ರೀತಿ, ಬಂಧುಗಳ ಅಕ್ಕರೆ, ಗೆಳೆಯರ ಆತ್ಮೀಯತೆ ಹೀಗೆ ಯಾವುದೂ ಇಲ್ಲದೆ ಬದುಕುವುದು ಅಸಂಗತ ಅಲ್ಲವೇ? ಯಾವುದೋ ಒಂದು ಹಂತದಲ್ಲಿ ತೃಪ್ತಿಯನ್ನು ಪಡೆದುಕೊಂಡು ಎಲ್ಲರನ್ನೂ ಎಲ್ಲರನ್ನೂ, ಎಲ್ಲವುಗಳನ್ನೂ ಹಿಂದಿರುಗಿ ನೋಡಬೇಕು. ಇತರರು ನಮ್ಮನ್ನು ಹೇಗೆ ನಡೆಸಿಕೊಳ್ಳಬೇಕು ಎಂದು ನಾವು ಬಯಸುತ್ತೇವೆಯೋ, ಅದೇ ರೀತಿಯಾಗಿಯೇ ನಾವೂ ಇತರರನ್ನು ನಡೆಸಿಕೊಳ್ಳುವುದೇ ಸರಿಯಾದುದು.

ನಿಮ್ಮ ಯಾರಾದರೂ ಒಬ್ಬ ಗೆಳೆಯರು ಸಮಸ್ಯೆಯ ಸುಳಿಯೊಳಗೆ ಸಿಲುಕಿ ಸಂಕಟ ಪಡುವಾಗ ಅದಕ್ಕೆ ಪರಿಹಾರವನ್ನು ಹುಡುಕಲು ಮೊದಲು ಅವರು ಕರೆ ಮಾಡುವ ವ್ಯಕ್ತಿ ನೀವೇ ಆಗಿರಬೇಕು. ನಿಮ್ಮ ಬಂಧುಗಳೊಬ್ಬರು ಕಷ್ಟದಲ್ಲಿ ಸಿಕ್ಕಿ ಒದ್ದಾಡುವಾಗ ಅವರಿಗೆ ಸಹಾಯ ಮಾಡಲು ಓಡಿ ಹೋಗಿ ನಿಲ್ಲುವ ಮೊದಲ ವ್ಯಕ್ತಿ ನೀವಾಗಿರಬೇಕು. ನಿಮ್ಮ ಆತ್ಮೀಯರೊಬ್ಬರು ಅಪಾರ ಸಂಕಟದಲ್ಲಿ ಮುಳುಗಿರುವಾಗ ಅವರಿಗೆ ಸಮಾಧಾನ ಮಾಡುವ ತೋಳುಗಳು ಮೊದಲು ನಿಮ್ಮವಾಗಿರಬೇಕು. ಇಂತಹ ಕಾರ್ಯಗಳಲ್ಲಿ ದೊರಕುವ ತೃಪ್ತಿ, ನಿಮ್ಮ ಆಸೆಗಳನ್ನು ಕ್ರಮಪಡಿಸುತ್ತವೆ. ಒಳ್ಳೆಯ ಗೆಳೆಯರು, ಉತ್ತಮ ಬಂಧುಗಳು, ಅರ್ಥ ಮಾಡಿಕೊಳ್ಳುವ ಸಂಗಾತಿ, ಪ್ರೀತಿ ತೋರುವ ತಂದೆತಾಯಿಗಳು, ಸಮರ್ಥರಾದ ಸಿಬ್ಬಂದಿಗಳು, ಪ್ರಾಮಾಣಿಕವಾಗಿ ಉದ್ಯಮವನ್ನು ನಡೆಸುವವರು... ಹೀಗೆ ನಾವು ಆಸೆ ಪಡಬೇಕಾದ ಅರ್ಹತೆಗಳು ತುಂಬಾ ಇವೆ. ಇವುಗಳು ಎಲ್ಲವುಗಳಲ್ಲೂ ತೃಪ್ತಿ ದೊರಕುತ್ತದೆ ಎಂಬುದೇ ವಿಶೇಷ.

## ಆಸೆ ತರುವ ನೋವು!

ಆಸೆಯನ್ನು ಬಹುಪಾಲು ಸಂತೋಷದ ಜೊತೆಗೆ ಹೋಲಿಸಿಯೇ ಮಾತನಾಡುತ್ತೇವೆ. ಆಸೆಗಳಿಗೆ ಸಂಬಂಧಿಸಿದ ಕಲ್ಪನೆಗಳೇ ನಮಗೆ ಸಂತೋಷನ್ನು ನೀಡುತ್ತವೆ. ಆದರೆ, ಆಸೆ ತರುವ ನೋವು ಅಪಾರವಾಗಿರುತ್ತದೆ. ನಿರಾಶೆಗಳು ಯಾವಾಗಲೂ ಹೀಗೇ ಇರುತ್ತವೆ. ಉದಾಹರಣೆಗೆ ನಿಮ್ಮ ಮಗುವಿಗೆ ನೀವು ಐಸ್‌ಕ್ರೀಮ್ ಕೊಡಿಸುತ್ತೇನೆಂದು ಹೇಳುತ್ತೀರಿ ಎಂದಿಟ್ಟುಕೊಳ್ಳಿ. ಕೂಡಲೇ ಮಗುವಿನ ನಿರೀಕ್ಷೆ ಹೆಚ್ಚುತ್ತದೆ. ಆ ಐಸ್‌ಕ್ರೀಮ್ ರುಚಿಯನ್ನು ಅದು ಕಲ್ಪನೆ ಮಾಡಿಕೊಂಡು ಅದನ್ನು ತಿನ್ನಲು ಆಸೆ ಪಡುತ್ತದೆ. ಕೆಲವು ನಿಮಿಷಗಳಲ್ಲಿ ನೀವು ಮನಸ್ಸು ಬದಲಾಯಿಸಿಕೊಳ್ಳುತ್ತೀರಿ. 'ಈಗ ಐಸ್ ಕ್ರೀಮ್ ತಿಂದರೆ ನೆಗಡಿಯಾಗಬಹುದು. ಇನ್ನೊಂದು ದಿನ ತಿನ್ನೋಣ' ಎಂದು ಹೇಳುತ್ತೀರಿ. ಕೂಡಲೇ ಮಗು ಕೈಕಾಲುಗಳನ್ನು ಒದರಿಕೊಂಡು ಅಳಲು ಆರಂಭಿಸುತ್ತದೆ. ಆಸೆ ನಿರಾಶೆಯಾದುದರ ಪರಿಣಾಮ ಇದು.

ನೀವು ಐಸ್‌ಕ್ರೀಮ್ ಕೊಡಿಸುತ್ತೇನೆಂದು ಹೇಳುವ ಮೊದಲಿನವರೆಗೂ, ಮಗುವಿನ ಮನಸ್ಸಿನಲ್ಲಿ ಅದಕ್ಕೆ ಸಂಬಂಧಿಸಿದ ನಿರೀಕ್ಷೆಗಳೇನೂ ಇರಲಿಲ್ಲ. ಆದರೆ ಈಗ ನಿರಾಶೆ ಹೊಂದುವಾಗ, 'ನಾನು ಅದನ್ನು ಬೇಕೆಂದು ಕೇಳಿದೆನಾ? ನೀವೇ ಕೊಡಿಸುತ್ತೇನೆಂದು ಹೇಳಿ, ಈಗ ಸಾಧ್ಯವಿಲ್ಲ ಎನ್ನುತ್ತಿದ್ದೀರಿ. ನಿಜವಾಗಿಯೂ ನಾನು ಕಳೆದುಕೊಳ್ಳುವುದು ಏನೂ ಇಲ್ಲ' ಎನ್ನುವ ಭಾವ ಆ ಮಗುವಿನ ಮನಸ್ಸಿನಲ್ಲಿ ಮೂಡಿದರೆ, ಇಷ್ಟೊಂದು ನಿರಾಶೆ ಅದಕ್ಕೆ ಆಗುವುದಿಲ್ಲ. ಆಸೆಗಳನ್ನು ಹೀಗಯೇ ಸ್ಪಷ್ಟತೆಯೊಂದಿಗೆ ನಿಭಯಿಸಬೇಕು.

## ಆಸೆಗಳನ್ನು ಕೈಬಿಟ್ಟು ಬಿಡಬೇಡಿ!



ಬೆಳೆಯಲು ಆಗದವರೂ, ಬೆಳೆಯಲು ಇಷ್ಟವಿಲ್ಲದವರೂ ಕೆಲವು ತತ್ವಗಳನ್ನು ಹೇಳಿ ಆಸೆಗಳನ್ನು ಕೈಬಿಡಲು ನೋಡುತ್ತಾರೆ. 'ಕೋಟಿಗಟ್ಟಲೆ ಸಂಪಾದಿಸಿದ ಮಾತ್ರಕ್ಕೆ ತಟ್ಟೆಯಲ್ಲಿ ಚಿನ್ನ ಬೆಳ್ಳಿಯನ್ನು ಇಟ್ಟುಕೊಂಡು ತಿನ್ನಲು ಸಾಧ್ಯವೇ? ಅನ್ನ ತಾನೇ ತಿನ್ನುವುದು! ಅದಕ್ಕಾಗಿ ಏಕೆ ಹೀಗೆ ಕಷ್ಟಪಟ್ಟು ಸಂಪಾದಿಸಬೇಕು?' ಎಂದು ಕೆಲವರು ತತ್ವವನ್ನು ಮಾತನಾಡುವುದುಂಟು. ಇನ್ನೂ ಕೆಲವರು, 'ತುಂಬಾ ಆಸ್ತಿ, ಹಣ ಸಂಪಾದಿಸಿದರೆ ಅವುಗಳಿಂದ ಸಮಸ್ಯೆ ತಪ್ಪುವುದಿಲ್ಲ. ಇನ್‌ಕಮ್ ಟ್ಯಾಕ್ಸ್‌ನವರ ಕಾಟ ಒಂದು ಕಡೆಯಾದರೆ, ಯಾವುದರಲ್ಲಿ ಹೇಗೆ ನಷ್ಟ ಎದುರಾಗುತ್ತದೋ ಎಂಬ ಚಿಂತೆ ಇನ್ನೊಂದೆಡೆ. ಮಲಗಿದರೆ ಅವರಿಗೆ ನಿದ್ರೆ ಬರುವುದಿಲ್ಲ.... ಆದರೆ ನಾನು ನೆಮ್ಮದಿಯಾಗಿದ್ದೇನೆ. ಇದು ತಾನೇ ಬೇಕಾಗಿರುವುದು' ಎಂದು ಬಡತನದಲ್ಲಿ ಸಂಕಟ ಪಡುವುದನ್ನು ನ್ಯಾಯ ಪಡಿಸಿ ಮಾತನಾಡುತ್ತಾರೆ.

'ಮಾನಸಿಕ ತೃಪ್ತಿಯನ್ನು ಹೊಂದುವುದಕ್ಕಿಂತಲೂ ದೊಡ್ಡ ಸಂಪತ್ತು ಬೇರಾವುದೂ ಇಲ್ಲ' ಎಂದೂ ಇವರು ಹೇಳುತ್ತಾರೆ. ಆದರೆ, ಬೆಳೆಯಲು ಹಲವು ಅವಕಾಶಗಳು ಇದ್ದರೂ, ಎಲ್ಲವನ್ನೂ ಕಡೆಗಣಿಸಿ ಹೀಗೆ ಇರುವುದು ಸರಿಯಲ್ಲ. 'ನನ್ನಿಂದ ಬೆಳೆಯಲು ಸಾಧ್ಯ. ನಾನು ಬೆಳೆದರೆ ನನ್ನಿಂದ ಹಲವರು ಬೆಳೆಯುತ್ತಾರೆ. ಈ ಸಮಾಜಕ್ಕೆ ನಾನು ನೀಡುವುದು ಇದೇ' ಎಂದು ಆಸೆಪಡುವವರು ಯಾರೇ ಆಗಿರಲಿ ಅವರು ಅಭಿವೃದ್ಧಿ ಹೊಂದದೇ ಇರಲು ಸಾಧ್ಯವೇ ಇಲ್ಲ.

## ಈ ಆಸೆಗಳು ಬೇಡ!

ಆಸೆಪಟ್ಟು ಮಾಡುವ ಕೆಲವು ಕೆಲಸಗಳೇ ಹಲವರನ್ನು ಸಂಕಟಕ್ಕೆ ದೂಡುತ್ತವೆ. ನಮ್ಮ ಬೆಳವಣಿಗೆಗೂ, ಇತರರೊಂದಿಗೆ ಆಪ್ತವಾಗಿ ಜೀವಿಸುವುದಕ್ಕೂ ತಡೆಯಾಗಿರುವ ಈ ಆಸೆಗಳನ್ನು ಬಿಟ್ಟುಬಿಡಿ.

- ಮುಖ್ಯವಾದ ಕೆಲಸಗಳು ಇರುವಾಗ, ಅವುಗಳನ್ನು ಕೈಬಿಟ್ಟು ಮನರಂಜನೆಗಳಲ್ಲಿ ಆಸಕ್ತಿ ತೋರಿಸುವುದು.
- ನಮಗೆ ಸತ್ವವನ್ನೂ, ಆರೋಗ್ಯವನ್ನೂ ನೀಡದ, ಕೇವಲ ರುಚಿ ಮಾತ್ರ ಇರುವ ಅಪಾಯಕಾರಿ ಆಹಾರ ಪದಾರ್ಥಗಳನ್ನು ಸೇವಿಸುವುದು.
- ಇತರರ ಬಗ್ಗೆ ಗಾಸಿಪ್ ಮಾತನಾಡುವುದು. ಕರುಣೆಯೇ ಇಲ್ಲದ ಕಠಿಣ ಪದಗಳಿಂದ ಅವರನ್ನು ವಿಮರ್ಶೆ ಮಾಡುವುದು.
- ಕೈಯಲ್ಲಿ ಹಣ ಇಲ್ಲದೇ ಹೋದರೂ, ನಮ್ಮ ಅರ್ಹತೆಗೆ ಮೀರಿದ ದುಬಾರಿ ವಸ್ತುಗಳನ್ನು ಸಾಲ ಮಾಡಿಯಾದರೂ ಕೊಳ್ಳುವುದು.
- ಸುಳ್ಳು ಹೇಳುವ ಮತ್ತು ನಮಗೆ ಸಂತೋಷವಾಗಬಹುದಾದ ಮಾತುಗಳನ್ನು ಹೇಳಿ ನಮ್ಮನ್ನು ತಮ್ಮತ್ತ ಸೆಳೆದುಕೊಳ್ಳಲು ನೋಡುವ ಆಪತ್ಕಾರಿ ಮನುಷ್ಯರನ್ನು ನಂಬುವುದು.
- ಕಾನೂನನ್ನು ಗೌರವಿಸಿ ನಡೆದುಕೊಳ್ಳದೆ ಇರುವುದು. ಅನೀತಿಯ ವಿಷಯಗಳಿಗೆ ಬೆಂಬಲ ನೀಡುವುದು.
- ನಿಜವಲ್ಲದ ಸಂಗತಿಗಳನ್ನು ನಂಬುವುದು, ಇತರರ ಬಳಿ ಅದನ್ನು ಹರಡುವುದು.

ಈ ಏಳು ಆಸೆಗಳೂ ಒಬ್ಬ ವ್ಯಕ್ತಿಗೆ ತುಂಬಾ ಸಂತೋಷವನ್ನು ನೀಡಬಹುದು. ಆದರೆ ಅವರ ಹೆಸರನ್ನು ಇವು ಕೆಡಿಸಿ ಬಿಡುತ್ತವೆ.

## ಹೆಚ್ಚು ಆಸೆ ಪಡಿ!

'ನೀವು ಜೀವನದಲ್ಲಿ ಏನಾಗಲು ಬಯಸುವಿರಿ? ನಿಮ್ಮ ಮನಸ್ಸು ಏನನ್ನು ಇಷ್ಟ ಪಡುತ್ತದೆ? ನಿಮ್ಮ ಮನಸ್ಸು ಹೇಳುವುದನ್ನು ಕೇಳಿ ಅದರಂತೆ ನಡೆದುಕೊಳ್ಳಿ' ಎನ್ನುತ್ತಾರೆ ಆಪಲ್ ಸಂಸ್ಥೆಯ ಸ್ಥಾಪಕ ಸ್ಟೀವ್ ಜಾಬ್ಸ್. 'ಹಸಿವಿನಿಂದಿರಿ, ತಿಳಿದುಕೊಳ್ಳುವ ಆಸಕ್ತಿಯನ್ನು ಕಳೆದುಕೊಳ್ಳದಿರಿ!' ಎಂಬ ಈ ಎರಡು ಮಂತ್ರಗಳನ್ನು ಅವರು ಹೇಳುತ್ತಾರೆ. ಹೀಗಿದ್ದಾಗ ಹೊಸ ವಿಷಯಗಳನ್ನು ಕಲಿತುಕೊಳ್ಳುವ ಆಸೆ ಮೂಡುತ್ತದೆ. ಹಾಗೆ ಕಲಿತುಕೊಳ್ಳುವಾಗ ದೊಡ್ಡ ದೊಡ್ಡ ಕನಸುಗಳೂ ಮೂಡುತ್ತವೆ. ದೊಡ್ಡದಾಗಿ ಏನನ್ನಾದರೂ ಮಾಡುವ ಆಸೆ ಹುಟ್ಟುತ್ತದೆ. 'ನಮ್ಮ ಜೀವವನ್ನು ಕೊಟ್ಟಾದರೂ ಸರಿಯೇ, ಇದನ್ನು ಸಾಧಿಸಬೇಕು ಎನ್ನಿಸುತ್ತದೆ. ಆಸೆಗಳನ್ನು ಕಾರ್ಯರೂಪಕ್ಕಿಳಿಸಿ' ಎನ್ನುತ್ತಾರೆ ಸ್ಟೀವ್ ಜಾಬ್ಸ್.



## ಸಂತೋಷ ನೀಡುವ ಆಸೆಗಳು!

**ಪು**ರಾತನ ಈಜಿಪ್ಟ್ ದೇಶದ ಜನರಲ್ಲಿ ಒಂದು ನಂಬಿಕೆ ಇತ್ತು. ಮರಣವನ್ನು ಸಮೀಪಿಸಿದವರು ಪರಲೋಕಕ್ಕೆ ಹೋಗುವಾಗ ಸ್ವರ್ಗದ ಬಾಗಿಲ ಮುಂದೆ ಅವರಿಗೆ ಎರಡು ಪ್ರಶ್ನೆಗಳನ್ನು ಕೇಳಲಾಗುತ್ತದೆ. ಆ ಪ್ರಶ್ನೆಗಳಿಗೆ ಅವರು ಹೇಳುವ ಉತ್ತರವೇ ಅವರು ಸ್ವರ್ಗವನ್ನು ಪ್ರವೇಶಿಸಲು ಅರ್ಹರೇ ಎನ್ನುವುದನ್ನು ನಿರ್ಧಾರಿಸುತ್ತದೆ.

'ನೀನು ನಿನ್ನ ಜೀವನದಲ್ಲಿ ಸಂತೋಷವನ್ನು ಕಂಡು ಕೊಂಡೆಯಾ?', 'ನಿನ್ನ ಜೀವನ ಇತರರಿಗೆ ಸಂತೋಷವನ್ನು ನೀಡಿದೆಯಾ?' ಎನ್ನುವುದೇ ಆ ಎರಡು ಪ್ರಶ್ನೆಗಳು. ನಾವು ಹೇಗೆ ಆಸೆ ಪಡಬೇಕು ಎನ್ನುವುದಕ್ಕೆ ಇದು ದಾರಿ ತೋರಿಸುತ್ತದೆ. ನಮಗೂ ಇತರರಿಗೂ ಸಂತೋಷ ನೀಡುವ ವಿಷಯಗಳು ಮಾತ್ರವೇ ನಮ್ಮ ಆಸೆಗಳಾಗಿರಬೇಕು.

## ಹೇಳದೇ ಹೋದ ಆಸೆಗಳು!

**ನಾ**ವೆಲ್ಲರೂ ಹಲವು ಆಸೆಗಳೊಂದಿಗೇ ಜೀವಿಸುತ್ತೇವೆ. ಕೆಲವೊಮ್ಮೆ ಆ ಆಸೆಗಳಲ್ಲಿ ಒಂದು ಪೂರ್ಣಗೊಂಡರೆ, 'ಇದಕ್ಕಾಗಿಯೇ ನಾನು ಆಸೆ ಪಟ್ಟದ್ದು. ಇದು ನನಗೆ ಸಿಕ್ಕಿತು' ಎಂದು ಆ ಆಸೆಯನ್ನು ಪ್ರಕಟವಾಗಿಯೂ ಹೇಳಿಕೊಳ್ಳುತ್ತೇವೆ. ಆದರೆ, 'ಇದೆಲ್ಲವನ್ನೂ ಹೊರಗೆ ಹೇಳಿದರೆ ತಮಾಷೆ ಮಾಡಬಹುದು' ಎಂದು ಸಂಕೋಚ ಪಟ್ಟುಕೊಂಡು ಹಲವು ಆಸೆಗಳನ್ನು ಅವರು ಹೇಳುವುದಿಲ್ಲ. ಹತ್ತಿರದ ಗೆಳೆಯರು, ಬಂಧುಗಳ ಬಳಿ ಹೇಳಬೇಕೆಂದು ಅಂದುಕೊಂಡರೂ ಹೇಳದೇ ಹೋದ ಆಸೆಗಳು ಪ್ರತಿಯೊಬ್ಬರ ಮನಸ್ಸಿನಲ್ಲೂ ಹುದುಗಿರುತ್ತವೆ.

ಮಗುವಾಗಿದ್ದಾಗ ನಾವು ಉಯ್ಯಾಲೆಯಲ್ಲಿ ಆಟವಾಡಿರುತ್ತೇವೆ. ಜಾರುಬಂಡಿಯಲ್ಲಿ ಜಾರುವ ಆಟ ಆಡಿರುತ್ತೇವೆ. ವಯಸ್ಸಾದ ಮೇಲೂ ಯಾವುದಾದರೂ ಉದ್ಯಾನವನದಲ್ಲಿ ಇವುಗಳನ್ನು ನೋಡಿದಾಗ ಅವುಗಳಲ್ಲಿ ಆಟವಾಡುವ ಆಸೆ ಮನಸ್ಸಿನಲ್ಲಿ ಮೂಡಬಹುದು. 'ಆದರೆ ಯಾರಾದರೂ ಅಪಹಾಸ್ಯ ಮಾಡಬಹುದು' ಎಂದು ಭಾವಿಸಿ ಅಲ್ಲಿಂದ ಸುಮ್ಮನೆ ಬಂದು ಬಿಡುತ್ತೇವೆ. ಇತರರಿಗೆ ಯಾವುದೇ ಕಷ್ಟವನ್ನೂ ನೀಡದೆ ನಮಗೆ ಸಂತೋಷ ದೊರಕುತ್ತದೆ ಎಂದಾದರೆ, ಆ ಆಸೆಗಳನ್ನು ಪೂರ್ತಿ ಮಾಡಿಕೊಳ್ಳುವುದರಲ್ಲಿ ತಪ್ಪೇನಿಲ್ಲ! ಇತರರ ಬಗೆಗೆ ಯೋಚಿಸುವುದೇ ಬೇಡ. ನಿಮ್ಮ ಚಿಕ್ಕಚಿಕ್ಕ ಆಸೆಗಳನ್ನು ಪೂರ್ತಿ ಮಾಡಿಕೊಳ್ಳಿ.



ಒಂದು ಮಗುವನ್ನು ಗೊಂಬೆಯ ಅಂಗಡಿಗೆ ಕರೆದು–ಕೊಂಡು ಹೋದರೆ ಅಲ್ಲಿರುವ ಎಲ್ಲಾ ಗೊಂಬೆಗಳನ್ನೂ ಅದು ಕೇಳುತ್ತದೆ. ತನಗೆ ಎಷ್ಟು ಗೊಂಬೆಗಳು ಬೇಕು ಎನ್ನುವ ಲೆಕ್ಕ ಅದಕ್ಕೆ ತಿಳಿಯದು. ಅದರ ಆಸೆಗೆ ಎಲ್ಲೆಗಳೇ ಇರುವುದಿಲ್ಲ.

# ಆಸೆಗಳು ಬೆಳೆಯುತ್ತವೆ!



ಬೆಳೆದ ನಂತರ ಈ ಎಲ್ಲೆಯನ್ನು ಎಲ್ಲರೂ ಅರ್ಥ ಮಾಡಿಕೊಳ್ಳುತ್ತಾರೆ. ತಿನ್ನುವುದನ್ನು ತುಂಬಾ ಇಷ್ಟಪಡುವ ಒಬ್ಬ ವ್ಯಕ್ತಿ, ಕಾರ್ಟ್‌ನೊಳಗೆ ಹೋದ ಕೂಡಲೇ ಅಲ್ಲಿ ಕಾಣಿಸುವ ವಿವಿಧ ಪದಾರ್ಥಗಳನ್ನು ನೋಡಿ ಅವುಗಳಲ್ಲಿ ಹಲವನ್ನು ಆರ್ಡರ್ ಮಾಡಲು ಆಸೆ ಪಡುತ್ತಾರೆ. ಆದರೆ ತಮ್ಮಿಂದ ಎಷ್ಟು ತಿನ್ನಲು ಸಾಧ್ಯ ಎಂಬ ಅಳತೆ ಅವರಿಗೆ ತಿಳಿದಿರುವುದರಿಂದ ಅದಕ್ಕೆ ತಕ್ಕಂತೆ ಅಗತ್ಯವಾದಷ್ಟು ಮಾತ್ರವೇ ಆರ್ಡರ್ ಮಾಡಿ ಕೊಂಡು ತಿನ್ನುತ್ತಾರೆ. ಹಾಗೆಯೇ ಆಭರಣದ ಅಂಗಡಿಯೊಳಕ್ಕೆ ಹೋಗುವ ಒಬ್ಬ ಮಹಿಳೆ, ಅಲ್ಲಿರುವ ಬಹಳಷ್ಟು ಆಭರಣಗಳನ್ನು ತುಂಬಾ ಆಸೆಯಿಂದ ನೋಡುತ್ತಾರೆ. ಹಲವು ಆಭರಣಗಳನ್ನು ಕೊಳ್ಳಲು ನೋಡುತ್ತಾರೆ. ಅವುಗಳ ಬೆಲೆ ಅವರ ಆಸೆಯನ್ನು ತಡೆಯುತ್ತದೆ.

ಒಲೆ ಉರಿಯುತ್ತಿರುವಾಗ ಅದರೊಳಗೆ ಮರದ ತುಂಡುಗಳನ್ನು ಹಾಕುತ್ತಲೇ ಇದ್ದರೆ ಬೆಂಕಿಯ ಉರಿಯೂ ಹೆಚ್ಚುತ್ತದೆ. ಹಾಗೆಯೇ ಪ್ರತಿಯೊಬ್ಬರ ಬದುಕಿನಲ್ಲೂ ಹೊಸ ಹೊಸ ಆಸೆಗಳು ನೂರಾರು ಸಂಖ್ಯೆಯಲ್ಲಿ ಹುಟ್ಟುತ್ತಲೇ ಇರುತ್ತವೆ. ಪ್ರತಿದಿನವೂ ಮನಸ್ಸಿನಲ್ಲಿ ಮೂಡುವ ಆಸೆಗಳನ್ನು ಒಂದು ನೋಟ್ ಬುಕ್‌ನಲ್ಲಿ ಬರೆದಿಡಲು ಆರಂಬಿಸಿದರೆ ಜಗತ್ತಿನಲ್ಲೇ ಅತಿ ದೊಡ್ಡ ಪುಸ್ತಕ ಅದೇ ಆಗಿರುತ್ತದೆ.

ಹೀಗೆ ಬರೆದಿಟ್ಟಿದ್ದನ್ನು ಕೆಲವು ತಿಂಗಳುಗಳು ಕಳೆದ ನಂತರ ತೆರೆದು ನೋಡಿದರೆ ನಮಗೆ ಒಂದು ವಿಷಯ ಅರ್ಥವಾಗುತ್ತದೆ, ನಮ್ಮ ಹಲವಾರು ಆಸೆಗಳು ಅಸಂಗತವಾದುವು ಎಂದು. ನಿಜವಾಗಿಯೂ ನಾವು ಸಂತೋಷದಿಂದ ಜೀವಿಸಲು ಇಷ್ಟೊಂದು ವಿಷಯಗಳ ಅಗತ್ಯ ಇಲ್ಲವೇ ಇಲ್ಲ. ಒಂದು ಮರದಲ್ಲಿ ಪ್ರತಿ ದಿನವೂ ಹೊಚ್ಚಹೊಸದಾಗಿ ಹೂಗಳು ಬಿಡುವಂತೆಯೇ, ಆಸೆಗಳೂ ಹೊಸಹೊಸದಾಗಿ ಹುಟ್ಟುತ್ತಲೇ ಇರುತ್ತವೆ. ಅವು ಎಂದಿಗೂ ಅಂತ್ಯವನ್ನು ಕಾಣುವುದೇ ಇಲ್ಲ.

ಜಗತ್ತಿನಲ್ಲಿ ಅತಿ ವೇಗವಾಗಿ ಪ್ರಯಾಣ ಮಾಡುವ ವಾಹನ ರಾಕೆಟ್. ಆ ರಾಕೆಟ್‌ಗಿಂತಲೂ ವೇಗವಾಗಿ ಚಿಂತಿಸುವುದು ಮನುಷ್ಯನ ಮನಸ್ಸು. ಆ ಚಿಂತನೆಗಳ ಒಂದು ಭಾಗವಾಗಿಯೇ ಆಸೆಗಳೂ ಇರುತ್ತವೆ. ಒಂದು ದಿನದಲ್ಲಿ ಒಬ್ಬ ವ್ಯಕ್ತಿಯ ಮನಸ್ಸಿನಲ್ಲಿ ಮೂಡುವ ಆಸೆಗಳು ಎಲ್ಲವೂ ಪೂರ್ಣಗೊಳ್ಳುತ್ತವೆ ಎಂದಿಟ್ಟುಕೊಳ್ಳೋಣ. ಅದರ ಪರಿಣಾಮ ವಿಪರೀತವಾಗಿರುತ್ತದೆ.

ಬೆಳಿಗ್ಗೆ ತಡವಾಗಿ ಏಳುವ ಒಬ್ಬ ವ್ಯಕ್ತಿಗೆ, ಅಲಾರಾಂ ಹೊಡೆದರೂ ಕೂಡ ಕೇಳಿಸುವುದಿಲ್ಲ. ಆಫೀಸಿಗೆ ಹೊರಡಲು ಇದರಿಂದ ತಡವಾಗುತ್ತದೆ. ಹಾಗಾಗಿ ಏಳುವಾಗಲೇ ಅವರಿಗೆ ಟೆನ್ಷನ್ ಅಂಟಿಕೊಳ್ಳುತ್ತದೆ. 'ಈ ಅಲಾರಾಂ ಕೇವಲ ಶಬ್ದ

ಮಾಡುವ ಬದಲಿಗೆ ನನ್ನ ತಲೆಯ ಮೇಲೆ ಕುಟ್ಟಿ ನನ್ನನ್ನು ಎಬ್ಬಿಸಿದ್ದರೆ ಚೆನ್ನಾಗಿರುತ್ತಿತ್ತು' ಎಂದು ಅವರಿಗೆ ಅನ್ನಿಸಬಹುದು. ಅಲಾರಾಂ ಹೊಡೆದ ಮೇಲೂ ನಿದ್ರೆಯಿಂದ ಏಳದೇ ಇರುವವರ ತಲೆಗೆ ಅಲಾರಂ ನಿಜವಾಗಿಯೂ ಕುಟ್ಟುವುದಾಗಿದ್ದರೆ ಎಂತಹ ವಿಪರೀತಗಳು ನಡೆ–ಯುತ್ತಿತ್ತು ಎಂದು ಯೋಚಿಸಿ!

ಲೇಟಾಗಿ ಹೊರಟು ಬಸ್‌ನಲ್ಲಿ ಟ್ರಾಫಿಕ್‌ನಲ್ಲಿ ಸಿಲುಕಿಕೊಳ್ಳುವ ಅವರು, 'ಈ ಮೋಟಾರ್‌ಬೈಕ್‌ಗೆ ಹಾರುವ ಶಕ್ತಿ ಇದ್ದಿದ್ದರೆ ಬೇಗ ಆಫೀಸ್‌ಗೆ ಹೋಗಿ ತಲುಪಬಹುದಿತ್ತು' ಎಂದು ಆಸೆ ಪಡಬಹುದು. ಆದರೆ ನಿಜವಾಗಿಯೂ ಅಂತಹ ಒಂದು ಸ್ಥಿತಿಯನ್ನು ಊಹಿಸಿ ನೋಡಿ.... ರಸ್ತೆಯಲ್ಲಿ ಅಡ್ಡಾದಿಡ್ಡಿಯಾಗಿ ವಾಹನಗಳು ಚಲಿಸುವ ಹಾಗೆಯೇ, ಬಾನಿನಲ್ಲೂ ನುಗ್ಗಿ ಹೋದರೆ ಏನಾಗಬಹುದು ಎಂದು ಯೋಚಿಸಿ. ನೆಲದಲ್ಲಿ ರಸ್ತೆ ಒಂದು ನಿರ್ದಿಷ್ಟ ಅಳತೆಯಲ್ಲಿರುತ್ತದೆ. ಸಾಗುವ ಹಾದಿಯನ್ನು ಕ್ರಮ ಪಡಿಸಲು ಅಲ್ಲಲ್ಲಿ ಸಿಗ್ನಲ್‌ಗಳೂ ಇರುತ್ತವೆ. ಟ್ರಾಫಿಕ್ ಪೋಲೀಸರ ನಿಯಂತ್ರಣ ಇರುತ್ತದೆ. ಆದರೆ ಬಾನಿನಲ್ಲಿ ಇವು ಯಾವುವೂ ಇರುವುದಿಲ್ಲವಾದುದರಿಂದ ಚಾಲಕರು ತಮ್ಮಿಷ್ಟಕ್ಕೆ ತಕ್ಕಂತೆ ಒಬ್ಬೊಬ್ಬರು ಒಂದೊಂದು ದಿಕ್ಕಿನಲ್ಲಿ ಹಾರುತ್ತಿದ್ದರೆ ಅಲ್ಲಿ ನಡೆಯುವ ಅಪಘಾತಗಳಿಗೆ ಲೆಕ್ಕವೇ ಇರುವುದಿಲ್ಲ.

ದಿಢೀರನೆ ಮಳೆ ಸುರಿಯುವಾಗ, ಮನೆಯೊಳಗಿನ ಕಿಟಕಿಯ ಬಳಿ ನಿಂತೇ ಅದನ್ನು ನೋಡಿ ಆನಂದಿಸುವ ಒಬ್ಬ ವ್ಯಕ್ತಿ, ಮಳೆ ಹೀಗೇ ಇನ್ನೂ ತುಂಬಾ ಹೊತ್ತು ಸುರಿದರೆ ಚೆನ್ನಾಗಿರುತ್ತದೆ ಎಂದು ಆಸೆ ಪಡುತ್ತಾನೆ. ಆದರೆ ಮಳೆ ಸುರಿಯಲು ಆರಂಭಿಸಿದ ಕೂಡಲೇ ತನ್ನ ಬೈಕ್ ಅನ್ನು ಪಕ್ಕಕ್ಕೆ ಹಾಕಿ ಯಾವುದೋ ಒಂದು ಬಸ್ ಸ್ಟಾಪ್‌ನಲ್ಲಿ ಆಸರೆ ಪಡೆಯುವ ಒಬ್ಬ ವ್ಯಕ್ತಿ, 'ಈ ಮಳೆ ರಾತ್ರಿ ಹೊತ್ತು ಮಾತ್ರ ಸುರಿದರೆ ಆಗದೇ!' ಎಂದು ಆಸೆ ಪಡುತ್ತಾನೆ. ಹೀಗೇನಾದರೂ ನಡೆದರೆ ಇಡೀ ಸೃಷ್ಟಿಯೇ ಗೊಂದಲವಾಗಿ ಬಿಡುತ್ತದೆ. ಬಿರುಬೇಸಿಗೆಯಲ್ಲಿ ತಮ್ಮ ಊರು ಊಟಿಯಂತೆಯೋ, ಕೊಡೈಕೆನಾಲಿನ ಹಾಗೆಯೋ ಬದಲಾಗಬಾರದೇ ಎಂದು ಆಸೆ ಪಡುವವರಿಗೇನೂ ಕಡಿಮೆಯಿಲ್ಲ. ಒಂದು ವೇಳೆ ಹಾಗೇನಾದರೂ ಎಲ್ಲಾ ಊರುಗಳೂ ಬದಲಾದರೆ, ಪ್ರಕೃತಿಯ ಸಮಸ್ಥಿತಿಯೇ ಬದಲಾಗಿ ಹೋಗುವುದಿಲ್ಲವೇ!

ಒಂದು ಚಿಕ್ಕ ಮನೆಯಲ್ಲಿ ವಾಸ ಮಾಡುವ ಒಬ್ಬ ಸಾಮಾನ್ಯ ವ್ಯಕ್ತಿ, ಟಿ.ವಿ.ಯ ಜಾಹಿರಾತಿನಲ್ಲಿ ಬರುವ ಹೊಸ ಬಗೆಯ ಮಾಡರ್ನ್ ಆದ ಎಲ್ಲ ಬಗೆಯ ಅನುಕೂಲಗಳೂ ಇರುವ ಬಾತ್‌ರೂಮನ್ನು ನೋಡಿ, 'ನನ್ನ ಮನೆಯ ಬಾತ್‌ರೂಮ್ ಕೂಡ ಹೀಗೇ ಮಾಡರ್ನ್ ಆಗಿ ಬದಲಾದರೆ ಚೆನ್ನಾಗಿರುತ್ತದೆ!' ಎಂದು ಆಸೆ ಪಡಬಹುದು. ಒಂದು ವೇಳೆ ಹಾಗೇನಾದರೂ ಅದು ಬದಲಾದರೆ ಅವರ ಇಡೀ ಮನೆಯಲ್ಲಿ ಕೇವಲ ಬಾತ್ ರೂಮ್ ಮಾತ್ರವೇ ದೊಡ್ಡ ಕೋಣೆಯಾಗಿ ಬದಲಾಗಿರುತ್ತದೆ ಅಷ್ಟೇ!

ಒಂದು ಚಲನಚಿತ್ರದ ಕನಸಿನ ದೃಶ್ಯದಲ್ಲಿ ಸ್ವಿಡ್ಜರ್‌ಲ್ಯಾಂಡ್‌ನ ಹಿಮಪರ್ವತದಲ್ಲಿ ನಾಯಕ ನಾಯಕಿಯರಿಬ್ಬರೂ ನೃತ್ಯ ಮಾಡುವುದನ್ನು ನೋಡಿ, 'ನಾನೂ ನನ್ನ ಕುಟುಂಬದೊಂದಿಗೆ ಈ ಪರ್ವತದಲ್ಲಿ ಹೋಗಿ ನೃತ್ಯ ಮಾಡಿದರೆ ಎಷ್ಟು ಚೆನ್ನಾಗಿರುತ್ತದೆ' ಎಂದು ಆಸೆಪಡುವವರೂ ಉಂಟು. ಆದರೆ ಅವರು ಹಾಗೆಂದುಕೊಳ್ಳುತ್ತಿರುವಾಗಲೇ, ಚಲನಚಿತ್ರದ ಮುಂದಿನ ದೃಶ್ಯದಲ್ಲಿ ದುಬಾಯ್‌ನ ಒಂದು ಷಾಪಿಂಗ್‌ಮಾಲ್‌ನ ದೃಶ್ಯ ಬರುತ್ತದೆ. 'ಓಹ್! ನಾನು ಇಲ್ಲಿಗೆಲ್ಲ ಹೋದದ್ದೇ ಇಲ್ಲ. ಇಲ್ಲಿಗೆ ನಾನೂ ಹೋದರೆ ಚೆನ್ನಾಗಿರುತ್ತದೆ' ಎಂದು ಅಂದುಕೊಳ್ಳುತ್ತಾರೆ. ಇಂತಹ ಅವರ ಆಸೆಗಳೆಲ್ಲ ನೆರವೇರಿದರೆ ವೀಸಾ ಇಲ್ಲದೆ ತಮ್ಮ ನಾಡಿನೊಳಗೆ



ಪ್ರವೇಶಿಸಿದ ಅಪರಾಧಕ್ಕಾಗಿ ಅವರು ಕುಟುಂಬದೊಂದಿಗೆ ಸೆರೆಮನೆಗೆ ಹೋಗಬೇಕಾಗಬಹುದು.

'ಮುವ್ವತ್ತು ವರ್ಷಗಳ ಹಿಂದೆ ಇಲ್ಲಿ ಒಂದು ನಿವೇಶನ ಕೇವಲ ಹತ್ತು ಸಾವಿರ ರೂಪಾಯಿಗಳಿಗೆ ಮಾರಾಟ ಮಾಡಿದರು. ಇಂದು ಇದರ ಬೆಲೆ ಒಂದು ಕೋಟಿಗಿಂತ ಹೆಚ್ಚು' ಎಂದು ಒಬ್ಬ ಗೆಳೆಯ ತನ್ನ ಏರಿಯಾದ ಹೆಚ್ಚುಗಾರಿಕೆಯ ಬಗ್ಗೆ ಮಾತನಾಡುವಾಗ, 'ನಾನೂ ಆಗಲೇ ಇಲ್ಲಿ ಒಂದು ನಿವೇಶನ ಕೊಳ್ಳಬೇಕಾಗಿತ್ತು' ಎಂದು ಮನಸ್ಸಿನಲ್ಲಿ ಅನ್ನಿಸಬಹುದು. ಕಾಲದ ಯಂತ್ರದಲ್ಲಿ ಹಿಂದಕ್ಕೆ ಹೋಗಿ ಹೀಗೆ ನಾವು ಮಾಡಲು ಬಯಸುವ ವಿಷಯಗಳೂ ತುಂಬಾ ಇವೆ!

ಕ್ರಮವಲ್ಲದ, ಸಹಜತೆಗೆ ವಿರುದ್ಧವಾದ ಹಲವು ಆಸೆಗಳು ನಮಗೆ ನಾನಾ ಸಂಕಟಗಳನ್ನೂ ತಂದೊಡ್ಡಬಹುದು. ಅರ್ಥರಹಿತವಾದ ಆಸೆಗಳು ಮತ್ತೆ ಮತ್ತೆ ನಮ್ಮೊಳಗೆ ಉದಯಿಸುವಾಗ ಮನಸ್ಸಿನ ನೆಮ್ಮದಿಯೂ ಕೆಡುತ್ತದೆ. ಬಹುಪಾಲು ತಮ್ಮಿಂದ ಸಹಜವಾಗಿ ಪಡೆದುಕೊಳ್ಳಲು ಸಾಧ್ಯವಿಲ್ಲದ ಬೆಲೆಬಾಳುವ ವಿಷಯಗಳಿಗೇ ಹಲವರು ಆಸೆ ಪಡುತ್ತಾರೆ. ಆ ಆಸೆ ಕಡೆಗೆ ನಿರಾಸೆಯಲ್ಲಿ ಕೊನೆಗೊಳ್ಳಬಹುದು. ಇಂತಹ ಹಲವು ನಿರಾಶೆಗಳು ಮನಸ್ಸಿನೊಳಗೆ ಸಂಗ್ರಹವಾಗುವಾಗ, 'ಆಸೆಪಡುವ ವಿಷಯವನ್ನು ಗಳಿಸಲು ಸಾಧ್ಯವಾಗದ ಇಂತಹ ಜೀವನವೂ ಒಂದು ಜೀವನವೇ' ಎಂದು ಮನಸ್ಸಿನೊಳಗೆ ಬೇಸರ ಮೂಡಬಹುದು. ಇದ–ರಿಂದ ಒಬ್ಬ ವ್ಯಕ್ತಿ ತನ್ನ ಆತ್ಮವಿಶ್ವಾಸವನ್ನೇ ಕಳೆದುಕೊಳ್ಳಲೂ ಬಹುದು. ಅದರ ನಂತರ ಅವರಿಂದ ಸಹಜವಾದ ಕೆಲಸಗಳನ್ನು ಕೂಡ ಮಾಡಲು ಸಾಧ್ಯವಾಗದೇ ಹೋಗಬಹುದು.

ದೇವರಿಗೇ, ಆಸೆ ಪಟ್ಟ ವಿಷಯಗಳು ನಡೆಯದೇ ಹೋದದ್ದರ ಬಗ್ಗೆ ನಾವು ಪುರಾಣಗಳಲ್ಲಿ ಕಾಣುತ್ತೇವೆ. ಆದುದರಿಂದಲೇ ಆಸೆಗಳು ಮನಸ್ಸಿನಲ್ಲಿ ಮೂಡುವಾಗ, 'ಇದು ನಮ್ಮ ಅಗತ್ಯಗಳಿಗೆ ಮೀರಿದ ವಿಷಯ. ಇದು ಇಲ್ಲದೆಯೂ ನಮ್ಮಿಂದ ಸಂತೋಷದಿಂದ ಬದುಕಲು ಸಾಧ್ಯ. ಇದಕ್ಕಿಂತಲೂ ಮುಖ್ಯವಾದ ಅಗತ್ಯಗಳು ನಮಗಿವೆ' ಎಂದು ಅರ್ಥ ಮಾಡಿಕೊಂಡು ಆ ಆಸೆಯನ್ನು ಪಕ್ಕಕ್ಕಿಡಬೇಕು.

ತಪ್ಪು ಆಸೆಗಳು ಬೆಳೆಯುತ್ತಲೇ ಇರುತ್ತವೆ. ಆದರೆ, ದೀಪದ ಸುತ್ತಲೂ ಸುತ್ತಾಡುವ ಬೆಳಕಿನ ಹುಳುವಿನ ಹಾಗೆ ಆ ಆಸೆಗಳ ಸುತ್ತಲೂ ನಾವು ಸುತ್ತುತ್ತಿರಬಾರದು. ●

# ಆಸೆ ನುಡಿಗಳು!

❖ ಆಸೆಗಳಿಗೆ ಎಲ್ಲೆಗಳೇ ಇಲ್ಲ. ಅದೇ ಜಗತ್ತಿನ ನೀತಿ. ಈ ಪ್ರಪಂಚ ಸೃಷ್ಟಿಯಾಗಲು ಕಾರಣವೇ ಆಸೆ.

❖ ಜೀವನದಲ್ಲಿ ಏನನ್ನಾದರೂ ಸಾಧಿಸಬೇಕು ಎನ್ನುವ ತೀರದ ಆಸೆಯೇ ನಿಮ್ಮನ್ನು ಇತರರಿಗಿಂತ ಭಿನ್ನವಾಗಿ ತೋರಿಸುತ್ತದೆ.

❖ ನಿಮ್ಮ ನ್ಯಾಯವಾದ ಆಸೆಗಳೆಲ್ಲವೂ ಕಾರ್ಯರೂಪಕ್ಕೆ ಬಂದರೆ, ನಿಮ್ಮ ಕನಸುಗಳೆಲ್ಲವೂ ನಿಜವಾಗುವುದನ್ನು ಕಾಣಬಹುದು.

❖ ಎಲ್ಲಾ ಸಾಧನೆಗಳ ಆರಂಭ ಚುಕ್ಕೆಯೂ, ಯಾವುದೋ ಒಬ್ಬ ಮನುಷ್ಯನ ಆಸೆಯೇ. ಕೇವಲ ನಂಬಿಕೆಗಳೋ, ಬಯಕೆಗಳೋ ಮಾತ್ರವೇ ಎಲ್ಲವನ್ನೂ ಬದಲಾಯಿಸಿ ಬಿಡಲಾರವು.

❖ ಯಾವಾಗಲೂ ಯಾವುದಾದರೂ ಒಂದು ಉಪಯುಕ್ತ ವಿಷಯವನ್ನು ಕಲಿತುಕೊಳ್ಳಲು ಆಸೆ ಪಡಿ.

❖ ನಿಮ್ಮ ಆಸೆಗಳು ಬಲವಾಗಿದ್ದಲ್ಲಿ, ಅದನ್ನು ಸಾಧಿಸುವ ಪ್ರೇರಣೆಯೂ ದೊರೆಯುತ್ತದೆ. ಪ್ರೇರಣೆ ದೊಡ್ಡ ಮಟ್ಟದಲ್ಲಿರುವಾಗ, ಸಾಧನೆಯೂ ದೊಡ್ಡದಾಗಿಯೇ ಇರುತ್ತದೆ.

❖ ಆಸೆಗಳು ಕೆಟ್ಟವಲ್ಲ. ಆದರೆ ತಪ್ಪಾದ ಆಸೆಗಳಿಗೆ ದಾಸರಾಗುವುದೇ ಕೆಟ್ಟದ್ದು.

❖ ಅರ್ಹತೆಗೆ ಮೀರಿ ಆಸೆ ಪಡಬಾರದು ಎನ್ನುವುದು ನಿಜವೇ. ಆದರೆ, ನಿಮ್ಮ ಅರ್ಹತೆ ಏನು ಎನ್ನುವುದನ್ನು ಇತರರು ನಿರ್ಧಾರ ಮಾಡಬಾರದು.

❖ ಯಶಸ್ವೀ ಮನುಷ್ಯರು, 'ಸಾಧಿಸಬೇಕು' ಎನ್ನುವ ಆಸೆಯಿಂದಲೇ ಮೇಲ್ಮೆಯನ್ನು ಸಾಧಿಸುತ್ತಾರೆ. 'ಇತರರನ್ನು ಸೋಲಿಸಬೇಕು' ಎನ್ನುವ ಆಸೆಯಿಂದ ಅಲ್ಲ!

❖ ಆಸೆಯೇ ಎಲ್ಲ ಪ್ರಯತ್ನಗಳಿಗೂ ಮೂಲ ಕಾರಣ. ಆದರೆ, ಆಸೆ ಮಾತ್ರವೇ ಸಾಲುವುದಿಲ್ಲ. ನಿಶ್ಚಿತ ಕ್ರಿಯೆಯೂ, ನಿರಂತರ ದುಡಿಮೆಯೂ ಇದ್ದಲ್ಲಿ ಮಾತ್ರವೇ ಸಾಧಿಸಲು ಸಾಧ್ಯ.

❖ ನೆಲದಲ್ಲಿ ಬೆಳೆಯುವ ಕಳೆಗಳು, ಬೆಳೆಗೆ ತೊಂದರೆ ನೀಡುತ್ತವೆ. ಮನಸ್ಸಿನಲ್ಲಿ ಬೆಳೆಯುವ ತಪ್ಪಾದ ಆಸೆಗಳು, ಮನುಷ್ಯನ ಗುಣಗಳನ್ನೇ ಬಾಧಿಸುತ್ತವೆ.

❖ ತಪ್ಪಾದ ಆಸೆಗೆ ದಾಸರಾದವರು, ಆಸೆಯ ಪ್ರವಾಹದಲ್ಲಿ ಸಿಲುಕಿಕೊಳ್ಳುತ್ತಾರೆ. ಜೇಡ, ತಾನು ಹೆಣೆದ ಬಲೆಯಲ್ಲೇ ಸಿಲುಕಿ ಹಾಕಿಕೊಳ್ಳುವಂತೆ ಅವರೂ ಸಿಲುಕಿಕೊಳ್ಳುತ್ತಾರೆ.

❖ ಆಸೆಗಳು, ಭಾವನೆಗಳು, ಬುದ್ಧಿ – ಈ ಮೂರೂ ಮನುಷ್ಯರ ನಡತೆಯನ್ನು ತೀರ್ಮಾನಿಸುತ್ತವೆ.

❖ ಕಾಲ ನಮ್ಮೊಂದಿಗೆ ಆಟವಾಡುತ್ತದೆ. ಆದುದರಿಂದ ಆಯಸ್ಸು ಸವೆಯುತ್ತದೆ. ಆದರೆ ಆಸೆಯ ಹಿಡಿತ ಮಾತ್ರ ಸಡಿಲವಾಗಲು ನಿರಾಕರಿಸುತ್ತದೆ.

❖ ನಿಮ್ಮ ಬಳಿ ಸಾಮರ್ಥ್ಯವೂ, ನ್ಯಾಯವಾದ ಆಸೆಯೂ ಇದ್ದರೆ, ನೀವು ಇಷ್ಟಪಡುವ ಯಾವುದನ್ನೇ ಆಗಲಿ ನಿಮ್ಮಿಂದ ಸಾಧಿಸಲು ಸಾಧ್ಯ.

❖ ಆಸೆಗಳು ಕಡಿಮೆಯಾಗುವಾಗ ಸಂತೋಷದ ಪ್ರಮಾಣ ಹೆಚ್ಚುತ್ತದೆ.

❖ ಬೆಳೆಯಬೇಕು ಎನ್ನುವ ಆಸೆ ಒಂದು ಕಡೆ. 'ಜೀವನವನ್ನು ಅನುಭವಿಸಬೇಕು' ಎನ್ನುವ ಆಸೆ ಇನ್ನೊಂದೆಡೆ. ಈ ಎರಡರ ನಡುವೆ ಪ್ರತಿಯೊಂದು ದಿನವೂ ಸಿಲುಕಿಕೊಂಡಿರುವುದೇ ಜೀವನ.

❖ ನಿಮ್ಮ ಆಸೆ ಎಷ್ಟು ಪ್ರಬಲವಾದುದು, ನಿಮ್ಮ ಕನಸು ಎಷ್ಟು ದೊಡ್ಡದು, ನಿಮಗೆ ನಡೆಯುವ ಮೋಸಗಳನ್ನು ಹೇಗೆ ತಾಳಿಕೊಳ್ಳುವಿರಿ ಎನ್ನುವುದನ್ನು ಅವಲಂಬಿಸಿಯೇ ನಿಮ್ಮ ಯಶಸ್ಸಿನ ಪ್ರಮಾಣವೂ ಇರುತ್ತದೆ.

❖ ಆಸೆಯೇ ಇಲ್ಲದೆ ಯಾವೊಬ್ಬ ಮನುಷ್ಯನೂ ಯಾವ ಕೆಲಸವನ್ನೂ ಮಾಡುವುದಿಲ್ಲ. ಒಂದು ಆಸೆಯ ಪ್ರೇರಣೆಯಿಂದ, ಆಸೆ ನೆರವೇರುವುದಕ್ಕಾಗಿಯೇ ಅವನು ಯಾವುದನ್ನೇ ಆಗಲಿ ಮಾಡುತ್ತಾನೆ.

❖ ಒಂದು ಮರವನ್ನು ಕಡಿದರೂ ಅದರ ಬೇರುಗಳು ನಾಶವಾಗದೇ ಇದ್ದರೆ ಅದು ಮತ್ತೆ ಚಿಗುರಿ ಬೆಳೆಯುತ್ತದೆ. ಅದೇ ರೀತಿಯಾಗಿಯೇ ತಪ್ಪಾದ ಆಸೆಗಳ ಬೇರುಗಳನ್ನು



ಕತ್ತರಿಸುವವರೆಗೂ ಕಷ್ಟಗಳು ಬೆಳೆಯುತ್ತಲೇ ಇರುತ್ತವೆ.

❖ ಆಸೆಗೆ ನಾಚಿಕೆ ಇರುವುದಿಲ್ಲ. ಮೀಸೆ ನರೆತರೂ ಆಸೆ ನಿಲ್ಲುವುದಿಲ್ಲ.

❖ ಆಸೆಯೇ ಕಷ್ಟಗಳಿಗೆ ಕಾರಣ. ಆಸೆ ಮೂಡಿದರೆ, ತಾಳ್ಮೆ ಹಾರಿ ಹೋಗುತ್ತದೆ.

❖ ನಿಮ್ಮ ಮಹತ್ತಾದ ಆಸೆಯನ್ನು ಹೇಗಾದರೂ ನಿಜವಾಗಿಸಿ ತೋರಿಸುವುದೇ ನೀವು ಮಾಡಬೇಕಾದ ಒಳ್ಳೆಯ ಕೆಲಸ.

❖ ಬುದ್ಧಿ ಸಾಮರ್ಥ್ಯವನ್ನು ಆಸೆಗಳಿಗೆ ಕಣ್ಣುಗಳನ್ನಾಗಿಸಿ, ನಿಮ್ಮ



ಎನ್ನುವ ದೃಢತೆಯೂ ಇಲ್ಲದ ಮನಸ್ಸು ಒಂದು ನಿದ್ರಿಸುವ ಅಗ್ನಿಪರ್ವತದಂತಹುದು. ಅದು ಎಂತಹ ಅನಾಹುತವನ್ನು ಬೇಕಾದರೂ ಮಾಡಬಹುದು.

❖ ಗೆದ್ದವರಿಗೂ ಸೋತವರಿಗೆ ಸಾಮರ್ಥ್ಯದಲ್ಲಿ ಅಂತಹ ದೊಡ್ಡ ವ್ಯತ್ಯಾಸವೇನೂ ಇರುವುದಿಲ್ಲ. ತಾವು ಇಷ್ಟ ಪಡುವ ಒಂದು ವಿಷಯವನ್ನು ಹೇಗಾದರೂ ಪಡೆದುಕೊಳ್ಳಲೇಬೇಕು ಎನ್ನುವ ಆಸೆ ಇರುವವರು ಜಯಿಸುತ್ತಾರೆ. ಇಲ್ಲದವರು ಸೋಲುತ್ತಾರೆ.

❖ 'ಇದನ್ನು ಪಡೆದುಕೊಳ್ಳುವ ಸಾಮರ್ಥ್ಯವೂ ಅರ್ಹತೆಯೂ ನನಗಿದೆ' ಎಂದು ಗಣಿಸಿ ನೋಡಿ ಅದಕ್ಕೆ ಆಸೆ ಪಡಿ.

❖ ಈ ಜಗತ್ತನ್ನು ನಿರಂತರವಾಗಿ ಬದಲಾಯಿಸುತ್ತಲೇ ಇರುವುದು ಎರಡು ವಿಷಯಗಳು. ಒಂದು: ಭಯ. ಇನ್ನೊಂದು: ಆಸೆ.

❖ ಯಾವುದಕ್ಕೂ ಆಸೆ ಪಡದವರೇ ಎಲ್ಲವನ್ನೂ ಪಡೆದುಕೊಂಡು ಸಂತೋಷದಿಂದ ಜೀವಿಸುತ್ತಾರೆ.

❖ ಜೀವನದಲ್ಲಿ ಮೇಲೇರಿ ಸಾಗಲು ಕೆಲವು ಆಸೆಗಳ ಅಗತ್ಯವಿರುತ್ತವೆ.

ಆತ್ಮಕ್ಕೆ ಮಾರ್ಗದರ್ಶಿಯನ್ನಾಗಿಯೂ ಬದಲಾಯಿಸಿ.

❖ ನಿಮ್ಮ ಬಳಿ ಇಲ್ಲದ ವಿಷಯಗಳಿಗೆ ಆಸೆ ಪಡಿ. ಆದರೆ, ಇರುವ ವಿಷಯಗಳನ್ನು ಕೆಡಿಸಿ ಬಿಡಬೇಡಿ. ಏಕೆಂದರೆ, ಈಗ ನಿಮ್ಮ ಬಳಿ ಇರುವುದರಲ್ಲಿ ಹಲವು ವಿಷಯಗಳು ಈ ಹಿಂದೆ ನೀವು ಪಡೆಯಲು ಆಸೆ ಪಟ್ಟವುಗಳೇ.

❖ ಈ ಜಗತ್ತು ಚಿಕ್ಕದು. ಮನುಷ್ಯರು ಚಿಕ್ಕವರು. ಮನುಷ್ಯನ ಜೀವನ ಚಿಕ್ಕದು. ಈ ಎಲ್ಲವುಗಳಿಗಿಂತಲೂ ದೊಡ್ಡದು ಆಸೆ.

❖ ದೊಡ್ಡದೊಡ್ಡ ಆಸೆಗಳೂ, ಅದನ್ನು ಸಾಧಿಸಬೇಕು

❖ ನಮ್ಮಿಂದ ಪಡೆಯಲು ಸಾಧ್ಯವಿರುವ ದೊಡ್ಡ ಗುರಿಗಳನ್ನು ಸಾಧಿಸಬೇಕು ಎಂದು ಯಾವಾಗಲೂ ಆಸೆಪಡಿ.

❖ ಸೋಲು ನಿಮ್ಮನ್ನು ಕುಗ್ಗಿಸಿ ಹಾಕಲು ಅವಕಾಶ ನೀಡಬೇಡಿ. ಯಶಸ್ಸು ಗಳಿಸಬೇಕು ಎನ್ನುವ ನಿಮ್ಮ ಆಸೆಯನ್ನು ಇನ್ನೂ ದೊಡ್ಡದಾಗಿಸಿಕೊಳ್ಳಿ.

❖ ಮಕ್ಕಳಿಗೆ ಒಳ್ಳೆಯ ಶಿಕ್ಷಣವನ್ನು ನೀಡಿ. ನ್ಯಾಯವಾಗಿ ಆಸೆ ಪಡುವುದು ಹೇಗೆ ಎನ್ನುವುದನ್ನು ಅದರ ನಂತರ ಅವರೇ ಕಲಿತು ಕೊಳ್ಳುತ್ತಾರೆ. ●

# ಆಸೆಯೇ ನಮ್ಮ ಪ್ರೇರಕ ಶಕ್ತಿ!

ಇಬ್ಬರು ನೌಕರರು ಇದ್ದರು. ಅವರಲ್ಲಿ ಒಬ್ಬ ಕಷ್ಟಪಟ್ಟು ದುಡಿಯದೆ–ಯೇ ತನಗೆ ಉದ್ಯೋಗದಲ್ಲಿ ಬಡ್ತಿಯೂ, ಎಲ್ಲಾ ಅನುಕೂಲಗಳೂ ದೊರಕಬೇಕು ಎಂದು ಆಸೆ ಪಡುತ್ತಿದ್ದ. ಇನ್ನೊಬ್ಬ, ತನಗೆ ನೀಡುವ ಎಲ್ಲಾ ಕೆಲಸಗಳನ್ನೂ ಉಳಿದೆಲ್ಲರಿಗಿಂತಲೂ ಚೆನ್ನಾಗಿ ಮಾಡುತ್ತಿದ್ದ ಮತ್ತು ತನ್ನ ಕೆಲಸವನ್ನು ಆತ ಇಷ್ಟಪಟ್ಟು ಆಸೆಯಿಂದ ಮಾಡುತ್ತಿದ್ದ. ತಾನು ಮಾಡುವ ಕೆಲಸದ ಪ್ರತಿಫಲದ ಬಗ್ಗೆ ಅವನು ಯೋಚಿಸುತ್ತಿರಲಿಲ್ಲ. ಬಡ್ತಿಯ ಬಗ್ಗೆಯೂ ಅವನು ಯೋಚಿಸಿದ್ದಿಲ್ಲ. ಹಾಗಿರುವಾಗ ಈ ಎರಡನೇ ವ್ಯಕ್ತಿಗೆ ತಾನೇ ಎಲ್ಲವೂ ಸಹಜವಾಗಿ ದೊರೆಯುವುದು!

ನಮ್ಮ ಪ್ರತಿಯೊಂದು ಕೆಲಸದ ಹಿಂದೆಯೂ ಆಸೆಗಳು ಇದ್ದೆ ಇರುತ್ತವೆ. ಅದೇ ನಮ್ಮ ಪ್ರೇರಕಶಕ್ತಿಯಾಗಿದ್ದು ನಾವು ಕಾರ್ಯ ನಿರ್ವಹಿಸುವಂತೆ ಮಾಡುತ್ತದೆ. ನಾವು ನಡೆಯಲು ಆಸೆ ಪಟ್ಟರೆ ನಡೆಯುತ್ತೇವೆ, ವಿಶ್ರಾಂತಿ ತೆಗೆದುಕೊಳ್ಳಲು ಆಸೆ ಪಟ್ಟರೆ ವಿಶ್ರಾಂತಿ ತೆಗೆದುಕೊಳ್ಳುತ್ತೇವೆ. ಊಟ ಮಾಡಲು ಆಸೆ ಪಟ್ಟಾಗ ಊಟ ಮಾಡುತ್ತೇವೆ. ಏನೂ ತಿನ್ನದೆ ವ್ರತವನ್ನು ಆಚರಿಸಲು ಬಯಸಿದರೆ ಉಪವಾಸ ಇರುತ್ತೇವೆ. ಅನುಕೂಲಕರ ಜೀವನಕ್ಕೆ ಆಸೆ ಪಡುವುದರಿಂದ ಕೆಲಸಕ್ಕೆ ಹೋಗುತ್ತೇವೆ. ಕೆಲಸದಲ್ಲಿ ಬಡ್ತಿಗೆ ಆಸೆ ಪಟ್ಟರೆ ಆ ಕೆಲಸವನ್ನು ಚೆನ್ನಾಗಿ ಮಾಡುತ್ತೇವೆ.

ಆಸೆಗಳೇ ಇಲ್ಲದೆ ಹೋದರೆ ಜೀವನವೇ ಇಲ್ಲ. ಚಿಕ್ಕ ವಿಷಯವೋ, ದೊಡ್ಡ ವಿಷಯವೋ ಎಲ್ಲವನ್ನೂ ನಾವು ಮಾಡಲು ಆಸೆಯೇ ಮೊದಲ ಕಾರಣ. ಯಾವುದಕ್ಕಾಗಿ ಆಸೆ ಪಡುತ್ತೇವೆ, ಎಷ್ಟರ ಮಟ್ಟಿಗೆ ಆಸೆ ಪಡುತ್ತೇವೆ ಎನ್ನುವುದೇ ಇಲ್ಲಿ ಮುಖ್ಯವಾದ ಪ್ರಶ್ನೆ. ಏಕೆಂದರೆ, ಪ್ರತಿಯೊಂದು ಆಸೆಯೂ ನಮ್ಮನ್ನು ಬೇರೆಬೇರೆ ಹಾದಿಗಳಿಗೆ ಕರೆದು–ಕೊಂಡು ಹೋಗುತ್ತವೆ. ನಾವು ಸಾಗಬೇಕಾದ ಹಾದಿ ಯಾವುದು ಎನ್ನುವುದನ್ನು ಎಚ್ಚರಿಕೆಯಿಂದಲೂ ಬುದ್ಧಿವಂತಿಕೆಯಿಂದಲೂ ಆಯ್ಕೆ ಮಾಡಬೇಕು.

ಆಸೆ ಹೇಗೆ ಕಷ್ಟಗಳಿಗೆ ಕಾರಣವೋ, ಹಾಗೆಯೇ ಸುಖಕ್ಕೂ ಆಸೆಯೇ ಕಾರಣ. ನಾವು ತುಂಬಾ ಇಷ್ಟಪಟ್ಟು ಆಸೆಪಡುವ ಒಂದು ವಿಷಯವನ್ನು ಹುಡುಕಿಕೊಂಡು ಹೋದರೆ ನಮಗೆ ಕಷ್ಟ ಮಾತ್ರವೇ ಉಳಿಯುತ್ತದೆ ಎಂದರೆ, ಆ ಆಸೆಯನ್ನು ಕೈಬಿಟ್ಟುಬಿಡಬೇಕು.

ನಮ್ಮ ಆಸೆಗಳು ನಮಗೆ ಒಳಿತನ್ನೂ ಕೆಡುಕನ್ನೂ ಉಂಟು ಮಾಡುವಂತೆಯೇ, ಇತರರ ಆಸೆಗಳೂ ನಮ್ಮ ಜೀವನದ ಮೇಲೆ ಪರಿಣಾಮವನ್ನು ಬೀರುತ್ತವೆ. ನಮ್ಮನ್ನು ದ್ವೇಷಿಸುವವರು ಕೆಲವರು ನಮಗೆ ಕಷ್ಟಗಳು ಬರಬೇಕು ಎಂದು ಆಸೆ ಪಡುತ್ತಾರೆ. ಅದಕ್ಕಾಗಿ ಪ್ರಯತ್ನವನ್ನೂ ಮಾಡುತ್ತಾರೆ. ಆ ಪ್ರಯತ್ನ ಅವರಿಗೂ ಕಷ್ಟವನ್ನೇ ತಂದುಕೊಡುತ್ತದೆ ಎನ್ನುವುದನ್ನು ಅವರು ಅರ್ಥ ಮಾಡಿಕೊಳ್ಳುವುದಿಲ್ಲ.

ನಮ್ಮನ್ನು ಇಷ್ಟಪಡುವವರ ಆಸೆಗಳೆಲ್ಲವೂ ನಮಗೆ ಒಳಿತನ್ನೇ ಉಂಟು ಮಾಡುತ್ತವೆ. ಏನೂ ಬರೆಯದ ಖಾಲಿ ಹಾಳೆಯ ಹಾಗೆ ಒಂದು ಮಗುವಾಗಿ ಹುಟ್ಟಿದ ನಮ್ಮನ್ನು ನಮ್ಮ ತಾಯಿಯ ಆಸೆಯೇ ಒಳ್ಳೆಯ ವ್ಯಕ್ತಿಯನ್ನಾಗಿ ಬೆಳೆಸಿರುವುದು. ಪ್ರತಿಯೊಂದು ಹಂತದಲ್ಲೂ ಅವರು ತಮ್ಮ ಪ್ರೀತಿಯನ್ನೂ, ಧರ್ಮವನ್ನೂ ಸೇರಿಸಿಯೇ ಊಡಿಸಿ ಬೆಳೆಸುತ್ತಾರೆ. ಅಪ್ಪನ ಆಸೆ ನಮ್ಮನ್ನು ಓದಿಸಿ, ಒಳ್ಳೆಯ ಆದಾಯ ದೊರಕುವ ಉದ್ಯೋಗ ಮಾಡುವ ಮಟ್ಟಿಗೆ ಬೆಳೆಸುತ್ತದೆ. ಸಹೋದರ ಸಹೋದರಿಯರು, ಶಿಕ್ಷಕರು, ಜೀವನ ಸಂಗಾತಿ, ಗೆಳೆಯರು, ಸಂಬಂಧಿಕರು ಹೀಗೆ ಎಲ್ಲರ ಆಸೆಗಳೂ ಪ್ರಯತ್ನಗಳೂ ಸೇರಿಯೇ ನಮಗೆ ಒಳ್ಳೆಯ ಜೀವನವನ್ನು ನಿರ್ಮಿಸಿ ಕೊಟ್ಟಿವೆ.

ನಮ್ಮ ಆಸೆಗಳು ಖಾಸಗಿಯಾದವುಗಳಾಗಿರಬಾರದು. ಅವು ಕೇವಲ ನಮಗಾಗಿ ಮಾತ್ರ ಇರಬಾರದು. ಕುಟುಂಬ, ಪೋಷಕರು, ಬಂಧುಗಳು, ಗೆಳೆಯರು, ಅಕ್ಕಪಕ್ಕದಲ್ಲಿರುವವರು, ಜೀವನದಲ್ಲಿ ನಮಗೆ ಸಹಾಯ ಮಾಡಿ ಕೈನೀಡಿ ನಮ್ಮನ್ನು ಮೇಲೆತ್ತಿದವರು ಹೀಗೆ ಎಲ್ಲರ ಒಳ್ಳೆಯ ಜೀವನವನ್ನೂ ಬಯಸುವುದಾಗಿಯೇ ನಮ್ಮ ಆಸೆಗಳು ಇರಬೇಕು. ಅಂತಹ ಆಸೆಗಳೇ ನಮಗೆ ನೆಮ್ಮದಿಯನ್ನೂ ನೀಡುತ್ತವೆ. ●



# ಹೊಗಳಿಕೆಗೆ ಆಸೆ ಪಡಿ!

ಭಿಕ್ಷೆ ಬೇಡಿ ಜೀವನ ಮಾಡುತ್ತಿದ್ದ ಒಬ್ಬ ವ್ಯಕ್ತಿ, ಒಂದು ದಿನ ಊರಿನ ಎಲ್ಲೆಯಲ್ಲಿರುವ ಮರದಡಿಯಲ್ಲಿ ಮಲಗಿ ನಿದ್ರಿಸುತ್ತಿದ್ದ. ಆ ದಾರಿಯಲ್ಲಿ ಬಂದ ಒಬ್ಬ ವ್ಯಾಪಾರಿ, ಆ ಮರದ ಕೆಳಗೆ ಕುಳಿತು ಆಹಾರ ಸೇವಿಸಿ ವಿಶ್ರಾಂತಿ ತೆಗೆದುಕೊಂಡ. ಭಿಕ್ಷುಕ ಆ ವ್ಯಾಪಾರಿಯನ್ನು ಕುರಿತು, 'ನೀವು ಯಾರು? ಏನು ಮಾಡುತ್ತಿದ್ದೀರಿ?' ಎಂದು ವಿಚಾರಿಸಿದ.

'ನಾನು ತುಂಬಾ ವಸ್ತುಗಳನ್ನು ಬಂದರಿನಿಂದ ಕೊಂಡು ತಂದು ಊರೂರು ತಿರುಗಿ ಮಾರಾಟ ಮಾಡುತ್ತೇನೆ. ಅದರಲ್ಲಿ ನನಗೆ ಒಂದು ಪಾಲು ಲಾಭ ಸಿಗುತ್ತದೆ. ನೀವೇನು ಮಾಡುತ್ತಿದ್ದೀರಿ...?' ಎಂದು ಭಿಕ್ಷುಕನನ್ನು ಕೇಳಿದ.

'ನಾನು ಊರೂರು ಸಂಚರಿಸಿ ಜನರ ಬಳಿ ಭಿಕ್ಷೆ ಬೇಡುತ್ತೇನೆ. ಅವರು ತಮ್ಮ ಆಹಾರದಲ್ಲಿ ಒಂದು ಪಾಲನ್ನು ನನಗೆ ನೀಡುತ್ತಾರೆ. ಅದನ್ನು ತೆಗೆದುಕೊಂಡು ಬಂದು ಹೀಗೆ ಎಲ್ಲಾದರೂ ಕುಳಿತು ತಿಂದು, ನಿದ್ರೆ ಮಾಡಿ ವಿಶ್ರಾಂತಿ ಪಡೆದುಕೊಳ್ಳುತ್ತೇನೆ' ಎಂದ ಅವನು.

'ಏಕೆ ಹೀಗೆ ಬದುಕುತ್ತಿದ್ದೀರಿ? ಯಾವುದಾದರೂ ಕೆಲಸ ಮಾಡಿ ಜೀವಿಸಬಹುದಲ್ಲವೇ? ಏನಾದರೂ ವ್ಯಾಪಾರ ಮಾಡಿ ಹಣ ಸಂಪಾದಿಸಬಹುದು. ಸ್ವಂತ ಮನೆ ಕೊಳ್ಳಬಹುದು. ಒಳ್ಳೆಯ ಉಡುಪುಗಳನ್ನು ಧರಿಸಬಹುದು. ಒಳ್ಳೆಯ ಆಹಾರವನ್ನೂ ಸೇವಿಸಬಹುದು' ಎಂದು ಕೇಳಿದ ವ್ಯಾಪಾರಿ.

'ಇದೆಲ್ಲವನ್ನೂ ಮಾಡುವ ಮೂಲಕ ನಾನು ಏನನ್ನು ಸಾಧಿಸುತ್ತೇನೆ ಹೇಳಿ?'

'ನೆಮ್ಮದಿಯಾಗಿಯೂ, ಸಂತೋಷದಿಂದಲೂ ಬದುಕಬಹುದು ಅಲ್ಲವೇ?'

'ಈಗಲೂ ನಾನು ಹಾಗೆ ತಾನೇ ಇದ್ದೇನೆ' ಎಂದ ಭಿಕ್ಷುಕ.

ವ್ಯಾಪಾರಿ ಆ ಭಿಕ್ಷುಕನನ್ನು ಮೇಲಿನಿಂದ ಕೆಳಗಿನವರೆಗೂ ನೋಡಿ, 'ನಿನ್ನಂತೆಯೇ ಇತರರ ದುಡಿಮೆಯಲ್ಲಿ ಆಹಾರ, ಉಡುಪು ಹೀಗೆ ಎಲ್ಲವನ್ನೂ ಪಡೆದುಕೊಂಡು ಸುಮ್ಮನೆ ಸುಖವಾಗಿ ಬದುಕುವವರೆಲ್ಲರೂ ಯೋಚಿಸಿ ನೋಡಬೇಕು. ನಿಮಗೆ ಬೇಕಾದ ಎಲ್ಲವನ್ನೂ ಈ ಸಮಾಜ ನಿಮಗೆ ನೀಡುತ್ತಿದೆ. ಅದಕ್ಕೆ ಬದಲಾಗಿ ಈ ಸಮಾಜಕ್ಕೆ ನೀವೇನು ನೀಡುತ್ತಿದ್ದೀರಿ? ನೀನು ನೆರಳಿನಲ್ಲಿ ವಿಶ್ರಾಂತಿ ಪಡೆದುಕೊಳ್ಳುತ್ತಿರುವ ಈ ಮರ ಕೂಡ ಯಾರೋ ಕಷ್ಟಪಟ್ಟು ನೆಟ್ಟದ್ದೇ. ಇವೆಲ್ಲವುಗಳಿಗೆ ಪ್ರತಿಯಾಗಿ ನೀನೇನು ಮಾಡಿದ್ದೀಯಾ?' ಎಂದು ಕೇಳಿದ.

ಯಾವುದೇ ವಯಸ್ಸಿನ ಮನುಷ್ಯರಾಗಿದ್ದರೂ ಅವರು ತಮಗೊಂದು ಅಂಗೀಕಾರಕ್ಕೂ, ಹೊಗಳಿಕೆಗೂ ಆಸೆ ಪಡುತ್ತಾರೆ. ಒಂದು ಮಗು ಕೂಡ ಆಸೆ ಪಟ್ಟೇ ಸಾಧನೆಗಳನ್ನು ಮಾಡುತ್ತದೆ. ಒಂದು ಸಂಸ್ಥೆಯಲ್ಲಿ ತುಂಬಾ ಸಮರ್ಥವಾಗಿ ಕೆಲಸ ಮಾಡುವ ವ್ಯಕ್ತಿ ಅದಕ್ಕೆ ತಕ್ಕ ಹೊಗಳಿಕೆ ತನಗೆ ದೊರಕಬೇಕು ಎಂದು ಆಸೆ ಪಡುತ್ತಾನೆ. ಯಾವ ಕೆಲಸವನ್ನು ಮಾಡುವವರೇ ಆಗಿದ್ದರೂ, ತನ್ನ ಸೇವೆಗೆ ಪ್ರತಿಯಾಗಿ ಅಂಗೀಕಾರ ದೊರಕಬೇಕು ಎಂದು ಆಸೆ ಪಡುತ್ತಾರೆ. ಒಬ್ಬ ಡಾಕ್ಟರ್, ಒಬ್ಬ ಸಂಗೀತಗಾರ, ಚಿತ್ರಕಲಾವಿದ, ಬರಹಗಾರ, ಭಾಷಣಕಾರ ಹೀಗೆ ಎಲ್ಲರೂ ಅದಕ್ಕಾಗಿಯೇ ಆಸೆ ಪಡುತ್ತಾರೆ. ತುಂಬ ಪ್ರೀತಿಯಿಂದ ರುಚಿಯಾಗಿ ಅಡುಗೆ ಮಾಡಿ ಕೊಡುವ ಅಮ್ಮ ಕೂಡ ಒಂದು ಮೆಚ್ಚುಗೆಯ ಮಾತಿಗಾಗಿ ಹಂಬಲಿಸುತ್ತಾರೆ. ಒಂದು ನಿಮಿಷದ ಹೊಗಳಿಕೆ ಕೂಡ ಅವರ ಮನಸ್ಸಿನಲ್ಲಿ ಸಂತೋಷವನ್ನು ಅರಳಿಸುತ್ತದೆ.

ಪ್ರತಿಯೊಬ್ಬರೂ ತಮ್ಮ ಸಾಮರ್ಥ್ಯವನ್ನು, ಅರ್ಹತೆಯನ್ನು, ತಾವು ಮಾಡುವ ಒಳ್ಳೆಯ ಕಾರ್ಯ ಹಾಗೂ ಅದರ ಪರಿಣಾಮಗಳನ್ನು ಚೆನ್ನಾಗಿ ಅರಿತಿದ್ದರೂ ಕೂಡ ಅದೆಲ್ಲವನ್ನೂ ಇನ್ನೊಬ್ಬರ ಬಾಯಲ್ಲಿ ಕೇಳಲು ಆಸೆ ಪಡುತ್ತಾರೆ. ಅವರಿಗೆ ದೊರಕುವ ಹಣವನ್ನೂ ಮೀರಿ, ಇದೇ ಅವರಿಗೆ ಹೆಚ್ಚು ಸಂತೋಷವನ್ನು ನೀಡುತ್ತದೆ. 'ಈ ಸಮಾಜ ನನ್ನನ್ನು ಗಮನಿಸುತ್ತಿದೆ. ನನ್ನ ಸಾಮರ್ಥ್ಯವನ್ನು ಅಂಗೀಕರಿಸಿ ಹೊಗಳುತ್ತದೆ' ಎಂಬ ಭಾವವೇ ಅವರನ್ನು ಇನ್ನೂ ಹೆಚ್ಚು ಸಾಧಿಸುವಂತೆ ಪ್ರೇರೇಪಿಸುತ್ತದೆ. ಸಮಾಜಕ್ಕೆ ತಮ್ಮ ಕರ್ತವ್ಯವನ್ನು ಮಾಡುವಂತೆ ಪ್ರೇರಣೆ ನೀಡುತ್ತದೆ.

ಸಮಾಜದಿಂದ ದೂರವಾಗದೆ, ಪ್ರತ್ಯೇಕ ದ್ವೀಪವಾಗಿ ಪರಿವರ್ತಿತವಾಗದೆ, ಎಲ್ಲರ ಜೊತೆಯಲ್ಲೂ ಬೆರೆಯಬೇಕು. ನಮ್ಮನ್ನು ನೆನಪಿಸಿಕೊಳ್ಳುವ ಹಾಗೆ ಯಾವುದಾದರೂ ಉಪಯುಕ್ತವಾದ ಕೆಲಸಗಳನ್ನು ಈ ಸಮಾಜಕ್ಕಾಗಿ ಮಾಡಲು ಆಸೆ ಪಡಬೇಕು. ●



# ಇದು ದುರಾಸೆಯೇ?

ಮೂರು ಜನ ಗೆಳೆಯರು ಒಂದು ದೇವಾಲಯದ ಅನ್ನದಾನದಲ್ಲಿ ಊಟ ಮಾಡುತ್ತಿದ್ದರು. ಯಾರೋ ಒಬ್ಬ ಶ್ರೀಮಂತ ತನ್ನ ಮಗುವಿನ ಹುಟ್ಟುಹಬ್ಬದ ನಿಮಿತ್ಯ, ದೇವಸ್ಥಾನಕ್ಕೆ ಬಂದು ಅಲ್ಲಿಗೆ ಬರುವ ಭಕ್ತರೆಲ್ಲರಿಗೂ ಮೃಷ್ಟಾನ್ನ ಭೋಜನಕ್ಕೆ ವ್ಯವಸ್ಥೆ ಮಾಡಿದ್ದರು. ಅವರಲ್ಲಿ ಒಬ್ಬ, 'ಇದೇ ರೀತಿಯಲ್ಲಿ ಅನ್ನದಾನ ಮಾಡಲು ನನಗೂ ಆಸೆ. ಆದರೆ ನನ್ನ ಬಳಿ ಅಷ್ಟು ಹಣ ಇಲ್ಲವಲ್ಲ' ಎಂದು ವ್ಯಥೆ ಪಟ್ಟ. 'ನಾವು ಮಾಡಿದ ಕೆಲಸದ ಕೂಲಿ ಬರುವ ಮುನ್ನವೇ ಉದ್ದವಾದ ಖರ್ಚಿನಪಟ್ಟಿ ನಮ್ಮ ಕೈಯಲ್ಲಿರುತ್ತದೆ' ಎಂದು ಇನ್ನೊಬ್ಬ ಬೇಸರ ವ್ಯಕ್ತ ಪಡಿಸಿದ. 'ಪ್ರತಿ ತಿಂಗಳೂ ಸಾಲ ತೆಗೆದು–ಕೊಂಡೇ ಎಲ್ಲವನ್ನು ನಿಭಾಯಿಸಬೇಕಾಗಿದೆ' ಎಂದು ಮೂರನೆಯವನು ನೊಂದುಕೊಂಡ.

ಅವರ ಪಕ್ಕದಲ್ಲೇ ಕುಳಿತು ಊಟ ಮಾಡುತ್ತಿದ್ದ ಒಬ್ಬ ಸಾಧು ಇವರ ಮಾತುಗಳನ್ನು ಕೇಳಿ ನಕ್ಕ. 'ಅನ್ನದಾನ ಮಾಡಬೇಕೆಂದು ನೀವು ಬಯಸುವುದು ದುರಾಸೆಯೇನೂ ಅಲ್ಲ. ಅದಕ್ಕಾಗಿ ಹೀಗೆ ಹೆಚ್ಚಿನ ಖರ್ಚು ಮಾಡಬೇಕಾಗಿಯೂ ಇಲ್ಲ. ಒಂದು ಚಮಚೆ ಸಕ್ಕರೆಯನ್ನು ತೆಗೆದುಕೊಂಡು ಇರುವೆಗಳಿಗೆ ಹಾಕಿದರೆ ಅದೂ ಕೂಡ ಅನ್ನದಾನವೇ. ನೂರಾರು ಸಂಖ್ಯೆಯ ಇರುವೆಗಳಿಗೆ ಆಹಾರ ನೀಡಿದ ತೃಪ್ತಿ ನಿಮಗೆ ದೊರೆಯುತ್ತದೆ. ಒಂದು ಹಿಡಿ ಅಕ್ಕಿಯನ್ನು ತೆಗೆದುಕೊಂಡು ಹಕ್ಕಿಗಳಿಗೆ ಹಾಕಿದರೂ ಸಾಕು. ಒಂದು ಕಟ್ಟು ಸೊಪ್ಪನ್ನು ಒಂದು ಹಸುವಿಗೆ ತಿನ್ನಿಸಿದರೆ ಅದೂ ಕೂಡ ಅನ್ನದಾನವೇ! ನಿಮ್ಮ ಆಸೆ ಒಳ್ಳೆಯದಾಗಿದ್ದರೆ, ದೇವರು ಅದಕ್ಕೆ ತಕ್ಕ ದಾರಿಯನ್ನೂ ತೋರಿಸುತ್ತಾನೆ' ಎಂದು ಹೇಳಿದ.

ಒಳ್ಳೆಯ ಆಸೆಗಳು ಖಂಡಿತವಾಗಿಯೂ ಹೇಗಾದರೂ ನೆರವೇರುತ್ತವೆ.


## ಕಲಿತುಕೊಳ್ಳುವ ಆಸೆ!

ಏನನ್ನಾದರೂ ಕಲಿಯಬೇಕು ಎನ್ನುವ ಆಸೆ ನಾವು ಹುಟ್ಟುವಾಗಲೇ ನಮ್ಮೊಂದಿಗೆ ಸೇರಿಯೇ ಹುಟ್ಟುತ್ತದೆ. ಮೇಲೆದ್ದು ನಡೆಯಲೂ, ಪದಗಳನ್ನು ಅರ್ಥ ಮಾಡಿಕೊಂಡು ಮಾತನಾಡಲೂ ಒಂದು ಮಗು ಕಲಿಯುವುದು ಇಂತಹ ಆಸೆಯಿಂದಲೇ. ಆ ಕಲಿಯುವಿಕೆಯೇ ಮನುಷ್ಯ ಸಂಕುಲವನ್ನು ನಾಗರಿಕವನ್ನಾಗಿ ಬದಲಾಯಿಸಿರುವುದು.

50 ವರ್ಷಗಳ ಮುನ್ನ ಇದ್ದ ಹಾಗೆಯೇ ಜಗತ್ತು ಈಗ ಇಲ್ಲ. ನಾವು ಪ್ರಯಾಣ ಮಾಡುವ ರೀತಿ ಬದಲಾಗಿದೆ. ವೇಗವಾದ ಪ್ರಯಾಣಕ್ಕಾಗಿ ಎಷ್ಟೊಂದು ಬಗೆಯ ವಿಮಾನಗಳೂ, ರೈಲುಗಳೂ, ಕಾರುಗಳೂ... ಬಂದುಬಿಟ್ಟಿವೆ. ನಮ್ಮ ದೂರವಾಣಿ ಸಂಪರ್ಕದ ವ್ಯವಸ್ಥೆಯೇ ಸಂಪೂರ್ಣ ಬದಲಾಗಿ ಹೋಗಿದೆ. ಸಂಪರ್ಕ ಮಾಧ್ಯಮಗಳ ಅನುಕೂಲತೆಗಳೂ ಬದಲಾಗಿವೆ. ನಾವಂದುಕೊಂಡ ಕ್ಷಣದಲ್ಲಿ ಸೆಲ್‌ಫೋನ್‌ನಲ್ಲಿ ಯಾರೊಂದಿಗೆ ಬೇಕಾದರೂ ಮಾತನಾಡಲು ಸಾಧ್ಯ. ನಮ್ಮ ಮನರಂಜನೆಯ ಸಾಧನಗಳು ಬದಲಾಗಿ ಹೋಗಿವೆ. ಸಿನಿಮಾ, ಟಿ.ವಿ.,ಗಳನ್ನೂ ಮೀರಿ ಎಷ್ಟೆಷ್ಟೋ ಅವಕಾಶಗಳು ನಮ್ಮ ಕಣ್ಣ ಮುಂದಿವೆ.

ನಮ್ಮ ಜೀವನವನ್ನು ಮಧುರಾಗಿಯೂ, ಸುಖವಾಗಿಯೂ, ಸರಳವಾಗಿಯೂ ಇಟ್ಟುಕೊಳ್ಳಲು ಅಗತ್ಯವಾಗಿರುವ ಎಲ್ಲವನ್ನೂ ಪಡೆಯಬೇಕು ಎಂದು ಆಸೆಪಡಿ. ನಿಮಗೆ ನೆಮ್ಮದಿ ದೊರಕುತ್ತದೆ, ಜಗತ್ತೂ ನಿಮಗೆ ಸುಂದರವಾಗಿ ಕಾಣುತ್ತದೆ!





## ಆಸೆಗಳನ್ನು ತ್ಯಜಿಸಬೇಕೇ?

'ಆಸೆಗಳೆಲ್ಲವನ್ನೂ ತ್ಯಜಿಸಿದ ವ್ಯಕ್ತಿ' ಎಂದು ಯಾರಾದರೂ ಹೇಳಿದರೆ, ಅವರು ಸುಳ್ಳು ಹೇಳುತ್ತಿದ್ದಾರೆ ಎಂದೇ ಅರ್ಥ. ಆಸೆಗಳನ್ನು ಸಂಪೂರ್ಣವಾಗಿ ತ್ಯಜಿಸಿದವರು ಯಾರೂ ಇಲ್ಲ. ಮನುಷ್ಯರಾಗಿರುವ ಎಲ್ಲರಿಗೂ ಆಸೆಗಳು ಇದ್ದೇ ಇರುತ್ತವೆ. ಚಿಕ್ಕಚಿಕ್ಕ ಆಸೆಗಳಿಂದ ಹಿಡಿದು, ಯಾರ ಬಳಿಯೂ ಹೇಳಿಕೊಳ್ಳಲು ಸಾಧ್ಯವಿಲ್ಲದ ಆಡಂಬರದ ಆಸೆಗಳವರೆಗೆ ಆಸೆಗಳ ಪಟ್ಟಿ ನೀಡಿ–ಕೊಂಡು ಹೋಗುತ್ತದೆ. ಆಸೆಗಳನ್ನು ಕ್ರಮಪಡಿಸಿಕೊಂಡವರೂ ಇದ್ದಾರೆ.

ಮೂಲಭೂತ ಅವಶ್ಯಕತೆಗಳು, ಸಾಮಾನ್ಯ ಅಗತ್ಯಗಳು, ಆಡಂಬರದ ಅಗತ್ಯಗಳು ಎಂದು ವಿವಿಧ ಬಗೆಯ ಆಸೆಗಳು ನಮಗಿರುತ್ತವೆ. ಕನಸುಗಳ ಮುಂದುವರಿಕೆಯೇ ಆಸೆಗಳು. ಕನಸುಗಳು ಹೇಗೆ ಮುಖ್ಯವೋ, ಅದೇ ರೀತಿಯಲ್ಲೇ ಆಸೆಗಳೂ ಮುಖ್ಯವಾದವು. ಅತ್ಯಾವಶ್ಯಕ ಅಗತ್ಯಗಳಿಗೆ ಸಂಬಂಧಿಸಿದ ಆಸೆಗಳು ಪ್ರಾಮಾಣಿಕವಾದವು. ಆದರೆ, ದುರಾಸೆ ಇರಕೂಡದು! ರಕ್ಷಣೆ, ನಾಶ ಈ ಎರಡು ಪದಗಳ ಅರ್ಥದ ಮೂಲವೂ ಆಸೆಯೇ.





# ಯಾವುದಕ್ಕೆ ಆಸೆ ಪಡಬೇಕು?

ಜೀವನ ನೀತಿಯ ಬಗ್ಗೆ ಉಪನ್ಯಾಸ ನೀಡಿದ ಒಬ್ಬ ಸನ್ಯಾಸಿ ಬಳಿ ಒಬ್ಬ ಯುವಕ, 'ನಾವು ಯಾವುದನ್ನು ಗಳಿಸಲು ಆಸೆ ಪಡಬೇಕು?' ಎಂದು ಪ್ರಶ್ನಿಸಿದ. ಸನ್ಯಾಸಿ ಅವನನ್ನು ದಿಟ್ಟಿಸಿ ನೋಡಿ, 'ನೀನು ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿರುತ್ತೀಯ. ನಿನ್ನ ಮುಂದೆ ಒಬ್ಬ ಸುಂದರವಾದ ಹುಡುಗಿ ನಡೆದುಕೊಂಡು ಬರುತ್ತಾಳೆ. ಆಗ ನೀನೇನು ಮಾಡುವೆ?' ಎಂದು ಪ್ರಶ್ನಿಸಿದ. ಅವಳ ಸೌಂದರ್ಯವನ್ನು ನೋಡಿ ಆಸ್ವಾದಿಸುತ್ತೇನೆ. ನಾನು ಮಾತ್ರವಲ್ಲ, ಯಾರೇ ಆಗಿದ್ದರೂ ಇದನ್ನೇ ತಾನೇ ಮಾಡುವುದು?' ಎಂದ ಯುವಕ. 'ಸರಿ, ಅಷ್ಟೊಂದು ಸಂತೋಷದಿಂದ ಆಸೆಪಟ್ಟು ನೋಡಿದ ಆ ಯುವತಿಯ ಮುಖ ಎಷ್ಟು ಸಮಯ ನಿನ್ನ ನೆನಪಿನಲ್ಲಿ ಉಳಿಯುತ್ತದೆ?' ಎಂದು ಕೇಳಿದ ಸನ್ಯಾಸಿ. 'ಮತ್ತೆ ಇನ್ನೊಬ್ಬ ಸುಂದರವಾದ ಯುವತಿ ಕಣ್ಣಿಗೆ ಬೀಳುವವರೆಗೆ, ಎಂದರೆ ಕೆಲವು ನಿಮಿಷಗಳು ನೆನಪಿನಲ್ಲಿರುತ್ತದೆ' ಎಂದ ಯುವಕ.

'ಸರಿ. ಇನ್ನೊಂದು ವಿಷಯವನ್ನು ಕೇಳುತ್ತೇನೆ. ಪಕ್ಕದ ನಗರದಲ್ಲಿರುವ ಒಬ್ಬ ವ್ಯಕ್ತಿಗೆ ಪ್ರಸಾದವನ್ನು ತೆಗೆದುಕೊಂಡು ಹೋಗಿ ಕೊಟ್ಟು ಬರುವಂತೆ ನಾನು ನಿನಗೆ ಹೇಳಿ ಅಲ್ಲಿಗೆ ಕಳಿಸುತ್ತೇನೆ. ನೀನೂ ಹೋಗುತ್ತೀಯಾ ಎಂದಿಟ್ಟುಕೋ. ಅಲ್ಲಿಗೆ ಹೋದ ನಂತರವಷ್ಟೇ ನಿನಗೆ ತಿಳಿಯುತ್ತದೆ, ಅವರು ಆ ನಗರದಲ್ಲೇ ಅತ್ಯಂತ ದೊಡ್ಡ ಕೋಟೀಶ್ವರ ಮನುಷ್ಯ ಎಂದು. ನೀನು ಅಲ್ಲಿಗೆ ಹೋದ ವಿಷಯವನ್ನು ಬಾಗಿಲ ಬಳಿ ಇರುವ ಕಾವಲುಗಾರನಿಗೆ ತಿಳಿಸುತ್ತೀಯೆ. ಆ ಕೋಟೀಶ್ವರನೇ ಹೊರಗೆ ಬಂದು ನಿನ್ನನ್ನು ಸ್ವಾಗತಿಸುತ್ತಾನೆ. ಪ್ರೀತಿಯಿಂದ ನಿನ್ನ ಬಳಿ ಮಾತನಾಡಿ, ನಿನ್ನ ಬಗ್ಗೆ ವಿಚಾರಿಸಿ, ಉಪಚರಿಸಿ ನಿನಗೆ ಆಹಾರವನ್ನೂ ಉಣಬಡಿಸುತ್ತಾರೆ. ಕಡೆಯಲ್ಲಿ ನಿನ್ನನ್ನು ಬಸ್ ನಿಲ್ದಾಣಕ್ಕೆ ತಲುಪಿಸುವಂತೆ ತಮ್ಮ ಕಾರಿನ ಡ್ರೈವರ್‌ಗೆ ತಿಳಿಸಿ ಅವರ ಕಾರಿನಲ್ಲೇ ನಿನ್ನನ್ನು ಬಸ್ ನಿಲ್ದಾಣಕ್ಕೆ ಕಳಿಸಿಕೊಡುತ್ತಾರೆ. ಹೀಗೆ ನಡೆದರೆ ಅವರನ್ನು ನೀನು ಎಷ್ಟು ಸಮಯ ನೆನಪಿನಲ್ಲಿಟ್ಟುಕೊಳ್ಳುವೆ?' ಎಂದು ಪ್ರಶ್ನಿಸಿದ ಸನ್ಯಾಸಿ. 'ನನ್ನ ಜೀವನವಿಡೀ ಅವರನ್ನು ನಾನು ನೆನಪಿನಲ್ಲಿಟ್ಟುಕೊಳ್ಳುತ್ತೇನೆ' ಎಂದ ಯುವಕ.

ಸನ್ಯಾಸಿ ಅವನಿಗೆ ಮಾತ್ರವೇ ಅಲ್ಲ, ಅಲ್ಲಿದ್ದವರೆಲ್ಲರಿಗೂ ತಿಳಿಯುವಂತೆ ಹೇಳಿದ... 'ಅಪರಿಮಿತ ಸೌಂದರ್ಯಕ್ಕಿಂತಲೂ ಒಳ್ಳೆಯ ಸಂಸ್ಕಾರವನ್ನು ಬೆಳೆಸಿಕೊಳ್ಳಲು ಆಸೆಪಡಿ. ಆ ಆಸೆಯೇ ಪರಿಶುದ್ಧವಾದುದು!'

# ಮನಸ್ಸು ಏನು ಮಾಡುತ್ತದೆ?

ಪ್ರೀತಿಗಾಗಿ ಹಂಬಲಿಸದವರು ಯಾರಾದರೂ ಇದ್ದಾರೆ-ಯೇ? ಒಳ್ಳೆಯ ಅಭ್ಯಾಸಗಳಿಗೆ ಆಸೆ ಪಡದವರೂ ಯಾರಾದರೂ ಇದ್ದಾರೆಯೇ? ಸಂತೋಷಕ್ಕಾಗಿ ಬಯಸದವರು ಇದ್ದಾರೆಯೇ? ಆದರೆ ಇವೆಲ್ಲವೂ 'ಆಸೆಗಳು' ಎನ್ನುವ ಪಟ್ಟಿಯಲ್ಲೇ ಸೇರುತ್ತವೆ. ಆಸೆಗಳೇ ಇಲ್ಲದ ಜೀವನದ ಇಲ್ಲವೇ ಇಲ್ಲ. ಅಂತಹ ಜೀವನ ಸಾಕಾಗಿ ಹೋಗುತ್ತದೆ.

ನಿಮ್ಮ ಮನಸ್ಸೂ ಮೆದುಳೂ ಸೇರಿ ರೂಪಿಸುವ ಬಯಕೆಗಳೇ 'ಆಸೆಗಳು' ಎನ್ನುವ ಪಟ್ಟಿಯಲ್ಲಿ ಸ್ಥಾನ ಪಡೆದುಕೊಳ್ಳುತ್ತವೆ. ಆ ಪಟ್ಟಿ ಯಾವಾಗಲೂ ದೀರ್ಘವಾಗುತ್ತಲೇ ಇರುತ್ತದೆ. ಪಕ್ವತೆ ಇರುವ ಮನಸ್ಸಿಗೆ ಅದನ್ನು ನಿಯಂತ್ರಿಸಿ ಅಗತ್ಯವಾದ ಆಸೆಗಳನ್ನು ಮಾತ್ರವೇ ಪೂರೈಸಿಕೊಂಡು, ಅನಗತ್ಯವಾದವುಗಳನ್ನು ತ್ಯಜಿಸುವುದು ಹೇಗೆಂದು ಚೆನ್ನಾಗಿ ಗೊತ್ತು. ನೆರವೇರದ ಆಸೆಗಳನ್ನು ಕುರಿತು ಚಿಂತಿಸದೇ ಇರುವುದಕ್ಕೂ ಅದಕ್ಕೆ ಗೊತ್ತು. ಇಂತಹ ಮನಸ್ಸನ್ನು ಹೊಂದಿರುವುದೇ ಪ್ರತಿಯೊಬ್ಬರ ಆಸೆಯೂ ಆಗಿರಬೇಕು.



RAMRAJ

ನಿಮ್ಮ ಮನೆಗೇ ಬರಬೇಕೇ?

# ಬಿಳುಪು
## ಚಂದಾದಾರರಾಗಿ!



'ಉನ್ನತವಾಧ ಭಾವನೆಗಳು ಈ ಜಗತ್ತಿನಾದ್ಯಂತ ಹೋಗಿ ಸೇರಬೇಕು' ಎನ್ನುವ ಉನ್ನತವಾದ ದೃಷ್ಟಿಯಿಂದ ಮಹತ್ವಪೂರ್ಣವಾದ ಲೇಖನಗಳನ್ನು ನಿರಂತರವಾಗಿ ಪ್ರಕಟಿಸುತ್ತಿದೆ 'ಬಿಳುಪು' ಮಾಸಿಕ ಸಂಚಿಕೆ. ಈ ತಿಂಗಳ ವಿಶೇಷ ಸಂಚಿಕೆಯು ಪ್ರತಿಯೊಂದು ಕುಟುಂಬದಲ್ಲೂ ರಕ್ಷಿಸಿಡಬೇಕಾದ ಬೊಕ್ಕಸವಾಗಿದೆ.

**ವಾರ್ಷಿಕ ಚಂದಾ ರೂ. 200**
**ದ್ವೈವಾರ್ಷಿಕ ಚಂದಾ ರೂ. 380**

ಚೆಕ್/ಡಿಡಿ ಮೂಲಕ ಹಣ ಸಂದಾಯ ಮಾಡಬಹುದು. **VENMAII** ಎನ್ನುವ ಹೆಸರಿನಲ್ಲಿ ಚೆಕ್/ಡಿಡಿ ಕಳಿಸಬಹುದು. ಹಿಂಭಾಗದಲ್ಲಿ ನಿಮ್ಮ ಹೆಸರು, ವಿಳಾಸ ಬರೆದಿರಬೇಕು.

ಇಲ್ಲವೇ

VENMAII ಬ್ಯಾಂಕ್ ಖಾತೆ (A/C No:1809135000000299 Karur Vysya Bank, Tirupur SR Nagar Branch - IFSC: KVBL0001809) ಗೆ ಹಣ ಸಂದಾಯ ಮಾಡಿ, ಅದರ ಸ್ವೀಕೃತಿ ಪತ್ರದ ನಕಲು ಪ್ರತಿಯನ್ನು ಕಳಿಸಿ ಕೊಡಬೇಕು.

- ಮನಿಯಾರ್ಡರ್‌ಗಳನ್ನು ಸ್ವೀಕರಿಸುವುದಿಲ್ಲ.
- ಎಲ್ಲಾ ರಾಮ್‌ರಾಜ್ ಷೋರೂಮ್‌ಗಳಲ್ಲೂ ಚಂದಾ ಕಟ್ಟಬಹುದು.


**ವಿಳಾಸ** : Bilupu
Ramraj V tower
10, Sengundapuram, Mangalam Road
Thirupur 641604.
Ph. 0421-4304106, 9842274137
email: venmaii@ramrajcotton.net


ಚಂದಾ ಸಲ್ಲಿಸಲೂ, ಒಟ್ಟಾಗಿ 'ಬಿಳುಪು' ಸಂಚಿಕೆಗಳನ್ನು ಕೊಳ್ಳಲೂ ಈ ಸಂಖ್ಯೆಯನ್ನು ಸಂಪರ್ಕಿಸಿ.

**ಫೋನ್ : 0421-4304106, 9842274137.**

## ಒಂದೇ ನಿಮಿಷದಲ್ಲಿ ಬಿಳುಪು ಚಂದಾದಾರರಾಗಬಹುದು!

ನಿಮ್ಮ ಚಂದಾ ಹಣವನ್ನು PhonePe G Pay Net transfer ಮೂಲಕವೂ ಸಲ್ಲಿಸಬಹುದು.

UPI ಪರಿವರ್ತನೆಯ ಮೂಲಕವೂ ಮೊಬೈಲ್ ಫೋನ್ ನಲ್ಲಿ ಬಿಳುಪು ಸಂಚಿಕೆಯ ಬ್ಯಾಂಕ್ ಖಾತೆಗೆ ಚಂದಾ ಹಣವನ್ನು ಸಲ್ಲಿಸಬಹುದು. ಬಿಳುಪು UPI id: kvbupiqr.75626@kvb

Bharat QR code ಅನುಕೂಲವಿರುವ ಮೊಬೈಲ್ ಬ್ಯಾಂಕಿಂಗ್ ಆಪ್ ಇರುವವರು, ಅದರಲ್ಲಿ ಇಲ್ಲಿರುವ ಬಿಳುಪು ಖಾತೆಯ QR code ಅನ್ನು ಸ್ಕ್ಯಾನ್ ಮಾಡಿ ಚಂದಾ ಸಲ್ಲಿಸಬಹುದು.

ಹಣ ಸಂದಾಯ ಮಾಡಿರುವುದಕ್ಕೆ ಸಂಬಂಧಿಸಿದ ಬ್ಯಾಂಕಿನ ಮಾಹಿತಿಯನ್ನು Forward ಮಾಡಿರಿ.

ಜೊತೆಗೆ ನಿಮ್ಮ ಪೂರ್ಣ ವಿಳಾಸವನ್ನು ದೂರವಾಣಿ ಸಂಖ್ಯೆಯ ಜೊತೆಗೆ ವಾಟ್ಸ್ ಆಪ್ ಮಾಡಿ. ದೂರವಾಣಿ ಸಂಖ್ಯೆ 98422 74137.

**ಬ್ಯಾಂಕ್ ಖಾತೆಯ ವಿವರ Venmaii**
**A/C No: 1809135000000299**
**Karur Vysya Bank,Tirupur SR Nagar Branch**
**IFSC Code: KVBL0001809.**


## ವಿದ್ಯಾರ್ಥಿಗಳಿಗೆ ವಿಶೇಷ ರಿಯಾಯಿತಿ



(ಆರನೇ ತರಗತಿಯ ನಂತರ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಮಾತ್ರ ಈ ರಿಯಾಯಿತಿ ಲಭ್ಯ. ಚಂದಾ ಹಣ ಪಾವತಿಸುವಾಗ, ವಿದ್ಯಾರ್ಥಿಗಳು ತಮ್ಮ ಗುರುತಿನ ಚೀಟಿಯ ಪ್ರತಿಯನ್ನು ಲಗತ್ತಿಸಬೇಕು).

| ವಾರ್ಷಿಕ ಚಂದಾ | ದ್ವೈವಾರ್ಷಿಕ ಚಂದಾ |
|---|---|
| ~~ರೂ.200~~ ರೂ.125 ಮಾತ್ರ | ~~ರೂ.380~~ ರೂ.250 ಮಾತ್ರ |

## ಹಿರಿಯ ನಾಗರಿಕರಿಗೆ ವಿಶೇಷ ರಿಯಾಯಿತಿ




(60 ವರ್ಷಗಳಿಗಿಂತ ಮೇಲ್ಪಟ್ಟವರು ಮಾತ್ರ ಈ ರಿಯಾಯಿತಿಯನ್ನು ಪಡೆದುಕೊಳ್ಳಬಹುದು. ತಾವು ಹುಟ್ಟಿದ ದಿನಾಂಕದ ಮಾಹಿತಿ ಇರುವ ಆಧಾರ್ ಕಾರ್ಡ್‌ನ ನಕಲನ್ನು ಇದರೊಂದಿಗೆ ಲಗತ್ತಿಸಬೇಕು).

| ವಾರ್ಷಿಕ ಚಂದಾ | ದ್ವೈವಾರ್ಷಿಕ ಚಂದಾ |
|---|---|
| ~~ರೂ.200~~ ರೂ.125 ಮಾತ್ರ | ~~ರೂ.380~~ ರೂ.250 ಮಾತ್ರ |

**ರಾಮ್‌ರಾಜ್ ಷೋರೂಂಗಳಲ್ಲಿ ರೂ. 10,000ಕ್ಕಿಂತ ಹೆಚ್ಚಾಗಿ ಕೊಳ್ಳುವವರಿಗೆ ಒಂದು ವರ್ಷದ ಚಂದಾ ಉಚಿತ.**




Owned, Published by K.R. NAGARAJAN, Published from 10, Sengunthapuram Mangalam Road, TIRUPUR - 641 604 &
Printed by B. ASHOK KUMAR at RATHNA OFFSET PRINTERS, 40, Peters Road, Royapettah, Chennai - 600 014. Editor : T.J. GNANAVEL




SUKRA® SUPER FINE COTTON VESTS | RISE-UP® Premium Banians | ROMEX® BANIANS | BRIEF | TRUNKS | COMPACT® PREMIUM COTTON RIB VESTS | Breeze® Eye Let Vests | WinStripe® STRIPED BANIANS | ARCHERY® Gym Vest | ACOSTE® BANIANS | BRIEF | TRUNKS

suriya® RICH COTTON BRIEF | udaya® RICH COTTON BRIEF | minar® FINE COTTON BRIEF | merc® MERCERISED BRIEF | target® FINE TRUNKS | softex® FINE TRUNKS | imaxs® RIB TRUNKS | ARROW® RIB TRUNKS | VINTRACK® FINE TRUNKS

Available @ Ramraj Showrooms & All leading textile shops | Shop online @ www.ramrajcotton.in

Bilupu Monthly - Postal Registration No. TN/TRU/30/2024-26. Registered with the Registrar of Newspapers for India under No. TNKAN/2017/74564. Day of Publishing: 01-07-2024 Posted at Tirupur BPC on 5th of every month.

